CC-O. In Public Domain. Digitized by eGangotri

ಪುರುಷ ಸೂಕ್ತ

ಸತ್ಯಕಾಮ



Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರುಷಸೂಕ್ತ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರುಷಸೂಕ್ತ

ಸತ್ಯಕಾಮ

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

Sri Vidyabharathi Book Centre, Sringeri

CC-O. In Public Domain. Digitized by eGangotri

Copyright 1980 © Author

ಬೆಲೆ ರೂ. 6-00

ಮುದ್ರಣ : 1980 ಪ್ರಕಾಶಕರು: ಪಿ. ಎನ್. ಕಾಮತ್ ಐಬಿಎಚ್ ಪ್ರಕಾಶನ
ಐದನೆಯ ಮುಖ್ಯರಸ್ತೆ ಗಾಂಧಿನಗರ ಬೆಂಗಳೂರು 560 009 ಮುದ್ರಕರು :
ಎಚ್. ಎಸ್. ಎನ್. [illegible] ರಾಮಯ್ಯ
ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು 560 504

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆಂದರೇನು ಆಚಾರ್ಯರೇ ?

"ಸಹಸ್ರ ಶೀರ್ಷಾಃ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್"

ಆಚಾರ್ಯರ ಬಾಯಿಯಿಂದ ಉಗುಳಿನೊಡನೆ ರಭಸವಾಗಿ ಹೊರಡುತ್ತಿರುವ ಮಂತ್ರ !

ಕೈ ಬಾಯಿಗಳಿಗೂ ಅನಿವಾರ್ಯ ಕರ್ಮಯೋಗ. ತಟ್ಟೆಯಲ್ಲಿ ನೆನೆಯುತ್ತಿದ್ದ ದೇವರ ಮೇಲೆ ಮತ್ತಷ್ಟು ತಣ್ಣೀರು ಹುಯ್ದರು.

ದೇವರಿಗೆ ಜೀವನದ ಸುತ್ತು ಬಂದಿತ್ತು.

ಬಹುಕಾಲದಿಂದ ಆತ ಉದಾಸೀನನೇ ಆಗಿದ್ದಾನೆ.

ಇಲ್ಲದಿದ್ದರೆ ಚಳಿ ಹೊತ್ತಿನಲ್ಲಿ ಈ ಆಚಾರಿ ನಡೆಸಿದ ಅತ್ಯಾಚಾರವನ್ನು ಆತ ಸಹಿಸುವ ಅಗತ್ಯವಿರಲಿಲ್ಲ.

ಪುರಾಣ ಕಾಲವೇ ಆಗಿದ್ದರೆ ಈತನ ಗಲಾಟೆ ನೋಡಬೇಕಿತ್ತು. ಅಷ್ಟಿಷ್ಟು ಅನ್ಯಾಯಕ್ಕೆ ಕಂಬ ಮುರಿದೊ, ಮುಗಿಲು ಹರಿದೋ ಓಡಿ ಬಂದು ಬಿಡುತ್ತಿದ್ದ.

ಹಂದಿಯಾಗಿ ಬರಲೂ ಈತ ಹಿಂದು ಮುಂದು ನೋಡುತ್ತಿರಲಿಲ್ಲ.

ಇದೆಲ್ಲ ಜನಸಂಗ್ರಹಕ್ಕಾಗಿ, ಲೋಕಸಂಗ್ರಹಕ್ಕಾಗಿ ತನ್ನ ಮೇಲೆ ಆಪತ್ತು ಬಂದಾಗ,

ತನಗೆ ಸಂಪತ್ತು ಬರುವಾಗ.

ಒಬ್ಬ ಮಂತ್ರಿ ಮಾಡುವಷ್ಟು ಪರಾಕ್ರಮವನ್ನು ದೇವರು ಮಾಡಿದ್ದರೆ ಆತನ ಸ್ಥಾನ, ಮಾನ ಸುರಕ್ಷಿತವಾಗಿ ಉಳಿಯುಬಹುದಿತ್ತು. ಆದರೆ ಉದಾಸೀನನಾದ ಅವರ ಸ್ವಭಾವ ಬಿಡಿಸಲು ಯಾರಿಗೆ ಸಾಧ್ಯ ?

ಇದೇ ಊರಿನ ಅಮೃತೇಶ್ವರ ಲಿಂಗಕ್ಕೆ ನಿತ್ಯ ನಾಯಿಯದೇ ಅಭಿಷೇಕ.

ಹಲವು ದಿನಗಳ ಹಿಂದೆ ವಿಜಯನಗರದ ರಾಯರು ಈ ದೇವರ ಅಭಿಷೇಕ, ಪೂಜೆಗಾಗಿ ದೊಡ್ಡ ದತ್ತಿಕೊಟ್ಟಿದ್ದರು.

ಹೌದು ಆ ಸತ್ಕುಲ ಪ್ರಸೂತ ಈರಯ್ಯ.

ಹರಿಜನ ಉದ್ಧಾರಕ್ಕಾಗಿ ರಾತ್ರಿಯೆಲ್ಲ ಕೇರಿಯಲ್ಲಿರುತ್ತಾನೆ. ಹಗಲೋ ತ್ರಿಸುಪರ್ಣ ಪಾರಾಯಣ. ಈ ನಿರುಪದ್ರವಿಯಾದ ದೇವರಿಂದ ಅವನಿಗೇನು ತೊಂದರೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಪೂಜೆಗಾಗಿ ಇದ್ದ ಹೊಲವನ್ನು ತೀರ್ಥಕ್ಕಾಗಿ ಮಾರಿದ. ಅವನಿಗೀಗ ಅನೇಕ ಕಾರ್ಯಕ್ರಮಗಳಲ್ಲಿ ಪೂಜೆ...

ಅಭಿಷೇಕ ಪೂಜೆ ಯಾರು ಮಾಡಬೇಕು ?

ಏನನ್ನು ಬಿಟ್ಟೀ ಮಾಡುವ ಕಾಲ ಇದಲ್ಲ ಅಂದಾಗ.

ಪೂಜೆ ಮಾಡಿಯಾರು ಸತ್ತಾರು ?

ನಾಯಿಗೆ...

ಆ ನಾಯಿ ಮಾತ್ರವಲ್ಲ, ಅಭಿಷೇಕ ಮಾಡುವ ಎಲ್ಲ ನಾಯಿಗಳೂ ಶೌನಕಾದಿ ಋಷಿಗಳ ಅವತಾರಗಳೇ ಏನೋ ಮತ್ತೆ !

ಈಗ ಆಚಾರ್ಯರ ಕೈಯಲ್ಲಿ ಸಿಕ್ಕ ಆ ದೇವರ ಗತಿ ಏನು ? ಬರಿ ತಣ್ಣೀರು ನಡುಗುವ ಕೀಟಲೆ ಮಾತ್ರವಲ್ಲ.

ಆಚಾರ್ಯರ ಮುಖದ ಈರುಳ್ಳಿಯ ಪ್ರಚಂಡವಾಸನೆಯೊಂದಿಗೆ ಉಗುಳಿನ ಶಾವರ್ ಬಾತ್ ಬೇರೆ.

ಜಗುಲಿಯ ಮೇಲೆ ಆಚಾರ್ಯರು ವಿರಾಜಮಾನರಾಗಿದ್ದಾಗಲೆ ಕೆಳಗೆ ತಗ್ಗಿನಲ್ಲೊಂದು ಋಣಿ ಋಣಿ ಕೆಂಪು ಜೀವ.

ಕುದಿಸುವ ಕರ್ಮಯೋಗದ ಕುದಿಯುವ ಹಸಿಜೀವ.

ಒಲೆಯಲ್ಲಿ ತಣ್ಣಗೆ ಕುಳಿತ ಅಗ್ನಿದೇವನನ್ನು ಎಚ್ಚರಿಸಲು ಕಟ್ಟಿಗೆ ತಿವಿದಳು.

ಒಲೆ ಹೊತ್ತಿಸುವುದೂ ಪೂಜೆ ಅಲ್ಲವೆ ? ಇವಳ ತಿವಿತದಿಂದ ಅಗ್ನಿದೇವ ಅಲುಗಾಡಲಿಲ್ಲ. ಅವನೂ ಉದಾಸೀನನೇ ಅಲ್ಲವೆ ?

ಇವಳೂ ಹೆಂಗಸು, ಜಾಣಳು. ರಾಜಕೀಯ ಗೊತ್ತಿದ್ದವಳೇ ಅನ್ನಿ... ದೇವರ ಮೇಲೆ ದೇವರನ್ನು ಅಟ್ಟಿದಳು.

ಅಗ್ನಿದೇವರ ಮೇಲೆ ವಾಯುದೇವರು...

ವಾಯುದೇವನ ಒದ್ದಾಟ, ಅಗ್ನಿದೇವನ ಉದಾಸೀನತೆಯನ್ನು ಕಡಿಮೆ ಮಾಡಲಿಲ್ಲ.

ಬೇಸತ್ತ ಜೀವದ ಕಣ್ಣಲ್ಲಿ ಜಲದೇವತೆಯ ಸಾಕ್ಷಾತ್ಕಾರ.

ಜಗತ್ತಿನಲ್ಲಿ ಪೂಜೆ ಅಲ್ಲದೆ ಏನು ನಡೆದಿದೆ ? ಎಲ್ಲವೂ ಪೂಜೆಯೇ...

ಈಗ ಇಲ್ಲಿ ಎರಡೂ ಕಡೆಗೆ ದೈವೀಕಲಾಪಗಳು. ತಗ್ಗಿನಲ್ಲಿ ನಡೆದ ಕಾರ್ಯಕಲಾಪಗಳ ಮೇಲೆ ಆಚಾರ್ಯರ ದೃಷ್ಟಿ ! ಪಾಕ ವಿಷಯದಲ್ಲಿ ಕಣ್ಣೆಡದೆ ಹೋದರೆ—

Sri Vidyabharathi Book Centre, Sringeri

CC-O. In Public Domain. Digitized by eGangotri

ಪೂರ್ವಭಾವಿಯಾದ ಎಚ್ಚರ ತೆಗೆದುಕೊಳ್ಳದಿದ್ದರೆ ತಮಗೆ ಕ್ಷೇಮವಲ್ಲವೆಂಬುದು ಆಚಾರ್ಯರ ಅನುಭವ.

ತಗ್ಗಿನಲ್ಲಿ ಆಚಾರ್ಯರಿಗೆ—

ಪಾಕವೂ ಇತ್ತು,

ವಿಷಯವೂ....

ಆಚಾರ್ಯರು ಅನಿಚ್ಛೆಯಿಂದ ನೀರು ಹುಯ್ಯುತ್ತಲೇ ಇದ್ದರು.

ಜಲಪ್ರವಾಹದ ರಭಸ ತಾಳಲಾರದೆ ದೊಡ್ಡ ದೇವರೊಬ್ಬರು ಜೋಲಿ ಹೋಗಿಬಿದ್ದರು.

ಪಾಕ ಚಟುವಟಿಕೆಗಳತ್ತ ಕಣ್ಣಿಟ್ಟ ಆಚಾರ್ಯರಿಗೆ ಈ ದೇವರ ಅಧಃಪತನ ದೊಡ್ಡದೆನ್ನಿಸದ್ದರಿಂದ ಲಕ್ಷ್ಯಕ್ಕೆ ಬರದೆ ಹೋಗಿತ್ತು.

ದೇವರು ಬಿಡುಗಣ್ಣಿನವನಾದರೇನಾಯಿತು. ಸುತ್ತಲೂ ಹಬ್ಬಿದ ಕತ್ತಲೆ ಸಾಕಾಗಿತ್ತು.

ಏನು ನಡೆದಿದೆ ಎಂಬುದು ತಿಳಿಯದೆ ಇತ್ತು.

ಹಲವು ವರುಷ ನಿತ್ಯವೂ ಈ ದೇವರ ಸಂಪರ್ಕದಲ್ಲಿದ್ದ ಆಚಾರ್ಯರಿಗೆ

ದೇವರ ಸ್ವಭಾವ ಗೊತ್ತಿಲ್ಲವೆ ?

ಆತ ಆಚಾರ್ಯರ ಖಾಸಗಿ ವ್ಯವಹಾರದಲ್ಲಿ ಎಂದೂ ಕೈಹಾಕಿದವನಲ್ಲ. ಸ್ವತಃ ಆಚಾರ್ಯರು ಅದಕ್ಕೆ ಅವಕಾಶಕೊಡುವವರೂ ಅಲ್ಲ.

ಇವರ ಕೈಯಿಂದಲೆ ಪತನ ಹೊಂದಿದ್ದರೂ ಯಾವ ಪ್ರತಿಕ್ರಿಯೆಯನ್ನೂ ತೋರಿಸದೆ ಇದ್ದ ದೇವರು.

ಬಿದ್ದರೂ ಕೂಗಾಡುವವನಲ್ಲವೆಂಬುದು ಆಚಾರ್ಯರಿಗೆ ಗೊತ್ತಿದ್ದುದರಿಂದಲೆ ಅವರ ವ್ಯವಹಾರ ಸಾಗಿತ್ತು.

ಆಚಾರ್ಯರಿಗೆ ದೇವರ ಬಗ್ಗೆ ಸರಿಯಾದ ತಿಳಿವಳಿಕೆ ಇತ್ತು; ಮಾತ್ರವಲ್ಲ ಅನೇಕ ವಿಷಯದಲ್ಲಿ ಅವರೂ ದೇವರೆ.

ಬ್ರಾಹ್ಮಣರು ಭೂಸುರರೆ ಅಲ್ಲವೆ ?

ಕೆಂಪುಜೀವದ ತೊಳಲಾಟ ನೋಡಲಾರದೆ ಕಟ್ಟಿಗೆಯ ಸಂದಿನೊಳಗಿಂದ ಅಗ್ನಿದೇವರು ಪ್ರತ್ಯಕ್ಷರಾದರು.

ಭುಗಿಲ್ ಎಂದು ಅಗ್ನಿದೇವರ—ಸಾಕ್ಷಾತ್ಕಾರವಾದುದೇ ತಡ ಆಚಾರ್ಯರ ಮಂತ್ರಕ್ಕೆ ಬ್ರೇಕ್.

ಹರಿದ ಮ[illegible] ನುಂಗಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ನೆನಪಿನ ಉಗುಳು ಹಚ್ಚಿ ಮಂತ್ರದದಾರ ಬೆಸೆದೇ ಬೆಸೆದರು; ಹತ್ತದೆ ಹೋಯಿತು.

ಮತ್ತೆ ಅದೇ ಹಂಜ, ಅದೇದಾರ....

"ಸಹಸ್ರsss"

ಆರಂಭವಾಯಿತು.

"ಸಹಸ್ರಾರ್ಷಃ........"

ಮುಂದುವರಿದಿತ್ತು.

ಕೆಂಪು ಜೀವದ ಬತ್ತಲೆ ಕಿವಿಯ ಮೇಲೆ ಆಚಾರ್ಯರ ಮಂತ್ರದ ದಾಳಿ.

ಕಿವಿ ದಾಳಿಯನ್ನು ತಡೆಗಟ್ಟದೆ, ಎದುರಿಸದೆ ಮಂತ್ರವಶವಾಗಿತ್ತು.

ಪರವಶವಾದ ಕಿವಿಯನ್ನು ಕೈಯಲ್ಲಿ ಹಿಡಿದು ತಿರುವುತ್ತಿತ್ತು ಮಂತ್ರ...

ಮಂತ್ರದ ಕೈಯಲ್ಲಿ ಕಿವಿ...

ಕೆಂಪುಕೋಟೆಯಲ್ಲಿ ಇದು ಅದ್ಭುತ ಪ್ರಸಂಗ. ಈ ಮಂತ್ರ ನಿತ್ಯ ಪ್ರಸಾರವಾಗುವ ರೇಡಿಯೋ !

ಆದರೆ ತನ್ನ ಕೆಂಪು ಉಕ್ಕಿನ ತೆರೆಯ ಮರೆಗಿರುವ ಕಿವಿಯ ಮೇಲೆ ಎಂದೂ ದಾಳಿ ಮಾಡಲಿಲ್ಲ.

ಈ ಬಡಪಾಯಿ ಮಂತ್ರ ಏಕೆ ?

ಇದಕ್ಕಿಂತ ಅರ್ಥವತ್ತಾದ ಅನೇಕ ಶಬ್ದಗಳು ತನ್ನ ಕಿವಿಯ ಸುತ್ತ ಸೈನಿಕ ಚಟುವಟಿಕೆ ನಡೆಸಿದ್ದರೂ

ಎಲ್ಲ ನಿರರ್ಥಕವಾಗಿತ್ತು.

ಈ ಮಂತ್ರದ ದಾಳಿಯೂ ಇಂದಿನದಲ್ಲ, ಹಲವು ದಿನಗಳಿಂದ ತನ್ನಷ್ಟಕ್ಕೆ ತಾನೇ ವಿಫಲವಾದ ಯತ್ನನಡೆಸಿತ್ತು.

ಇಂದೇನಾಯಿತು. ಕೆಂಪು ಜೀವ ಆತ್ಮ ನಿರೀಕ್ಷಣೆ ಮಾಡಿಕೊಂಡಿತು. ಯಾವ ಅಸ್ತವ್ಯಸ್ತತೆಯೂ ಇಲ್ಲ.

ನಿತ್ಯ ನಡೆದದ್ದು ಗೊತ್ತಾಗುವುದಿಲ್ಲ. ಒಂದು ದಿನ ಬದಲಾವಣೆ ಸ್ಫೋಟಗೊಂಡಾಗ ನಾವೇ ಚಕಿತರಾಗುತ್ತೇವೆ.

ಎಂದೂ ಇಲ್ಲದ ಕೋಟೆಗೆ ಇಂದೇಕೆ ಬಿರುಕು ?

ಒಲೆಯಲ್ಲಿ ಬೆಂಕಿ ಉರಿಯುತ್ತಿತ್ತು.

ಹಸಿಕಟ್ಟಿಗೆ ಹೊತ್ತಿದರೆ ಆರುವುದು ಕಷ್ಟ ಹೊಟ್ಟೆಯಲ್ಲಿ.

ಆಚಾರ್ಯರಿಗೆ [illegible]

Sri Vidyabharathi Book Centre, Sringeri

CC-O. In Public Domain. Digitized by eGangotri

ಬಾಯಿಯಲ್ಲಿ........

"ಅತೋಜ್ಯಾಯಾಂಶ್ಚ ಪುರುಷಃ..."

ಇಬ್ಬರ ಮುಗಿಲಲ್ಲೂ ಮೋಡಗಳು.

ಮೈಯ ಮಣ್ಣಿನಲ್ಲಿ ಅಶಕ್ತ ಚಟುವಟಿಕೆಗಳು.

ಕೆಂಪುಜೀವ ತೊಳಲಾಟ ತಡೆಯದೆ

"ಹಾಗೆಂದರೇನು ಆಚಾರ್ಯರೆ ?"

ಆಚಾರ್ಯರ ಎದೆಗೆ ಗುಂಡು...

ಹೂವಿನ ಚಂಡೂ....

ಗಂಗಾಪ್ರವಾಹದಲ್ಲಿ ಬಹುದೂರ ಕೊಚ್ಚಿಹೋದ ಆಚಾರ್ಯರನ್ನು ಕತ್ತು ಹಿಡಿದು ಮುಳುಗಿಸಿದಂತಾಯಿತು.

ಪರತಂತ್ರರಾದ ಅವರಿಗೆ ಮತ್ತೆ ಮಂತ್ರದ ಆಸೆ ತಪ್ಪಿತ್ತು.

ಹೆಣ್ಣು ಜೀವ, ತಗ್ಗಿನಲ್ಲಿರಲಿ, ಏರಿನಲ್ಲಿರಲಿ ತಮ್ಮ ಜತೆ ಮಾತನಾಡ ಲಿಕ್ಕಿಲ್ಲವೆಂದುಕೊಂಡ ಅವರಿಗೆ ಅಪೂರ್ವಯೋಗ—

ಹಾಗೆಂದರೇನು ?

ಎಂದು ಕೇಳಬೇಕೆ ? ಮೊದಲಮಾತು ಅಥವಾ ಹೆಣ್ಣಿನಿಂದ ಅನಿರೀಕ್ಷಿತ ವಾಗಿ ಬಂದದ್ದು.

ಪ್ರಥಮಗ್ರಾಸೇ...

ಆಚಾರ್ಯರಿಗೆ ಮೈಮೇಲೆ ಸ್ಮೃತಿಬಂತು.

ಅವಳು ಮಂತ್ರಕ್ಕೆ ಅರ್ಥಕೇಳಿದಳೆಂದು ತಿಳಿದು ಕಕ್ಕಾವಿಕ್ಕಿಯಾದರು.

ನಾಲಗೆಯೊಳಗಿಂದ ಮಂತ್ರವೂ ಜಾರಿ ಮುಖ ಬೆವರ ಹತ್ತಿತು. ಗಾಬರಿ ! ಹಸೀ ಗಾಬರಿ.

ಕುರ್ಚಿಕಳೆದುಕೊಂಡ ಮಂತ್ರಿಗಿಂತಲೂ ತಬ್ಬಿಬ್ಬು.

ಗಾಬರಿಯ ರಾಡಿಯಲ್ಲಿ ಹೊರಳಾಡಿದ್ದ ಆಚಾರ್ಯರು ತೀರ್ಥಸ್ನಾನ ಮಾಡಿ ಹಿಗ್ಗಿದ್ದಾರೆ.

ಜೀವದ ಆಶೆ—

ಮಂತ್ರಾರ್ಥಬೇಕು ಎಂದು.

ತನ್ನನ್ನು ಕೇಳಿದ್ದಾಳೆ.

ಏನನ್ನೋ ಆಗಲಿ ಕೇಳಿದ್ದಾಳಲ್ಲ ಸಾಕು.

Sri Vidyabharathi Book Centre, Sringeri

ಶುಭ ಸಮಾಚಾರಕ್ಕಾಗಿ ಆಚಾರ್ಯರು ಉಬ್ಬಿದರು.

CC-O. In Public Domain. Digitized by eGangotri

ರಾಜ್ಯದಿಂದ ಕೇಂದ್ರಕ್ಕೆ ಪ್ರಮೋಶನ್

ಏನು—?

"ಮಂತ್ರಾರ್ಥ ?"

ಆಚಾರ್ಯರ ಕಿವಿಯ ಮೇಲೆ ಬಿದ್ದ ಕಾದು ಕರಗಿದ ಸೀಸ.

ಆ ಬಾಯಿ ತಮ್ಮ ಕಿವಿ ಮುಚ್ಚಿದ ಆನಂದವನ್ನೂ ಅವರು ಲಘುವಾಗಿ ಕಾಣಲು ಸಿದ್ಧರಿಲ್ಲ.

ಅವಳು ಕೇಳಿದ್ದು—

"ಹಾಗೆಂದರೇನು ಆಚಾರ್ಯರೆ ?"

ಆಚಾರ್ಯರು ದಟ್ಟದರಿದ್ರರಾದರೂ ಮಂತ್ರಾರ್ಥಮಂಜರಿಯನ್ನು ಅವಳಿಗಿಡಿಸಬೇಕೆಂದರು.

ಮಂತ್ರಾರ್ಥವನ್ನು ತಲೆ ಹೋದರೂ ಕೊಂಡು ತರಬೇಕೆಂದಿದ್ದರು.

ಆದು ಬಹಳ ತುಟ್ಟಿ ; ಬಡತನ ಹೆಚ್ಚು. ಅಸಾಧ್ಯ ಎನ್ನಿಸಿತು.

ತ್ರಟಿತ್ ಕೋಟಿ ನಿಭಕಾಯ ಜಗನ್ನಾಥನ ಎದುರಿದ್ದ ಕತ್ತಲೆಯಲ್ಲಿ ಆಚಾರ್ಯರ ಮುಖ ಕಪ್ಪಿಟ್ಟಿತು.

ಇದೆಲ್ಲ ಪಾಕ ಗಲಭೆಯಲ್ಲಿದ್ದ ಕೆಂಪು ಜೀವಕ್ಕೆ ಗೊತ್ತಾಯಿತೆ ?

ಇಲ್ಲ. ಅವಳಿಗೆ ತನ್ನ ದಾರಿದ್ರ್ಯ ತಿಳಿಯಲಿಲ್ಲ ಎನ್ನುವುದೇ ಆಚಾರ್ಯರ ಶ್ರೀಮಂತಿಕೆ.

ಇದರರ್ಥ....

"ಹೀಗೆಂದರೇನು ಆಚಾರ್ಯರೆ ?"

ಅವಳ ಮುಕ್ತಾಫಲಗಳನ್ನು ಆಚಾರ್ಯರು ಕೊರಳಲ್ಲಿ ಮಾಲೆಯಾಗಿ ಧರಿಸಿದ್ದರು.

ಮತ್ತೊಮ್ಮೆ ಕಣ್ಣುಬಿಟ್ಟು ನೋಡಿದರು.

ಕೆಂಪು ಕೋಟೆ.

ಎಷ್ಟಾದರೂ ದುರ್ಗಮ...

ಆಚಾರ್ಯರು ಇದಕ್ಕೂ ಪೂರ್ವದ ಅನೇಕ ಸಂದರ್ಭಗಳಲ್ಲಿ ಉತ್ತರ ಕುಮಾರರಾದವರು.

ಅವಳ ಪ್ರಶ್ನೆಗೆ

ಉತ್ತರವಿಲ್ಲದೆ ನಾಲಗೆ ಒಣಗಿತು.

ಮಂತ್ರ ತನಗೆ ಬಂತು.

Sri Vidyabharathi Book Centre, Sringeri

ಅರ್ಥ ಏಕೆ ಬರಲಿಲ್ಲ ?

 CC-O. In Public Domain. Digitized by eGangotri

ಅರ್ಥವೂ ಮಂತ್ರದಿಂದ ಬಂತು; ಬರಲಿದೆ.

ಮಂತ್ರ ಹೇಳಿದವ ಅರ್ಥ ಹೇಳಲಿಲ್ಲವೇಕೆ ?

ಮಂತ್ರ ಹೇಳಿದವರು ಯಾರು ?

ನೆನಪಿನ ರಾಡಿಯಲ್ಲಿ ಹೊರಳಾಡಿತು ಆಚಾರ್ಯರ ಮನಸ್ಸಿನ ಹಂದಿ.

ವರಾಹಲಾಂಛನರಾದ ಆಚಾರ್ಯರು ಮನಸ್ಸಿನಿಂದ ವೇದವನ್ನು ಉದ್ಧರಿಸಿದ್ದರು.

ನಮ್ಮ ಅಪ್ಪ ಮಂತ್ರ ಹೇಳಿದ.

ಅರ್ಥ ಏಕೆ ಹೇಳಲಿಲ್ಲ ?

ಆತ ಹೇಳದೆ ಹೋಗಲಿ, ಈ ಮಗ ಕೇಳಬಾರದೆ ?

ಇದಕ್ಕೆ ಅರ್ಥವೊಂದು ಇರಬೇಕು, ಇದ್ದರೆ ಅದೇನು ? ಎನ್ನುವ ತೊಡಕೇ ಏಳಲಿಲ್ಲ. ಈತ ಮಂತ್ರಕ್ಕೆ ತೊಡಕಿಸಿದ್ದು ತಲೆಯಾಗಿದ್ದರೆ ಆ ಮಾತು ಹೊಳೆಯಬಹುದಿತ್ತು. ಬರಿ ಜಿಹ್ವಾ ಚಾಪಲ್ಯ; ಈತ ಮಂತ್ರ ಕಲಿತದ್ದು.

ಅರ್ಥ ಅಪ್ಪನಿಗೆ ಗೊತ್ತಿತ್ತೆ ?

ನಮ್ಮ ಅಪ್ಪ ಪ್ರಾಮಾಣಿಕ; ತನ್ನಲಿದ್ದುದನ್ನು ನನಗೆ ಪೂರ್ತಿಕೊಟ್ಟು ವಂಚಿಸಲಿಲ್ಲ. ಅವನು ಅವರಪ್ಪನಿಂದ ಪಡೆದುಕೊಂಡದ್ದೂ ಅಷ್ಟೇ ಇರಬೇಕು.

ಅವರಪ್ಪ ಅಲ್ಲಿಂದ ಹಿಂದೆ ಅವರ ಅಪ್ಪ...ಹೀಗೇ ಹಿಂದೆ ಹೋದರೆ.

ಹಲವು ಅಪ್ಪಂದಿರಿಗೂ ವೇದಾರ್ಥ ಗೊತ್ತಾಗಲೇ ಇಲ್ಲ. ಈ ಅಜ್ಞಾನಿಗಳಾದ ಅಪ್ಪಂದಿರ ತೀರ್ಮಾನವೇ—

"ವೇದಕ್ಕೆ ಅರ್ಥವಿಲ್ಲ ಬರಿ ಶಬ್ದ ಇದೆ..." ಎಂಬುದಿರಬೇಕು.

ಈಗ ಆಚಾರ್ಯರಿಗೆ ಬಂದ ಗೋಳು ಮೊಳಕಾಲ ಕೆಳಗೆ ಬುದ್ಧಿ ಇರುವ ಒಂದು ಜೀವಕ್ಕೆ ಅರ್ಥಹೇಳುವುದು ಆಗಲಿಲ್ಲ ಎಂದರೆ...

ಎಂತಹ ಅಪಾರ್ಥ ಜೀವನಕ್ಕೆ ಬಹುಮತ ಕಳೆದುಕೊಂಡರೂ ಅಧಿಕಾರ ಬಿಡದ ಮಂತ್ರಿ ಆಚಾರ್ಯ !

ಆಚಾರ್ಯ ವಾಮ ಪಕ್ಷದಲ್ಲಿ ಹಸ್ತಕ್ಷೇಪ ಮಾಡಿದ.

ಕೈಗೆ ಬಂದದ್ದು ಗಂಟೆ.

ಎತ್ತಿ ಅಲುಗಾಡಿಸಿದರು.

ಅಧಿಕಾರದ ಬೆಂಬಲಕ್ಕಿರುವ ಪತ್ರಿಕೆಗಿಂತಲೂ ಗಂಟೆ ಪೂಜಾಪ್ರಪಂಚದಲ್ಲಿ ಕಡಿಮೆಯಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅದು ಮಲಗಿದ್ದ ದೇವರಿಗೆ ಜೋಗುಳ.
ಎಚ್ಚರಿದ್ದ ಭಕ್ತರಿಗೆ ಮುನ್ನೆಚ್ಚರಿಕೆ....
ಗಂಟೆಯ ಕೆಲಸ ಏನು ?
ತಾನು ಎದ್ದು ಇನ್ನೊಬ್ಬರನ್ನು ಎಚ್ಚರಿಸುವುದು.
ಗಂಟೆಯಿಂದ ದೇವರೆದ್ದರೋ ಇಲ್ಲವೊ ಗೊತ್ತಿಲ್ಲ.
ಆಚಾರ್ಯರು ತಾವು ಮಲಗಿಲ್ಲವೆಂಬುದನ್ನು ಖಚಿತಪಡಿಸಿಕೊಂಡರು.
ಗಂಟೆಯಿಂದ ಜಾಗೃತವಾದ ಕೆಂಪುಜೀವ ಆಚಾರ್ಯರತ್ತ ನೋಡಿತು.
ಸತ್ತ ಚಿಗುರೆಯ ತೊಗಲ ಮೇಲೆ ಕುಳಿತ ಜೀವಂತ ದೇವರು.
ಅರ್ಥ ಕೇಳಿ ಹೆಣ್ಣಾಗಿ ಕಾಡಿತ್ತು ಮಾಯೆ. ಹೆಣ್ಣು ತಗ್ಗಿನಲ್ಲಿದೆ. ಜಗುಲಿಯ ಮೇಲಿದ್ದ ತಾನು ಯಾರು ?
ಪುರುಷ.
ಈಗ ಹೇಳಿದ್ದು ಪುರುಷಸೂಕ್ತ !
ತನ್ನಲ್ಲಿ ನಡೆದದ್ದು ಪುರುಷನಿಗೆ ಸೂಕ್ತ.
"ಅಯ್ಯೋ ಇದು ಪುರುಷಸೂಕ್ತ !"
ಇಷ್ಟು ಹೇಳಬೇಕಾದರೆ ಅವನಿಗೆ ಅಯ್ಯೋ ಎನ್ನಿಸಿತ್ತು.
ಪುರುಷಸೂಕ್ತ ಎಂದರೂ ಆಚಾರ್ಯನಿಗೆ ತೊಡಕು ಬಿಡಲಿಲ್ಲ.
ಅವಳಿಗೂ—
"ಸಹಸ್ರ ऽऽಶೀರ್ಷಾ..." ಎಂದ ಹಾಗೆಯೇ ಅನ್ನಿಸಿತು.
ಇಬ್ಬರಿಗೂ ಹೊಸತೇನೂ ಅನ್ನಿಸಲಿಲ್ಲ.
ಆದರೆ ಈ ಮಾತಿನಮಥನದಲ್ಲಿ ಹೊರಟ ಬೆಣ್ಣೆ—
ಆಚಾರ್ಯ ಇಷ್ಟು ದಿನ ಏನಿದ್ದನೋ ಏನೋ.
ಈ ದಿನ ತಾನು ಪುರುಷನೆಂಬ ದೊಡ್ಡ ಸತ್ಯ ಗೊತ್ತಾಗಿದ್ದು, ಎಲ್ಲಕ್ಕೂ ದೊಡ್ಡದು—
ಇಷ್ಟು ದಿನ ದೇವಪುರುಷನಾಗಿ ಕಂಡ ಆಚಾರ್ಯ ಅವಳಿಗೆ ಪುರುಷನಾಗಿ ಕಂಡದ್ದು.
ಇದು ಹೊಸ ಸತ್ಯ.
ಇದರಲ್ಲಿ ಹೊಸತೇನು ಬಂತು ?
ಸತ್ಯವೆಂದರೇನು ಹೀಗೆ.
ಹಳೆಯದೆಂದು [illegible]

Sri Vidyabharathi Book Centre, Sringeri

CC-O. In Public Domain. Digitized by eGangotri

ಜಗುಲಿಯ ಮೇಲಿನ ದೇವರಿಗೆ ಆಚಾರ್ಯರ ಉಪಟಳ ಹೆಚ್ಚಾಯಿತು.
ಅತ್ತ ಪಾಕ ಧೋರಣೆಯೂ ಬದಲಾಯಿತು.
ಅಸ್ತವ್ಯಸ್ತತೆ—!
ಶಿಸ್ತು ನಿಯಮಗಳು ತಪ್ಪಿದವು.
ಒಂದು ಕಡೆಗೆ ಮಾನವನ ತಪ್ಪುಗಳನ್ನೆಲ್ಲ ಹೊಟ್ಟೆಯಲ್ಲಿ ಹಾಕಿಕೊಳ್ಳುವ ಅಪಾರ ಕರುಣಾಧಿ ದೇವರು.
ಇನ್ನೊಂದೆಡೆಗೆ—
ದೇವರ ಪ್ರತಿನಿಧಿಯಾಗಿ ತಿಾನೆ ತಿನ್ನುವ ಆಚಾರ್ಯರು.
ಎಲ್ಲಿವನು ತಪ್ಪಿದರೂ
ಎಲ್ಲ ಒಪ್ಪಿಗೆ—
ಮಂಗಳಾರತಿ...
ಕೆಂಪು ಜೀವ ಎದ್ದು ನಿಂತು
ಕೆನ್ನೆ ಕೆನ್ನೆ ಬಡಿದುಕೊಂಡಿತು.
ಏನು ಧನ್ಯರು ಆಚಾರ್ಯರು.
ಇಂದು ಹೇಳಿದ್ದು ಪುರುಷಸೂಕ್ತ ! ಮುಂದೆ—ಸಮೃದ್ಧಂ,
ಸೌಭಾಗ್ಯಂ—ಹರಿಯಿತು.
ಗಂಗಾಲಹರಿ !

ಹೊಸ ಬಯಕೆಗಳಿಗೆ ಬಸಿದ ನೀರು

ಹೌದು !
ಅವಳ ಹೆಸರು ಗಂಗಾ !
ಪರಕಾರ ಬಿಟ್ಟು ಅವಳು ಉಟ್ಟುಕೊಂಡದ್ದೇ ಕೆಂಪು ಸೀರೆ.
ಆಕೆ ಇನ್ನೂ ದೊಡ್ಡವಳಾಗಿರಲಿಲ್ಲ. ಹಣೆಯ ಮೇಲಿನ ಕುಂಕುಮ ಕರಗಿ ಮೈಮುಚ್ಚಿದ ಬಟ್ಟೆಯಾಯಿತು.
ತನ್ನನ್ನು ಒಬ್ಬ ಕೈಹಿಡಿದಿದ್ದ ಎಂಬುದು ಗೊತ್ತಾಗಿದ್ದೇ ಅವಳಿಗೆ ಆತ ಕೈಬಿಟ್ಟು ಹೋದ ಬಿಸ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೈಹಿಡಿದ ಸುಖ ಗೊತ್ತಿಲ್ಲದಿದ್ದರೂ ಕೈಬಿಟ್ಟ ದುಃಖದ ಬೆಂಕಿ ಅವಳನ್ನು ಹೊತ್ತಿ ಉರಿಯಿತು.

ಇವಳಿಗೊಬ್ಬ ಚಿಕ್ಕಮ್ಮ ಇದ್ದಳು.

ಆಕೆ ಕರುಳು ಕರಗಿಸಿ ಇವಳನ್ನು ಬೆಳೆಸಿದ್ದಳು. ಒಂದು ದಿನ ಗಂಗಾ ನದಿಗೆ ಬಟ್ಟೆ ತೊಳೆಯಲು ಹೋಗಿದ್ದಳು. ಮರಳಿ ಮನೆಯ ಹೊಸ್ತಿಲಲ್ಲಿ ಕಾಲಿಟ್ಟಳು. ಚಿಕ್ಕಮ್ಮ ಶಾಕ್ ಹೊಡೆದ ಹಾಗೆ—

"ಅಯ್ಯೋ !" ಎಂದು ಕೂಗಿದಳು. ಶಾಕ್ ಹೊಡೆಯದೇನು ? ಆಕೆ ಕೈಯಲ್ಲಿ ತಂತಿ ಹಿಡಿದಿದ್ದಳು.

ಸುತ್ತಲಿದ್ದ ಹಲವು ಹೆಣ್ಣುಗಳ ಬಾಯಿ ಅಗಲವಾಯಿತು. ಅದೇ ಅಳು ವಿನ ರೆಕಾರ್ಡು.

ಧ್ವನಿ ಜೋರಾಯಿತು.

ಹೆಂಗಸರ ಅಳುವು ದೊಡ್ಡ ಸಾಂಕ್ರಾಮಿಕ ಪಿಡುಗು. ಹಲವರು ಅಳು ತ್ತಾರೆ. ಚಿಕ್ಕಮ್ಮ ಗಂಗಾಳನ್ನು ಎಳೆದು ಬಾಚಿ ಬರಿ ಅಳುತ್ತಾಳೆ.

ಗಂಗಾನಿಗೂ ಸಾಂಕ್ರಾಮಿಕ ತಾಗಿತು.

ಅಳದೆ ಇರಲು ಸಾಧ್ಯವೇ. ಮೊದಲು ಅಳು. ಬಹಳ ಹೊತ್ತಿನ ಮೇಲೆ ಗಂಗಾ ಅಳು ನಿಲ್ಲಿಸಿದಳು. ಅವಳಿಗೆ ತಿಳಿದು ಬಂತು—ಅಳುವು ನಿಲ್ಲಲಿಲ್ಲ; ಆರಂಭವಾಯಿತು ಎಂದು. ಅಂದಿನವರೆಗೆ ಅವಳು ಹುಟ್ಟುಹುಡುಗಿ, ಅಳುವೇ ಗೊತ್ತಿರದ ಪುಟಿ ಚೆಂಡು. ಅಭ್ಯಾಸ ಮಾಡಲು ಬಂದ ಮೊದಲ ಅಳುವು ಜೀವನದುದ್ದಕ್ಕೂ ನಡೆದು ಬರುವಂತಹದೆಂದು ಅವಳೇ ತಿಳಿದಿರಲಿಲ್ಲ.

ಚಿಕ್ಕಮ್ಮನ ಆರೈಕೆ—ತುಂಬ !

ಅವಳ ಅಂಗೈಯ ಅರಗಿಳಿಯಾಗಿದ್ದಳು. ಚಿಕ್ಕಮ್ಮನೇನು ರಾಜಮನೆ ತನದವಳಲ್ಲ. ಎಲ್ಲಿಯೋ ಗೈದು ತಂದುಹಾಕಿದ್ದನ್ನೇ ತಿಂದು ಬೆಳೆದಿದ್ದರೂ—

ಗಂಗಾ, ತುಂಬಿ ಹರಿಯುವ ಹೊಳೆ. ಕೆಂಡ ನುಂಗಿದರೂ ಹೆಂಗಸು ಬೈಯುವುದೆಂದರೆ ಕಂಡರಿಯದ ದೇವರನ್ನು.

ಗಂಗಾನ ಚಿಕ್ಕಮ್ಮ ದೇವರ ಹೆಣ ಎತ್ತಿದ್ದು; ಎತ್ತಿದ್ದೇ ಎಷ್ಟಾದರೂ ದೇವರ ತಾಳ್ಮೆ ದೊಡ್ಡದು.

ಚಿಕ್ಕಮ್ಮ ಆತನ ತಲೆಗೆ ಮೊಳೆ ಹೊಡೆದು ಮನೆಯಲ್ಲಿ ತೂಗಹಾಕಿ ದ್ದಳು. ಈ ದೇವರಿಗೆ ಆದ ನೋವು—

ಆತನೇ ಕೊಟ್ಟಿದ್ದರ—ಚಿಕ್ಕಮ್ಮನಿಗಾದ ನೋವಿಗಿಂತ ಹಿರಿದು.

Sri Vidyabharathi Book Centre, Sringeri

CC-O. In Public Domain. Digitized by eGangotri

ನೋವು ಎಷ್ಟೇ ಆಗಿರಲಿ, ಎಂತಹದೇ ಆಗಿರಲಿ, ಅದು ಮರೆಯು ದಿದ್ದರೆ ಬದುಕು ಎಂಬುದಕ್ಕೆ ಏನು ಅರ್ಥ ?

ಯಾವ ನೋವನ್ನೂ ಮರೆಯುವ ಉದಾರ ಗುಣ ಮನಸ್ಸಿನಲ್ಲಿಯೆ ಇದೆ...

ಎಲ್ಲರೂ ಅಳುವುದಾದರೂ ಎಷ್ಟು ಹೊತ್ತು ?

ಹಳಬರು ಜೋರಿನಿಂದ ಅಳಿಸಿ ತಮ್ಮ ಅಳುವನ್ನು ಹತೋಟಿಯಲ್ಲಿರಿಸಿ ಮುಂದಿನವರಿಗೆ ಅವರ ಭಾರ ವಹಿಸಿ ಹೋಗುವರು.

ಕಾಯಂ ಅಳಬೇಕೆಂದರೆ ನೊಂದವರಿಗೂ ಕಷ್ಟವೆ.

ಗಂಗಾ ಪ್ರಾಯದವಳಾಗಿದ್ದರೂ ಅತ್ತು ಅನುಭವವಿಲ್ಲದ್ದರಿಂದ ಬೇಗ ಬಸವಳಿದಳು.

ನೆರೆಹೊರೆಯವರು ತಮ್ಮ ಸರತಿ ಮುಗಿಸಿ ಹೋಗಿ ಹೊಸಬರನ್ನು ನಿಯಮಿಸಿದ್ದರು.

ಈಗ ಫುಲ್ ಟೈಂ ಅಳುವವರೆಂದರೆ ಗಂಗಾ ! ಅವಳ ಚಿಕ್ಕಮ್ಮ.

ನೆರೆಮನೆಯ ಒಬ್ಬ ಅನುಭವಸ್ಥ ಹೆಂಗಸು ಹೀಗೇ ಹೊಸಬರಿಗೆ ಚಾನ್ಸ್ ಕೊಡುತ್ತ ಹೋದರೆ......

ಸರಿಯಲ್ಲ ಎಂದು—

"ಚಿಕ್ಕಮ್ಮ ನೀನೇ ಹಿರಿಯಳಾದವಳು ಹೀಗೆ ಅಳುತ್ತ ಕುಳಿತರೆ ಮಗು ವಿನ ಗತಿ ಏನು ? ಎದೆಯೊಡೆದುಕೊಂಡೀತು ಮಗು. ಧೈರ್ಯ ತಂದುಕೋ, ಅವಳಿಗೂ ಧೈರ್ಯ ಹೇಳು. ನೀರು ಹುಯ್ದುಕೊಂಡು ತುತ್ತಿನ ಚೀಲ ತುಂಬಿ ಕೊಳ್ಳಿರಿ...."

ಇದನ್ನೆ ಹಲವರು ಬೇರೆ ಬೇರೆ ಮಾತಿನಲ್ಲಿ ಅನುಮೋದಿಸಿದರು.

ಚಿಕ್ಕಮ್ಮನ ಕೈಯಲ್ಲಿದ್ದ ತಂತಿ.

ಗಂಗಾನ ಕೈಹಿಡಿದವನ ಸಾವನ್ನು ಹೊತ್ತು ತಂದಿತ್ತು.

ಕರ್ಮ ಮಾಡದೆ ಇರಲು ಆಗುವುದಿಲ್ಲ.

ಯಾವಳೊ ಮಡಿಯ ಹೆಂಗಸು ಈ ಮೈಲಿಗೆಯವರನ್ನು ಹಿತ್ತಲಿಗೆ ಕರೆದೊಯ್ದು ಮುದ್ದೆಯಾಗಿ ಕೂಡ ಹೇಳಿ ಮೈಮೇಲೆ ತಣ್ಣೀರು ಎರೆದಳು.

ಗಂಗಾನ ದೊಡ್ಡವಳಾಗುವ, ಆದ ಬಳಿಕಿನ ಕನಸುಗಳ ಬಣ್ಣವೆಲ್ಲ ತೊಳೆದು ಹೋಯಿತು ಆ ನೀರಿನಲ್ಲಿ.

Sri Vidyabharathi Book Centre, Sringeri

ಗಂಗಾನ ತಲೆಯ ಮೇಲೆ ಬಿದ್ದದ್ದೇನೊ ತಣ್ಣೀರು !

CC-O. In Public Domain. Digitized by eGangotri

ಆದರೆ ಅದೇ ಮೋಳೆಯುತ್ತಿರುವ ಹೊಸ ಬಯಕೆಗಳಿಗೆ ಬಸಿದ ನೀರು.

ಚಳಿ ಹತ್ತಿ ನಡುಗುವ ಅವಳು ತನ್ನ ಎಷ್ಟು ಬಯಕೆ ಉರಿದು ಹೋದವು ಎನ್ನುವುದನ್ನು ಲೆಕ್ಕ ಹಾಕಲಿಲ್ಲ.

ಇನ್ನು ಅವು ಬದುಕಲಾರದೆ ಎಂದು ಆಸೆ ಪಡಲೂ ಇಲ್ಲ. ತಲೆಗೆ ಎರಗಿದ ಸಿಡಿಲು.

ವಿಚಾರಕ್ಕೆ ಅವಕಾಶ ಎಲ್ಲಿ.

ಗಂಗಾನಿಗೆ ತಕ್ಕಮಟ್ಟಿಗೆ ತಿಳಿಯುತ್ತಿತ್ತು.

ತನಗೇನಾಯಿತು ಎಂಬುವುದು.

ಸತ್ತವನ ಕರ್ಮವನ್ನು ಇದ್ದವರು ಮುಗಿಸಿದರು.

ಅವನ ಕರ್ಮವೇನೋ ಮುಗಿಯಿತು.

ಆದರೆ ಗಂಗಾನದು ?

ಇನ್ನೂ ಆರಂಭವಾಗಬೇಕು ? ಮುಕ್ತಾಯ ಎಲ್ಲಿ ? ನಿನ್ನೆಯವರೆಗೆ ಪ್ರಪಂಚವನ್ನೆ ಕಾಣಬೇಕೆಂದಿರುವ ಗಂಗಾ ಇಂದು ಗುಪ್ತಳು.

ಚಂದ್ರನಿಲ್ಲ—

ಭಾನುವಿಲ್ಲ.

ಮನೆಯ ಮೂಲೆಯಲ್ಲಿ ಗುಪ್ತಳು.

ಗಂಡನಿರುವ ಸುಖದ ರುಚಿಯೇ ಗೊತ್ತಿಲ್ಲದ ಅವಳಿಗೆ ನಿಜವಾಗಿ ಆತ ಹೋದ ದುಃಖವಾಯಿತೆ ?

ಗಂಡನೊಡನೆ ಈಕೆ ಇರಲಿಲ್ಲ.

ಆದರೆ ಇರುವ ಸಿದ್ಧತೆ—ಇತ್ತು.

ಈ ಜಾತಿಯ ಹೆಂಗಸಿಗೆ ಮದುವೆ ಒಂದು ಆಗಬೇಕಾದರೆ ಕುರಿ ಕೋಣ!

ಇನ್ನು ಮತ್ತೆ ಆಸೆಯೇ...?

ಕೇಳಿದ ಎಲ್ಲರ ಕಿವಿಯ ಮೇಲೆ ಬೆರಳು !

ಬಯಸಿದವರ ಎಲ್ಲರ ಹಲ್ಲಲ್ಲಿ ಇವಳ ಬಾಳು.

ಇವಳ ಚಿಕ್ಕಮ್ಮನೋ—

ಅಚ್ಚ ಮಡಿಯ ಕೆಂಪು ಹೆಂಗಸು. ಹಿಡಿತದಲ್ಲಿ ಪೂರ್ತಿ ಕಮ್ಯೂನಿಸ್ಟ್.

ದಿನ ಕಳೆದವು. ತಿಂಗಳು ಉರುಳಿಬಿದ್ದವು. ಗಂಗಾನಿಗೆ ಸ್ವಲ್ಪ ಚಪಲ. ಎಷ್ಟು ದಿನ ಇದೇ ಮೂಲೆ, ಈ ಚಾಪೆಯ ತುದಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವಲ್ಪ ಹೊರಗೆಹೋದರೆ ಆಗಲಿಕ್ಕಿಲ್ಲವೆ ? ಅವಳ ಚಿಕ್ಕಮ್ಮ ಕೇಳುವಳೆ? ಕೂಡಲೆ ಸುಗ್ರೀವಾಜ್ಞೆ. ಪ್ರತಿಬಂಧಕ ಸ್ಥಾನಬದ್ಧತೆ.

"ಅಲ್ಲಮ್ಮಾ ನೀನು ತಿರುಗಾಡುವುದನ್ನು ಬೇಡಿ ಬರಲಿಲ್ಲ". ಈ ಕಮ್ಯೂನಿಸ್ಟ್ ಚಿಕ್ಕಮ್ಮನಿಗೆ ಯಾವ ಮೂಲೆಯಲ್ಲಿಯೋ ಇದ್ದ ಹೃದಯ ಬೇರೆ. ಅಷ್ಟರಲ್ಲಿ ಅವಳಿಗೇ ಅಳುವು.

"ಗಂಗಾ ನೀನು ನಾಲ್ಕು ಜನರಲ್ಲಿ ಚೆನ್ನಾಗಿ ಬದುಕಿದ್ದು, ನಾನೂ ಕಾಣಬೇಕೆಂದಿದ್ದೆ. ತಿರುಗಾಡಿದ್ದು ನೋಡಿ ನಲಿಯಬೇಕೆಂದಿದ್ದೆ. ಆದರೆ ನಿನ್ನ ತಿರುಗಾಟ, ಸುಖಗಳನ್ನು ನಿನ್ನ ಗಂಡ ಕಸಿದುಕೊಂಡು ಹೋದ.

ಇನ್ನು ನಿನಗೆ..."

ಗಂಗಾ ತನಗೆ ಬರದಿದ್ದರೂ ಕಡ ತಂದು ಅತ್ತು ಚಿಕ್ಕಮ್ಮನಿಗೆ ಮುಟ್ಟಿಸಿದಾಗಲೆ ಸಮಾಧಾನ.

ಗಂಗಾನಿಗೆ ಗಂಡ ಸತ್ತ ನೋವು ಹೆಚ್ಚು ಕಾಡಲಿಲ್ಲ. ಸತ್ತಂತೆ ಬದುಕುವ ದುಃಖ ತಡೆಯದಾಯಿತು.

ವಯಸ್ಸು.

ಮನಸ್ಸು.

ಏನನ್ನು ಅದುಮಬೇಕು, ಎಷ್ಟೆಂದು ಹತ್ತಿಕ್ಕಬೇಕು.

ಗಂಗಾನಿಗೆ ಇವೆಲ್ಲ ಬಹಳ ಕಾಡಲಿಲ್ಲ.

ಒಬ್ಬಳೇ ಇದ್ದು ಬಹಳ ಬೇಜಾರು ತರುತ್ತಿತ್ತು. ಜೈಲಿನಲ್ಲಿ ಒಮ್ಮೆ ಬಂದು ಸಿಕ್ಕರೆ ಹೆಸರಾಂತ ಕೊಲೆಗಡಕರು, ಡಕಾಯಿತರು ಪಾರಾಗಲಾರರು.

ಪಾಪ ಗಂಗಾನಂತಹ ಹೆಣ್ಣು ಜೀವ ಹೇಗೆ ?

ಸ್ವಾತಂತ್ರ್ಯಾಂದೋಲನ.

ನಡೆಸಲಾಗದ ಪ್ರಯತ್ನವಾಗಿತ್ತು.

ಮುಕ್ತಿ !

ಈಶ್ವರಾನುಗ್ರಹದಿಂದಲೆ ಮಾತ್ರ ಸಾಧ್ಯ ಅಲ್ಲವೆ ?

ಗಂಗಾನಿಗೂ ಚಿಕ್ಕಮ್ಮನೇ ಕರುಣಿಸಬೇಕು.

ಕಾಲ ಬದಲಾಯಿಸಿತು.

ಅವಳ ಚಿಕ್ಕಮ್ಮನಿಗೆ ವಿವೇಕವೋ ಅವಿವೇಕವೋ ಏನೋ ಸಂಚಾರವಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಚಿಕ್ಕಮ್ಮನಿಗೆ ಗಂಗಾಪ್ರವಾಹದ ಚಿಂತೆ !
ಅವಳಿಗೆ ತನ್ನದು ಹಾಸಲು ಇದೆ. ಹೊದೆಯಲೂ ಸಾಕು.
ಅಂತಹುದರಲ್ಲಿಯೇ ಈಗೇಕೆ ಗಂಗಾನ ಸೆಳವು.
ಉಂಡ ಊಟ ಮೈಗೆ ಹತ್ತದು.
ಅವಳಿಗೆ ರಾತ್ರಿಯೂ ಹಗಲೇ.

ಪುರಾಣದಲ್ಲಿಯೂ ಅವಳಿಗೆ ಗಂಗಾ ಮಹಾತ್ಮ್ಯೆ. ತೊಗಲು ಹಣ್ಣಾದ ಅವಳು ತಾನೆ ಸಮಾಧಾನ ತಂದುಕೊಳ್ಳುವಳು.

"ಒಳ್ಳೆಯ ಹುಡುಗಿ..."
"ಮನಸ್ಸು ಗಟ್ಟಿ."

ಚಿಕ್ಕಮ್ಮ ತನ್ನ ಹಲವು ಅನುಭವದ ಒರೆಗಲ್ಲಿಗೆ ಗಂಗಾನನ್ನು ಒರೆದು ನೋಡುತ್ತಾಳೆ.

"ಇವಳ ಮನಸ್ಸು ಗಟ್ಟಿ: ನಿಜ. ಇನ್ನೊಬ್ಬರನ್ನು ಕಣ್ಣೆತ್ತಿ ನೋಡಿ ದರೆ ಆಣೆ."

ಹೆಣ್ಣಿನ ಬಗ್ಗೆ ಇನ್ನೊಂದು ಹೆಣ್ಣು ಇಲ್ಲವೆ ಗಂಡು ಯೋಚಿಸುವ ಮೊದಲ ಸಂಗತಿಯೆ ಇದು.

"ಇವಳ ಮೇಲೆ ಯಾರ ಕಣ್ಣು ?
ಇಲ್ಲ, ಯಾರ ಮೇಲೆ ಇವಳಿಗೆ ಕಣ್ಣು ?"

ಅನುಭವಸ್ಥಳಾದ ಮುದುಕಿಗೆ ಇಷ್ಟರಲ್ಲೆ ಕತ್ತಲಾಗಲಿಲ್ಲ.
ತನ್ನನ್ನೆ ಕೇಳಿಕೊಂಡಳು.

ಇವಳು ಯಾರನ್ನೂ ನೋಡದೆ ಇದ್ದರೆ ಸಾಕೆ ? ತುಂಬಿ ಹರಿದಾಡುವ ಇವಳನ್ನು ಯಾರೂ ನೋಡುತ್ತಾರೆ.

ಬೀದಿಯಲ್ಲಿ ನಾವು ಬದಿಯಿಂದ ಹೊರಟರೆ ಅಪಘಾತ ತಪ್ಪಲಾರವು.

ಇನ್ನೊಬ್ಬ ತನ್ನ ಬದಿ ಬಿಟ್ಟು ಹಾಯ್ದು ಆಕಸ್ಮಿಕ ಸಂಭವಿಸುವುದು ಆಶ್ಚರ್ಯವಲ್ಲ.

ನಾವು ತಪ್ಪುಮಾಡದೆ ಹೋದರೆ
ಸರಿಯಾಗಿದ್ದೇವೆ ಎಂದು ಅರ್ಥವಲ್ಲ—ಎಂಬುದು ಈ ಮುದುಕಿಗೆ ಚೆನ್ನಾಗಿ ಗೊತ್ತು.

ಗಂಗಾನ ಮೈ, ಮನಗಳು

Sri Vidyabharathi Book Centre, Sringeri

 CC-O. In Public Domain. Digitized by eGangotri

ತುಂಬಿ...ಮನಸ್ಸಿನ ಮೂಲೆಯಲ್ಲಿದ್ದ ಪೆಟ್ರೋಲಿಗೆ ಕಡ್ಡಿ ಕೆರೆದು ಚೆಲ್ಲಿತು...

ಮುದುಕಿ ಅಸಹಾಯಳಾದಳು.

ಗಂಗಾ ಇಳುಕಲಿಗೆ ಬಿದ್ದ ನೀರು ಎಂಬುದನ್ನು ನೆನೆದು ಹಣ್ಣು ತೊಗಲಿನ ಮುದುಕಿ ಮಿಡುಕಿದಳು.

"ಅಹಲ್ಯಾ—ದ್ರೌಪದಿ
ನೀವೇ ಕಾಯಬೇಕು..."

ಅವರ ಹಣೆಬರಹ, ಬದುಕು ಮುದುಕಿಗೆ ಕೇಳಿ ಗೊತ್ತಿದ್ದರೂ ಗಂಗಾನ ರಕ್ಷಣೆಗೆ ಅವರಿಗೇ ಮುದುಕಿ ಅಂಗಲಾಚಿದಳು.

ಗಂಗಾನ ಹೊಣೆ ತನ್ನ ಮೇಲೆ.

ಈಗ ಮುದುಕಿಗೆ.

ನಡು ಬಾಗಿದ ಅವಳು ಅದನ್ನು ಹೊರಲು ತಿಣುಕುತ್ತಾಳೆ.

ಪ್ರಾಯದಲ್ಲಿ ತನ್ನ ಹೊಣೆ ತಾನು ಹೊತ್ತಾಗ ಏನೆಲ್ಲ ಆಗಿತ್ತು ಎನ್ನುವುದು ಹಣ್ಣು ವಯಸ್ಸಿನಲ್ಲಿಯೂ ಹಚ್ಚ ಹಸಿವಾಸದ ನೆನಪು.

ತಾನು ದಿನದಿನಕ್ಕೆ ಯಮನೂರು ಸಮೀಪಕ್ಕೆ ನಡೆಯುತ್ತಿದ್ದಾಳೆ.

ತಾನೋ ಇದ್ದಕ್ಕಿದ್ದಂತೆಯೆ ಸತ್ತು ಬಿಟ್ಟರೆ—?

ಏನೂ ಅರಿಯದ ಗಂಗಾ...

ಏನಾದಾಳು—

ಈ ಕಾಡಿನಲ್ಲಿ ಅವಳನ್ನು ಹರಿದು ತಿನ್ನುವ ಕ್ರೂರಮೃಗಗಳದೇನು ಕೊರತೆ—!

ಪಾಪ ಈ ಮುದುಕಿಗೆ ಪ್ರಪಂಚದ ಕಾಡಿನಲ್ಲಿ ಪಶುಗಳಿದ್ದುದೊಂದೇ ಗೊತ್ತು.

ಅನುಭವ ಕೊಟ್ಟ ಜ್ಞಾನ ಅದು.

ತಾನು ಸಾಯದೆ ಇರಲು ಸಾಧ್ಯವೆ ?

ಸಾವು ತನಗೆ ಹೇಳಿ ಕೇಳಿ ಬರಲಾದರೂ ಶಕ್ಯವೆ ?

ತಲೆಗೆ ಭಾರವಾಗುವ ವಿಚಾರಗಳು.

ಏನು ಮಾಡಬೇಕು ?

ಕಂಡವರನ್ನು ಕೇಳಿದಳು.

Sri Vidyabharathi Book Centre, Sringeri

ಪುರಾಣ ಹೇಳುವ ಆಚಾರ್ಯರನ್ನು

CC-O. In Public Domain. Digitized by eGangotri

ಕೇಳುವ ಪೂಜಿ ಸುಮಂಗಲೆಯರನ್ನು
ಮಕ್ಕಳನ್ನು ತಾಯಂದಿರನ್ನು—
ಎಲ್ಲರ ತಲೆಗೂ ಒಂದು ಮಾತು :
ಚಿಕ್ಕಮ್ಮನ ತಲೆ ಗಿರ್ರೆಂದಿತು.
ಒಂದು ಯೋಜನೆ ಫಲಿಸಬೇಕಾದರೆ ದೊಡ್ಡ ಬೇನೆ ತಿನ್ನಬೇಕು.
ಕೆಲದಿನ ಕಳೆದ ಮೇಲೆ—
ಮುದುಕಿಯ ಮನಸ್ಸು ಹಗುರಾಗಿತ್ತು.
ತನ್ನ ಹುಡುಗಿ ಗಂಗಾ ಭಾಗೀರಥಿಯಾಗಿದ್ದಳು.
ತಲೆ ಭಾರ ಇಳಿಸಿ, ಕೆಂಪು ಬಟ್ಟೆ ಸುತ್ತಿದ್ದಳು. ಗಂಗಾ !

ಮುದುಕಿ ಚಿಕ್ಕಮ್ಮನ ಕರುಳು ಹಿಂಡಿ ತೆಗೆದರೂ ಒಂದು ಬಗೆಯ ಸಮಾಧಾನಪಟ್ಟಳು.

ಮನೆಯ ಎಮ್ಮೆ ಸತ್ತರೆ ಚಪ್ಪಲಿ ಮಾಡಿಸಿದ್ದೇ ಬಂತು ಅಲ್ಲವೇ ?
ಗಂಗಾ ಗಂಡನೊಂದಿಗೆ ನಲಿದು ಸಂತೋಷಪಡಬೇಕಿತ್ತು. ಆಗಲಿಲ್ಲ.
ಆದರೆ ಸುರಕ್ಷಿತಳಿರಬೇಕು ಎಂದು ಈ ಮುದುಕಿ ಕೆಂಪು ಬೇಲಿ ಕಟ್ಟಿದ್ದಳು.
ಈಗ ಮುದುಕಿಗೆ ನಿತ್ಯ ಎರಡು ಸಲ ಪುರಾಣ ಇಲ್ಲದಿದ್ದರೆ ಆಗುವುದಿಲ್ಲ.

ಧಾಬಳಿ ಇಲ್ಲದೆ ಹೋದರೆ ಸಂಜೆ ಉಪವಾಸ. ಆದರೆ ಇವಳ ವಯಸ್ಸಿನ ಎರಡನೆಯ ಸೋಪಾನದಲ್ಲಿದ್ದಾಗ ಈಕೆ ಎರಡು ಸಲ ಪಂಢರಪುರಕ್ಕೆ ಹೋಗಿ ಬಂದಿದ್ದನ್ನು ಈಗ ಮರೆತಿದ್ದಾಳೆ.

ಕಹಿಯನ್ನು ಮರೆಯಲೇಬೇಕು !

ಕೆಂಪು ಬಟ್ಟೆಯನ್ನು ಉಕ್ಕಿನ ತೆರೆ ಎಂದು ಈಗ ನಂಬಿದ್ದಾಳೆ ಮುದುಕಮ್ಮ.

ಮುದುಕಿಗೆ ಮೊದಲಿನಂತೆ ದುಡಿಯುವ ಶಕ್ತಿ ಇಲ್ಲ. ಹಿಂದೆ ಮಾಡಿಟ್ಟ ಗಂಟೂ ಕರಗಿತ್ತು.

ವಾರ್ಧಕ್ಯ, ಬೇನೆ—
ಎರಡೂ ಮುದುಕಿಯನ್ನು ಹಣ್ಣು ಮಾಡಿದ್ದವು.

"ಗಂಗಾನ ತುತ್ತಿನ ಚೀಲದ ಗತಿ—?" ವಿಧವಾ ವಿಧಾನ ಸಭೆಯಲ್ಲಿ ಹಲವು ಗೊತ್ತುವಳಿಗಳು. ಅವಕ್ಕಿಂತ ಹೆಚ್ಚು ತಿದ್ದುಪಡಿಗಳು.

ನಿರ್ಣಯವಾದದ್ದು ಮೊನ್ನೆ—
Sri Vidyabharathi Book Centre, Sringeri

 CC-O. In Public Domain. Digitized by eGangotri

"ಗಂಗಾ ಶಾನುಭೋಗ ರಂಗಣ್ಣನ ಪಾಕ ಪ್ರದೇಶವನ್ನು ಆಕ್ರಮಿಸಿ ನಿಲ್ಲಬೇಕು."

ರಂಗಣ್ಣ ಈಗ ಬಹಳ ಮೈಲಿ ದಾರಿ ನಡೆದಿದ್ದ. ಆದ್ದರಿಂದ ಆತ ಒಳ್ಳೆಯವ.

ಕೈತುಂಬ ಕಾಸು ಇದೆ ಅಂತಲೆ ನಾಲ್ಕು ಜನಕ್ಕೆ ಬೇಕಾದವ.

ರಂಗಣ್ಣನಿಗೆ ಒಬ್ಬ ಹೆಂಡತಿ ಇದ್ದಾಳೆ. ಹಣೆತುಂಬ ಕುಂಕುಮದ ಮುತ್ತೈದೆ. ದೇವರನ್ನು ಕಂಡರೆ ಕೈಮುಗಿಯುವ, ಬ್ರಾಹ್ಮಣರನ್ನು ಕಂಡರೆ ಕೈಲಾದದ್ದನ್ನು ಮಾಡುವ ಮುಪ್ಪಿನ ಮುತ್ತೈದೆ ಆಕೆ.

ಗಂಗಾನ ಚಿಕ್ಕಮ್ಮನ ಪುರಾಣ ಮೋಟ್.

ರಂಗಣ್ಣ ತನ್ನ ಗೃಹಮಂತ್ರಿಯ ಒತ್ತಾಯಕ್ಕೆ ಮಣಿದು, ತಮ್ಮ ಮನೆಯ 'ತಗ್ಗಿ'ನಲ್ಲಿ ಗಂಗಾ ಪ್ರತಿಷ್ಠಾಪನೆಯ ಅವಕಾಶವಿತ್ತ.

ರಂಗಣ್ಣನ ಮನೆಗೆ ಗಂಗಾವತರಣವಾಗಿದ್ದು ಊರಿನಲ್ಲಿ ದೊಡ್ಡ ಸುದ್ದಿ. ಆದರೆ ಇದು ಯಾರ ಭಾಷ್ಯ ಟೀಕೆಗಳ ವಸ್ತುವಾಗದೆ ಕನಿಕರದ ಸಂಗತಿಯಾಗಿತ್ತು.

ಮುದುಕಿಗೆ ಈಗ ನಿಶ್ಚಿಂತದಿಂದ ಸಾಯಲು ಅನುಕೂಲವಾಗಿತ್ತು.

ಒಳಹಸಿಯ ಕಟ್ಟಿಗೆ

ಕೆಲದಿನಗಳ ಹಿಂದಿನ ಮಾತು.

ಗಂಗಾ ಆಗ ಇನ್ನೂ ಮಡಿ ಆಗಿದ್ದಿಲ್ಲ.

ಒಮ್ಮೆ ಅಸಹಾಯಳಾಗಿ ಈ ಮುದುಕಮ್ಮ ಪುರಾಣಿಕ ರಾಮಾಚಾರ್ಯರನ್ನು ಕೇಳಿದ್ದಳು.

"ಆಚಾರ್ಯರೇ ನಾನು ಇದ್ದಕ್ಕಿದ್ದಂತೆಯೆ ಸತ್ತುಹೋದರೆ ಗಂಗಾ ಹೇಗೆ ಬದುಕಬೇಕು ?"

ಆಚಾರ್ಯರು ಕಹಿ ನಾಲಗೆಯಿಂದ ಗುರುಟಿದರು.

 Sri Vidyabharathi Book Centre, Sringeri

 CC-O. In Public Domain. Digitized by eGangotri

"ಧರ್ಮ ಹಾಳಾಯಿತು, ಗಂಗಾ ಬದುಕಲೇಬಾರದು, ಸತ್ತರೂ ಅವಳಿಗೆ ಸದ್ಗತಿ ಇಲ್ಲ. ಬದುಕಿದರೆ—ಅವಳೊಂದು ದುರ್ನಿಮಿತ್ತ...."

ಈ ಪುಕ್ಕ ಹೆಂಗಸಿಗೆ ಆಚಾರ್ಯರ ದರ್ಪ್ಪೋಕ್ತಿ ತಿಳಿಯಲಿಲ್ಲ. ಆಚಾರ್ಯರಿಗೂ ಗಂಗಾನ ಮೇಲೆ ಕೋಪವಿರಲಿಲ್ಲ.

"ಲೋಕದಲ್ಲಿ ಅಧರ್ಮ ಬೆಳೆಯಬಾರದು" ಎಂಬ ಸದಿಚ್ಛೆ ಅವರಿಗಿತ್ತು.

ಗಂಗಾ ಹುಡುಗಿಯಾಗಿರಲಿ, ಮಗುವಾಗಿರಲಿ ಅವಳಿಗೆ ಒಂದು ಮದುವೆಯಾಗಿತ್ತು.

ಈ ಸಂಗತಿ ಗಂಗಾನಿಗೆ ತಿಳಿದಿರಲಿ ಬಿಡಲಿ ಇತರರಿಗೆ ತಿಳಿದಿತ್ತು.

ಅವಳ ಗಂಡ ಸತ್ತ !

'ಪಾಪಿಯಾದ ಹೆಂಡತಿಯ ಗಂಡ ಬೇಗ ಸಾಯುತ್ತಾನೆ'

—ಎಂದು ಧರ್ಮದ ಒಂದು ಪುಸ್ತಕದಲ್ಲಿ ಬರೆದಿದ್ದು ಆಚಾರ್ಯರಿಗೆ ಓದಿ ಇಲ್ಲವೇ ಕೇಳಿ ಗೊತ್ತಿತ್ತು.

ಆದರೆ ಒಮ್ಮೆ ಏನೋ ಪ್ರಸಂಗ ಬಂದಾಗ ಗಂಗಾನ ಚಿಕ್ಕಮ್ಮ ಆಚಾರ್ಯರ ಹತ್ತಿರ ತನ್ನ ದುಃಖ ತೋಡಿಕೊಳ್ಳುತ್ತ ಹೇಳಿದ್ದಳು.

"ಆಚಾರ್ಯರೇ ನನ್ನ ಹಾಲುಗಲ್ಲದ ಕೂಸು ಗಂಗಾ ಏನು ಪಾಪ ಮಾಡಿದ್ದಳು ?

ದೇವರು ಅವಳ ಮೇಲೆ ಏಕೆ ಸೇಡು ತೀರಿಸಿಕೊಳ್ಳಹತ್ತಿದ."

ಆಚಾರ್ಯರಿಗೆ ಗಂಗಾ ಕಣ್ಣು ಮುಂದೆ ಆಡಿದ ಕೂಸು. ಪಾಪ ಮಾಡುವಷ್ಟು ಪ್ರೌಢಳು ಅಲ್ಲವೇ ಅಲ್ಲ.

"ಸಾವಿತ್ರಮ್ಮ ದೇವರ ಲೆಕ್ಕ ನಮಗೆ ಗೊತ್ತೇನವ್ವ; ಗಂಗಾ ತನ್ನ ಹಿಂದಿನ ಪಾಪಕ್ಕೆ..."

ಧರ್ಮದ ಕುಸ್ತಿಗೆ ಯಾವಾಗಲೂ ನುಣುಚು ಬಹುಬೇಗ.

ಆಚಾರ್ಯರಿಗೂ ಗಂಗಾನ ಗಂಡ ಸತ್ತ ದಿನ ಕಣ್ಣೀರು ಬಂದಿತ್ತು.

"ಪಾಪ ಆಗಬಾರದ ಕೆಲಸ."

ಆದರೆ ಮುಂದೆ ಅದೆಷ್ಟೋ ಸಲ ಅವಳ ಚಿಕ್ಕಮ್ಮನನ್ನು ಗದರಿಸಿದ್ದರು. ಏನಾದರೂ ಧರ್ಮದ ಹೊಣೆ ಆಚಾರ್ಯರ ಹೆಗಲ ಮೇಲಿತ್ತು.

ಅಂಥವಳಿಂದ ಅರಿಷ್ಟ.

ಆಚಾರ್ಯರಿಗೆ ತಮ್ಮ ನಂಬಿಕೆ ಪೊಳ್ಳು ಎನ್ನುವ ಅವಕಾಶವಿರಲಿಲ್ಲ. ಸತ್ಯವೇ ಎನ್ನುವುದನ್ನು ಒರೆಗೆ ಹಚ್ಚಿ ನೋಡುವುದು ಅವರ ಕೆಲಸವಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಚಿಕ್ಕಮ್ಮ ಕೇಳಿದಾಗ—

"ಗಂಗ ಬದುಕಬೇಕೇನೆ ಸಾವಿತ್ರಿ ?

ಅಧರ್ಮ ಬೆಳೆಸುವುದಕ್ಕಿಂತ ಸತ್ತರೆ ಮೇಲು .

ಬದುಕುವುದಾದರೆ ಶುದ್ಧವಾಗಿ ಬದುಕಬೇಕು" ಎಂದು ಸಲಹೆ ಮಾಡಿದ್ದರು.

ಆಚಾರ್ಯರ ಬುದ್ಧಿ ವಿಚಾರಗಳಿಗೆ ಒಂದು ಮಾರ್ಗದ ದಾರಿ.

ಗಂಗಾನ ಚಿಕ್ಕಮ್ಮ ಕೇಳಿದಳು.

"ಶುದ್ಧವಾಗಬೇಕು ನಿಜ ಆಚಾರ್ಯರೆ, ಆದರೆ ಇನ್ನೂ ಚಿಕ್ಕ ಹುಡುಗಿ...."

"ಹೌದು ಚಿಕ್ಕವಳಿದ್ದಾಳೆಂದೇ ಶುದ್ಧವಾಗಬೇಕು."

ಶುದ್ಧವಾದರೆ ಗಂಗಾ ದಾಳಿಯಿಂದ ಸುರಕ್ಷಿತಳು ಎಂದು ಆಚಾರ್ಯರ ಬುದ್ಧಿ.

ಆದರೆ ಹಸಿ ವಯಸ್ಸಿನ ಕಟ್ಟಿಗೆಯನ್ನು ಕುದಿಯಲ್ಲಿ ಒಣಗಿಸಿದರೆ ಹುಳು ಹತ್ತಿ ಹಾಳಾದೀತೆಂದು ಆಚಾರ್ಯರ ತರ್ಕಕ್ಕೆ ಹೊಳೆಯುಲಿಲ್ಲ.

ಆಚಾರ್ಯರ ತಿಳಿವಳಿಕೆಯೆ ಇಷ್ಟು :

"ಧರ್ಮ ನಮ್ಮನ್ನು ಕೆಡಿಸಲೊಲ್ಲದೇಕೆ ನಾವು ಧರ್ಮವನ್ನು ತುಳಿಯಬಾರದು ; ಕೆಡಿಸಬಾರದು."

ಸರ್ವಶಾಸ್ತ್ರಗಳನ್ನು ಅವಲೋಕನ ಮಾಡಿದ ಆಚಾರ್ಯರು ಗಂಡಿನಂತಹ ಎರಡು ಮಾತು ಹೇಳಿದ್ದರು:

"ನೀನು ಹೆಂಗಸು, ನನ್ನ ಮಾತು ಕೇಳು. ಗಂಗಾ ಶುದ್ಧವಾಗಲಿ..."

"ಹಾಗಾದರೆ ಭಯ ಇಲ್ಲ ಎನ್ನುತ್ತೀರಾ ಆಚಾರ್ಯರೇ ?" ಚಿಕ್ಕಮ್ಮನಿಗೆ ಎಲ್ಲಿಂದಲಾದರೂ ಗಂಗಾನ ಬಗ್ಗೆ ಅಭಯ ಬೇಕಿತ್ತು.

ಧರ್ಮಾವತಾರಿಗಳಾದ ಆಚಾರ್ಯರ ನಾಲಗೆ ಧರ್ಮದಷ್ಟೆ ಹರಿತವಾಗಿತ್ತು.

"ಹೆಣ್ಣು ಎಂದರೆ ಭಯ ಇದ್ದೇ ತೀರಬೇಕು. ಆದರೂ ಸಜ್ಜನರಿಗೆ ಅಂಜಿಕೆ ಏಕೆ ? ಗಂಗಾ ಮಡಿ ಆದರೆ ಅವಳ ಅಡಿಗೆ ನೈವೇದ್ಯಕ್ಕೆ ಬರುತ್ತದೆ."

ಆಚಾರ್ಯರಿಗೆ ಒಂದು ಭಯ ಇತ್ತು. ಈ ಊರಿನಲ್ಲಿಯ ಬ್ರಾಹ್ಮಣರೆಲ್ಲ ಊರು ಬಿಟ್ಟರು.

ಒಂದು ಹೊಸ ಹುಡುಗ ಇನ್ನು ಊರಲ್ಲಿ ನಿಲ್ಲಲಾರ. ಗಂಗಾನಿಗೆ ಸ್ವಜನ ಭಯವೆಲ್ಲಿಯದು....?

Sri Vidyabharathi Book Centre, Sringeri

CC-O. In Public Domain. Digitized by eGangotri

ಇನ್ನು ತಮ್ಮ ಪುರಾಣಕ್ಕೆ ಈ ಊರಿನಲ್ಲಿ ಕಾಯಂ ಮಂಗಳ ಆಗುವ ದಿನಗಳು ದೂರಿಲ್ಲ. ಎಂದಾದರೂ ಊರಿಗೆ ಬರಬೇಕು.

ಈ ಸಾವಿತ್ರಿ ಎಷ್ಟು ದಿನದವಳು...?

ರಂಗಣ್ಣನ ಮನೆಗೆ ಅನ್ನಪೂರ್ಣ...ಬಹಳ ದೂರದ ವಿಚಾರ.

ಲೋಕಸಂಗ್ರಹ, ಧರ್ಮ ಸಂಗ್ರಹ ಆಚಾರ್ಯರಿಗೆ ಹೊಣೆ...

ಹೀಗೆ ಹಲವು ದಿನ ಕಳೆಯುವುದರೊಳಗೆ ಒಂದು ದಿನ ಆಚಾರ್ಯರು ಊರು ಬಿಟ್ಟು ಹೋದರು.

ಉಂಡಾಡಿಗನಾದ ಶೀನನೇ ಊರಿನ ನಾಗಾಭಟ್ಟನಾದ.

ಶೀನನಿಗೆ ತನ್ನವರೆನ್ನುವರು ಯಾರೂ ಇಲ್ಲ.

ಶಾನುಭೋಗರ ರಂಗಣ್ಣನ ಧರ್ಮಪತ್ನಿ ತೀರ್ಥವಿಲ್ಲದೆ ಉಣ್ಣುವ ಹಾಗಿಲ್ಲ.

ಶೀನನಿಗೆ ಯಾರಾದರೂ ಕರೆಯದಿದ್ದರೆ ಊಟವೇ ಇಲ್ಲ.

ಇಂತಹವರಲ್ಲಿ ಒಂದು ದಿನ ರಂಗಣ್ಣ ಶೀನನನ್ನು ಕರೆದು ಕಾಯಂ ಆದ ಒಡಂಬಡಿಕೆ ಮಾಡಿಕೊಂಡಿದ್ದ.

ತನ್ನ ಮನೆಯ ದೇವರಿಗೆ ಸ್ನಾನ ಹಾಕಿ ಊಟ ಮಾಡಿಸುವ ಹೊಣೆ ಶೀನ ಹೊರಬೇಕು.

ದೇವರಿಗೆ ಉಣಿಸಿದ ಭೂಸುರ ಬರಿ ಹೊಟ್ಟೆಯಿಂದ ಇರಬಾರದು. ತಮ್ಮ ಜತೆಗೆ ಅವನೂ ಊಟ ಮಾಡಬೇಕು.

ಅಂತೂ ಶಾನುಭೋಗರ ಹೆಂಡತಿಗೆ ತೀರ್ಥದ ವ್ಯವಸ್ಥೆ, ಶೀನನಿಗೆ ಪ್ರಸಾದದ ಸೌಕರ್ಯ ಒಂದೇ ಕರಾರಿನಲ್ಲಿ ಆಗಿಹೋಗಿದ್ದವು.

ಶೀನ ಪುರಾಣಿಕರಿದ್ದಾಗ ಮೊದಮೊದಲು ಪೂರ್ವಾಶ್ರಮದಲ್ಲಿ ಒಂದೆರಡು ದೇವರ ಪೂಜೆ ಮಂತ್ರಗಳನ್ನು ಕಲಿತಿದ್ದ.

"ಇನ್ನಷ್ಟು ಕಲಿತರೆ ದೇವರ ಪೂಜೆ ಮಾಡಬಹುದು" ಎಂದು ಪುರಾಣಿಕ ಆಚಾರ್ಯರು ಅಂದಿದ್ದರು.

ಆದರೆ—ಈಗ

ಶೀನ ಪೂಜೆ ಮಾಡಬಹುದು ಎಂದು ಸರ್ಟಿಫಿಕೇಟ್ ಕೊಟ್ಟುಬಿಟ್ಟರು. ಓಂದುಳಿದವರಿಗೆ ಕೊಡುವ ಪುರಸ್ಕಾರ ಅದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶೀನ ಒಂದು ಇತ್ತು ; ಇನ್ನೊಂದು ಇಲ್ಲ ಪೂಜೆ ಸಾಗಿಸಿಕೊಂಡು ಹೋಗುತ್ತಿದ್ದ.

ಏತನ್ಮಧ್ಯೆ ಊರಿಗೆ ಹೊರಗಿನಿಂದ ವರ್ಗವಾಗಿ ಬಂದ ಕನ್ನಡ ಶಾಲೆಯ ಮಾಸ್ತರರು, ಡಾಕ್ಟರರು ಶೀನ ಬ್ರಾಹ್ಮಣ್ಯಕ್ಕೆ ಹಿಗ್ಗಿ ಹೋಗಿದ್ದರು. ಅವರದೂ ಆಫ್ರಿಕನ್ ಬ್ರಾಹ್ಮಣಿಕೆ.

ಆ ಜನಕ್ಕೆ ಶೀನ ಮಹಾಪಂಡಿತವರ್ಯನೇ ಸರಿ !

ಗಂಗಾ ಈಗ ತನ್ನ ಚಿಕ್ಕಮ್ಮನ ಮನೆಯಲ್ಲಿ ಏಕಾಕಿ.

ಸೀನನಿಗೆ ಸರ್ವವ್ಯಾಪಿತ್ವ. ಅವನ ಊಟ ಮಾತ್ರ ರಂಗಣ್ಣನ ಮನೆಯಲ್ಲಿ.

ಅಡುಗೆಯ ಸಾವಿತ್ರಮ್ಮ ಈಗ ಗಂಗಾ ಪ್ರವಾಹದಲ್ಲಿ ತೇಲಿಹೋದ ಕಡ್ಡಿ.

ಎಂದೋ ಒಮ್ಮೊಮ್ಮೆ ಕ್ವಚಿತ್ ಪ್ರಸಂಗದಲ್ಲಿ ಗಂಗಾನಿಗೆ ಅವಳ ಜ್ಞಾಪಕ ಬರಬೇಕು.

ಗಂಗಾ ತನ್ನ ಹಸಿ ವಯಸ್ಸನ್ನು ಬಿರುಸಾಗಿಯೇ ಕಳೆಯುತ್ತಿದ್ದಳು.

ಗಂಗಾ ಶಾನುಭೋಗರ ಮನೆಯಲ್ಲಿ ಅಡುಗೆ ಮಾಡಿ ಮಧ್ಯಾಹ್ನ ಕಳೆದು ಬರಬೇಕು.

ಸಂಜೆ ಏನನ್ನೊ ತಿಂದು ಮನೆಯಲ್ಲಿ ಮಲಗಿಕೊಳ್ಳಬೇಕು.

ಒಳಗೆ ಹಸಿ ಇದ್ದ ಒಣಗಿದ ಕಟ್ಟಿಗೆ ಅವಳು.

ದನದ ದುಡಿತ.

ದನಕ್ಕೂ...

ಆದರೆ ಗಂಗಾ ಕಲ್ಲಾಗಿದ್ದಳು.

ಒಂದು ದಿನ ಅದೇ ಶಾನುಭೋಗರ ಮನೆಯ ಅಡುಗೆ ಮಾಡಿ ಗಂಗಾ ತನ್ನ ಗೂಡಿಗೆ ಹೊರಟಿದ್ದಳು.

ಊರ ಆಚೆಗಿನ ಗುಡ್ಡದಿಂದ ಕಲ್ಲು ಹೇರಿಕೊಂಡು ಒಡ್ಡರ ಬಂಡಿ ನಡೆದಿತ್ತು.

ಗಂಗಾಗೆ ಇಂದು ಏಕೋ ಅತ್ತ ಲಕ್ಷ್ಯ ಹೋಯಿತು. ಒಂದು ಕ್ಷಣ ನಿಂತು ನೋಡಿದಳು.

ಅವಳಿಗೆ ಹೊಟ್ಟೆಯಲ್ಲಿ ವಿಲಕ್ಷಣ ಸಂಕಟವಾಯಿತು.

ಒಡ್ಡರ ಬಂಡಿಯನ್ನು ಕಂಡದ್ದು ಇದೇ ಮೊದಲ ಸಲವಲ್ಲ. ಈ ಊರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನಲ್ಲಿಯೆ ಹುಟ್ಟಿ ದೊಡ್ಡವಳಾಗಿದ್ದಳು. ಆ ಊರಿನಲ್ಲಿ ಕಲ್ಲು ಹೊರುವುದಕ್ಕೆ ಒಡ್ಡರ ಬಂಡಿಗಳೇ ಜಾಸ್ತಿ !

ಮನೆಗೆ ಹೊರಟು ಗಂಗಾ ಮತ್ತೊಂದು ಕ್ಷಣ ನಿಂತು ನೋಡುತ್ತಾಳೆ.

ಎರಡು ಎಮ್ಮೆಗಳು ಬಂಡೆಗಳನ್ನು ಎಳೆಯುತ್ತಿರುವುದನ್ನು ಕಂಡು ಇನ್ನೂ ಚಕಿತಳಾದಳು.

ಈ ಹಿಂದೆ ನೋಡಿದಾಗಲೂ ಎಮ್ಮೆಯೆ ಬಂಡೆ ಎಳೆಯುತ್ತಿರಬೇಕು.

ಎಮ್ಮೆ ಇಲ್ಲದಿದ್ದರೆ ಅದರ ತಮ್ಮ ! ತನ್ನ ಮೈಮಾಟ ನೋಡಿಕೊಂಡಳು.

ಒಣಗಿದ ಕಟ್ಟಿಗೆಗಿಂತ ಬೇರೆ ಏನಿಲ್ಲ. ಆದರೂ ಒಳಗೆ ಏನೋ ಹಸಿ!

ಉರಿಯುತ್ತಿದ್ದ ಅವಳ ಕಣ್ಣೂ ಒದ್ದೆಯಾದವು.

ಗಂಗಾ ಹಲವು ಹತ್ತು ಸಲ ಎಮ್ಮೆಬಂಡಿ ಕಂಡಿದ್ದಳು. ವಾಡಿಕೆ— ಮಾಮೂಲು.

ಆದರೆ ಇಂದು !

ಒಂದು ಕಣ್ಣಲ್ಲಿ ಎಮ್ಮೆ ಬಂಡಿ, ಇನ್ನೊಂದು ಕಣ್ಣಲ್ಲಿ ಶಾನುಭೋಗರ ಕೂಳು ಕುದಿಸುವ ತಾನು...

ಇಂದು ಅವಳಿಗೆ ತನ್ನ ಬಗ್ಗೆ ತಿರಸ್ಕಾರ ಬಂತು. ಇಲ್ಲ ಹೊಸ ಆಸೆ ಹುಟ್ಟಿತು.

ಅವಳ ಮುಗಿದ ಚಲುವಿಗೆ ಹುಟ್ಟಿದ ಆಸೆಗೆ ಗತಿ ?

ಒಮ್ಮೆ ಮನುಷ್ಯನ ಕಣ್ಣು ಏನೇನು ಕೆಲಸಮಾಡುತ್ತದೆ.

ಗಂಗಾನಿಗೆ ಅವಳ ಚಿಕ್ಕಮ್ಮ ಪುರಾಣದಲ್ಲಿ ಕೇಳಿದ ಕತೆ ನೆನಪಾಯಿತೊ ಇಲ್ಲವೊ ?

ಅರ್ಜುನ ಪಾಂಡವರಲ್ಲಿ ಬಲಶಾಲಿ.

ಯುದ್ಧಸಾರಿ ಕೌರವರನ್ನು ಎದುರಿಸಬೇಕು ಎಂದು ಶಂಖ ಹೊಡೆದಿದ್ದ.

ಕೃಷ್ಣನಿಗೆ ಹೇಳಿದ,

"ನನ್ನ ಶತ್ರುಗಳನ್ನು ಒಮ್ಮೆ ನಾನು ನೋಡಬೇಕು" ಎಂದ.

ಕೃಷ್ಣನಿಗೆ ಹೊಸತೇನೂ ಎನ್ನಿಸಲಿಲ್ಲ.

ಎಷ್ಟೋ ಸಲ ನೋಡಿದವರೇ ಇದ್ದಾರೆ, ಇವನ ಶತ್ರುಗಳು. ನೋಡಿದರೆ ನೋಡಲೊಲ್ಲವೇಕೆ ಎಂದು ಎರಡೂ ಸೈನ್ಯಗಳ ನಡುವೆ ರಥ ನಿಲ್ಲಿಸಿದ.

ಮೂರುಲೋಕದ ಗಂಡ.

Sri Vidyabharathi Book Centre, Sringeri

ಕೌರವರನ್ನು ಕೊಲ್ಲಲೆಂದೇ ಬಂದ ಪ್ರಚಂಡ ಏನನ್ನಬೇಕು ?

CC-O. In Public Domain. Digitized by eGangotri

"ಕೃಷ್ಣಾ ಇವರು ನನ್ನವರು, ಹಾಳು ರಾಜ್ಯಕ್ಕಾಗಿ, ಹುಲು ಸ್ವಾರ್ಥಕ್ಕಾಗಿ ಇವರನ್ನು ನಾನು ಕೊಲ್ಲಲಾರೆ: ಬೇಕಾದರೆ ಇವರೇ ನನ್ನನ್ನು ಕೊಲ್ಲಲಿ.

ನಾನು ಭಿಕ್ಷೆ ಬೇಡಿ ಬದುಕುತ್ತೇನೆ.

ನನ್ನವರನ್ನು ಕೊಂದು ತಂದ ರಾಜ್ಯ ನನಗೆ ಬೇಡ" ಅಂದ.

ಒಂದೊಂದು ಸಂಗತಿಯನ್ನು ಒಮ್ಮೊಮ್ಮೆ ಕಂಡರೆ ಇನ್ನೊಂದೇನೋ ಧುತ್ತೆಂದು ಬಂದು ನಿಲ್ಲುತ್ತದೆ ಮನಸ್ಸಿನೆದುರು.

ಗಂಗಾನಿಗೆ ಏನೆನ್ನಿಸಿರಬೇಕು ?

ಪಾತ್ರೆಗಟ್ಟಲೆ ಹಾಲು ಕರೆದು ತಟ್ಟೆ ತುಂಬ ಬೆಣ್ಣೆಕೊಟ್ಟು

ತುಪ್ಪದಲ್ಲಿ ಕೈತೊಳೆಸಿದ ಎಮ್ಮೆಗೆ ಈಗ ಏನು ಕೆಲಸ...?

ಬಂಡಿ ಎಳೆಯುವುದು....

ಬೀದಿಯ ಹೆಂಗಸರು ಹೈನುಮಾಡುವವರು ಈ ಎಮ್ಮೆ ನೋಡುತ್ತಾರೆಯೇ ?

ತುಪ್ಪ ತಿಂದವರು

ಹಾಲು ಉಂಡವರು...

ಯಾರಿಗೆ ಬೇಕು ? ಯಾರ ಕಣ್ಣಿಗೆ ಇದು ಹಿಗ್ಗು ತಂದೀತು.

ಎಂತಹದೋ ದೀಪದೆದುರಿಗೆ ತರತರದ ಪತಂಗಗಳು.

ರೆಕ್ಕೆ ಸುಟ್ಟುಬಿದ್ದವು.

ತನ್ನ ಮನಸ್ಸಿನ ಸ್ಮಶಾನದಲ್ಲಿ ಸುಡದೆ ಉಳಿದ ಹೆಣಗಳ ರಾಶಿ.

ಬಯಕೆಗಳ ದೆವ್ವ ಅವಳನ್ನು ಅಂಡಲೆಯುತ್ತಿತ್ತು.

ಚಿಟ್ಟನೆ ಚೀರುವಂತಾಗಿತ್ತು.

ಆದರೆ ತಾನು ನಡೆದದ್ದು ಬೀದಿಯಲ್ಲಿ ಎನ್ನುವುದನ್ನು ಅವಳು ಮರೆತಿದ್ದರೆ—

ಗಂಗಾ...

ಗಂಗಾ ತಾನು ಈಗ ಬಂಡಿ ಎಳೆಯುತ್ತ ತನ್ನ ಮನೆಬಾಗಿಲಿಗೆ ಬಂದಿದ್ದಾಳೆ.

ಬಾಗಿಲುಗಳನ್ನು ಧಡಾರನೆ ನೂಕಿ ಒಳಗೆ ಹೋಗಿ ಚಾಪೆಯಮೇಲೆ ಬಿದ್ದುಕೊಂಡಳು.

ಕತ್ತಲಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿತ್ಯದಂತೆ ದೀಪ ಹಚ್ಚಲಿಲ್ಲ.

ರಾತ್ರಿಯಾದ ಕೂಡಲೆ ಗೋಡೆಯ ಮೇಲೆ ಮೊಳೆ ಹೊಡಿಸಿಕೊಂಡು ನೇತಾಡುತ್ತಿದ್ದ ದೇವರೆದುರು ತುಪ್ಪದ ದೀಪ ಹಚ್ಚಿಡುವುದು ನಿತ್ಯದ ಚಟ.

ಗಂಗಾನ ಚಿಕ್ಕಮ್ಮ ಅದನ್ನು ಮಾಡುತ್ತಿದ್ದಳು.

ಬಿಟ್ಟರೆ ಏನೋ ಎಂದು ಇವಳೂ ಹಾಗೆ ಮಾಡುತ್ತಾಳೆ. ಆದರೆ ಇಂದು ಅವಳಿಗೆ ಅದು ನೆನಪಾಗದಷ್ಟು ತಲೆಗೆ ಡ್ರಿಲ್ ಹೊಡೆತ !

ಕತ್ತಲೆಯೇ ಹಿತವೆನ್ನಿಸಿತು.

ದೇವರು ಮರೆತದ್ದೆ ಚೆನ್ನಾಯಿತು ಎಂದಳು. ಚಾಪೆ ಬಿಟ್ಟು ಏಳಲಿಲ್ಲ.

ಬೆಳಗಾಗುವವರೆಗೂ ನಿದ್ದೆ ಏಕೆ ಬರಬೇಕು? ದಿನಾಲು ಬಡಿದು ಚೆಲ್ಲಿದಂತೆ ಮಲಗುತ್ತಿದ್ದ ಅವಳು ರಾತ್ರಿ ಕಣ್ಣಿಗೆ ಕಣ್ಣು ಹಚ್ಚಲಿಲ್ಲ.

ಓಣಿಯ ನಾಯಿಗಳು ಬೊಗಳಿದ್ದೆಲ್ಲ ಗೊತ್ತು. ದೂರ ಊರ ಹೊರಗಿನ ಗಿರಣಿಯಲ್ಲಿ ಬಾರಿಸಿದ ಗಂಟೆಗಳನ್ನು ತಾನು ತಪ್ಪದೆ ಎಲ್ಲವನ್ನೂ ಎಣಿಸಿದ್ದಳು.

ಗಸ್ತಿಯವರ ಕೂಗು ಕೇಳಿದಾಗ ಇನ್ನೂ ತನಗೆ ನಿದ್ದೆ ಬಂದಿಲ್ಲ ಎಂದು ಖಚಿತಪಡಿಸಿಕೊಂಡಳು. ಬೆಳಗಿನ ಆರು ಹೊಡೆದದ್ದು ಕೇಳಿದಾಗ,

ತನ್ನನ್ನು ಯಾರೋ ಮಲಗಲು ಇನ್ನು ಬಿಡಲಾರರು ಎಂದುಕೊಂಡಳು.

ಆದರೆ ಇವಳು ಮಲಗಿದರೇನು ?

ಎದ್ದರೇನು ?

ಆದರೆ ಹಾಗೆಲ್ಲಿದೆ...

ಒಡ್ಡರವರು ರಾತ್ರಿ ಎಮ್ಮೆ ಮಲಗಿತ್ತೇ ಇಲ್ಲವೆ ? ಲೆಕ್ಕ ಹಾಕಲಾರ ಬೆಳಿಗ್ಗೆ ಎದ್ದು ಚಾಟಿಯನ್ನು ಹೆಗಲಮೇಲೆ ಹಾಕಿಕೊಳ್ಳುತ್ತಾನೆ.

ಎಮ್ಮೆಯ ಹತ್ತಿರ ಬರುತ್ತಾನೆ.

ಎಮ್ಮೆ ಎಷ್ಟಾದರು ಹುಷಾರಿ ! ಹೆಣ್ಣು ಅಲ್ಲವೆ ? ಹೊಡೆತ ತಿಂದಬಳಿಕ ಏಳುವುದಿಲ್ಲ. ಏಳದಿದ್ದರೆ ಹೊಡೆತ ತಪ್ಪಿದ್ದಲ್ಲ.

ಕಣ್ಣಿಗೊಂಬೆಯಲ್ಲಿ ಈ ಚಿತ್ರ ಗಂಗಾನಿಗೆ ಆರಾಯಿತು. ಏಳಬೇಕು. ಎಂಬುದಕ್ಕೆ ಶ್ಯಾನುಭೋಗರ ಮನೆಗೆ...ಮೇಲುನೀರು, ಕಾಯಿಪಲ್ಲೆ

ಸಾದೆ. ಸೀದ........

ಇದೆಲ್ಲ ಇಲ್ಲ ತನ್ನದೇನಿದೆ...

ಈಗ ಅದೂ...

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಳು ಶೀನನ ನೆನಪು...

ಇನ್ನೂ ಯಾವ ಮುಖವೂ ಇಲ್ಲ.

ಆತ ಬರಿ ಅರ್ಥವಿಲ್ಲದ ಪುರುಷಸೂಕ್ತ ಹೇಳಿದ್ದ.

ಮತ್ತೊಮ್ಮೆ ಎಂದೊ ಕೇಳಿದ್ದಕ್ಕೆ ಶೀನ ಪುರುಷಸೂಕ್ತದ ಅರ್ಥ ಹೇಳಿದ್ದು ಹೀಗೆ—

"ಗಂಡಸರಿಗೆ ಸಾವಿರ ತಲೆ–

ಸಾವಿರ ಬಾಯಿ

ಕೈಕಾಲು ಸಾವಿರ."

'ಹೆಣ್ಣು ಒಂಟಿಯಾಗಿ ಬಾಳುವಾಗ ಇಂತಹ ಅನುಕೂಲತೆಯಿರುವ ಗಂಡಸೊಂದಿದ್ದರೆ...' ಎನ್ನಿಸಿತ್ತು ಗಂಗಾನಿಗೆ

ಈ ದಿನ ಗಂಗಾನಿಗೆ ಬೆಳ್ಳಂಬೆಳಗು ತಾನು

ಬದುಕಿದ್ದ ಎಚ್ಚರವಿಲ್ಲ, ಸತ್ತ ಚಿಹ್ನೆಗಳೂ ಇಲ್ಲ.

ಇಂದು ಇದ್ದಾಳೆ. ಆದರೆ ಸರಿ ಇಲ್ಲ ಏನೋ ಕೊಂಕಿದೆ.

ಕಣ್ಣು ಮುಚ್ಚಿಕೊಂಡರೂ

ಕಲ್ಲು ಹೇರಿದ ಎಮ್ಮೆಬಂಡೆಯ ಚಿತ್ರ ಅಂಟಿದೆ. ಈ ಹಾಳು ಚಿತ್ರ ಏಕೇ ? ಬೆಳಗಾಗುತ್ತಲೆ ಎಂದುಕೊಂಡು, ಚಿಕ್ಕಮ್ಮ ಹೇಳಿಕೊಟ್ಟ

"ಕರಾಗ್ರೆ ವಸತೆ..." ಅಂದಳು.

ತನ್ನ ಕೈಗಳನ್ನು ಮಸೆದು ನೋಡಿಕೊಂಡಳು. ಅಂಗೈ ಬರಿದು...

ನಿನ್ನೆ ಗೌಡರ ಚಂಪಾನ ಮದರಂಗಿ ಇದ್ದ ಕೈ ನೋಡಿದ್ದಳು.

ಎಲ್ಲವೂ ತನ್ನದು ಬರಿದು.

ಎಂದೂ ತುಂಬಲಾರದೆ ಇದ್ದ ಬರಿಗೊಡ

ಕಣ್ಣು ಒರೆಸಿಕೊಂಡಳು.

ಎಮ್ಮೆ ಬಂಡಿ ಎಳೆಯುವ ಚಿತ್ರ ಹೋಗಲಿಲ್ಲ.

ಹಾಳು ಮನೆಯಲ್ಲಿ ಬಿದ್ದುಕೊಂಡರೂ

ಈ ಚಿತ್ರ !

ಥೂ ಎಂದಳು ಗಂಗಾ !

ಛೀ ಬೇಡ ! ಬೇಡ ! ಎಂದುಕೊಂಡಳು.

ಕಳ್ಳ [illegible] ಚಿಲುಕ ಹಾಕಿದ ಬಾಗಿಲ ಸಂದಿಯೊಳಗಿಂದ ಕೈಹಾಕಿ ನುಗ್ಗಿದ್ದ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಸೂರ್ಯ ಗಂಡಸು. ತನ್ನ ಮನೆಯಲ್ಲಿಯು ಅವನ ಚಟುವಟಿಕೆ ಕಂಡು ಗಂಗಾ ನಾಚಿ ಎದ್ದಳು.

ಉದ್ದ ಹೆಂಗಸು ದಿನದ ಯಂತ್ರದ ಬಾಯಿಗೆ ಬಿದ್ದಳು. ಕರುಣವಿಲ್ಲದ ಹೊತ್ತು ಅವಳನ್ನು ಅರೆಯಲು ನಿಂತಿತ್ತು.

ಗಂಗಾಲಹರಿ ಆರಂಭವಾಯಿತು.

"ಸಮೃದ್ಧಂ..."

ಶೀನನ ಬಾಲ್ಯಲೀಲೆ

ಶೀನನ ಅಪ್ಪ ಬ್ರಾಹ್ಮಣ !

ಧರ್ಮವನ್ನು ತಲೆಯಮೇಲೆ ಹೊತ್ತು ಹೊಟ್ಟೆಹೊರಕೊಳ್ಳುವಾತ.

ಆ ತಂದೆ ಮಗನಿಗೆ ಜನ್ಮವೇನೋ ಕೊಟ್ಟ. ಆದರೆ ಬ್ರಾಹ್ಮಣ್ಯವನ್ನು ಕೊಡಲೇ ಇಲ್ಲ. ಮಂಗನ ಕೈಲಿ ಮಾಣಿಕ್ಯ ಯಾರು ಕೊಟ್ಟಾರು ?

ಶೀನ ಚಿಕ್ಕಂದಿನಿಂದಲೂ ಲಗಾಮಿಲ್ಲದ ಕುದುರೆ.

ಅಪ್ಪನಿಗೆ ಧರ್ಮ ತಲೆಯಮೇಲಿದ್ದರೆ—ಮಗನಿಗೆ ಕಾಲ ಕೆಳಗಡೆ. ಶೀನನ ತಂದೆಯ ಹೆಸರು ಅಪ್ಪಾಚಾರಿ.

ಶೀನ ಮಹಾಪುರುಷನಾಗುವ ಲಕ್ಷಣ ಬಾಲ್ಯದಲ್ಲಿಯೆ ತೋರಿದ್ದ.

ಅನೇಕ ಮಹಾಪುರುಷರು ಚಿಕ್ಕಂದಿನಲ್ಲಿಯೆ ಅನೇಕ ಪವಾಡ ಎಸಗುತ್ತಾರೆ.

ಗಂಗಾತೀರದಲ್ಲಿ ಪುರುಷಸೂಕ್ತ ಹೇಳುವ ಮುಂದಿನ ಈ ಮಹಿಮನ ಪವಾಡ ಚಿಕ್ಕಂದಿನಲ್ಲಿಯೆ !

ಅಪ್ಪಾಚಾರಿಗೆ ಈತನೇ ಏಕಮೇವ ಅಶ್ವತ್ಥಾಮ.

ಇವನನ್ನು ಕುಲದೀಪಕನಾಗಿ ಪಡೆದ ಗುರುತೆಂದು ಅಪ್ಪಾಚಾರ್ಯರು ಹಿತ್ತಲಲ್ಲಿ ಅರಳೆಗಿಡ ನಟ್ಟಿದ್ದರು.

ಆಗ ಬೇರೆ ಕಾಲ !

ಇನ್ನೂ ಊರಲ್ಲಿ ಹಲವರಿಗೆ ಮಕ್ಕಳು ಬೇಕಿದ್ದರು. ಈಗ ಊರಲ್ಲಿ ಮಕ್ಕಳನ್ನು ನಿಲ್ಲಿಸುವ ಆಸ್ಪತ್ರೆಯಾಗಿದೆ. ಆ ಕಾಲದಲ್ಲಿ ಮಕ್ಕಳನ್ನು ಕೊಡುವ ಆಸ್ಪತ್ರೆಯೆಂದರೆ ಅಪ್ಪಾಚಾರ್ಯರ ಮನೆಯ ಅಶ್ವತ್ಥಕಟ್ಟೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈಗ ನೋಡಿದವರ ಭಾಷ್ಯ ಹೀಗಿದೆ—

ಆಸ್ಪತ್ರೆಗೆ ಹೋಗಿ ಲೂಪ್ ಹಾಕಿಸಿಕೊಂಡ ಶಸ್ತ್ರ ಚಿಕಿತ್ಸೆ ಮಾಡಿಕೊಂಡ ಹೆಂಗಸು ಮಕ್ಕಳನ್ನು ಹಡೆದಿದ್ದಾಳೆ.

ಬೇಡೆಂದು ಮೊರೆಯಿಟ್ಟರೂ ಬಿಡಲಾರದ ಸಂತಾನ ಇಂದು.

ಆದರೆ ಅಂದು ಮಕ್ಕಳಿಲ್ಲ ಸ್ವಾಮಿ ಎಂದು ಅಶ್ವತ್ಥಮರ ಸುತ್ತಿ ಬಂದವರು ವರುಷ ತುಂಬುವುದರೊಳಗಾಗಿ ತೊಟ್ಟಿಲು ತೂಗಿಯೇ ಇದ್ದಾರೆ.

ಇದೇ ಕಿಲಾಡಿ ಶೀನ ಹುಡುಗಾಟಿಕೆ ಮಾಡುತ್ತಾನೆ.

ನಮ್ಮ ಅಪ್ಪ ಇದ್ದರೆ ಈ ಅರಳಿಗಿಡದ ಬದಿಯಲ್ಲೆ ಮಕ್ಕಳನ್ನು ಕೊಡದ ಇನ್ನೊಂದು ಗಿಡ ನೆಡುತ್ತಿದ್ದ.

ಈ ಆಸ್ಪತ್ರೆ ಈ ಲೂಪ್‌ಗಿಂತ ಅದು ನೂರಕ್ಕೆ ನೂರು ಫಲಕಾರಿ.

ಆದರೆ ಆತ ಸತ್ತು......

ಈ ಶೀನನಿಗೆ ಇನ್ನೂ ಆಗ ಉಪನಯನವಾಗಿತ್ತೊ ಇಲ್ಲವೊ ಯಾರಿಗೆ ಗೊತ್ತು ?

ದಡ್ಡ ಹುಡುಗರ ಹಾಗೆ ಶೀನ ಪುಸ್ತಕದ ಹುಳು ಆಗಿ ಬೆಳೆಯಲಿಲ್ಲ. ವಿವಿಧ ಚಟುವಟಿಕೆ.

ದೊಡ್ಡ ಆಚಾರ್ಯರ ಪುಟ್ಟ ಮಗ.

ಬಾಲ್ಯದಿಂದಲೇ ಅಗ್ನಿಹೋತ್ರದ ಸಂಸ್ಕಾರವಿತ್ತು.

ಮೀನುಗಾರರ ಜತೆ ಮೀನ ಹಿಡಿಯಲು ಹೋಗುತ್ತಿದ್ದ.

ಒಂದೆ ಎರಡೆ ಅನೇಕ.

ಶೀನನಿಗೆ ಓದು ಒಕ್ಕಲು ಬುದ್ಧಿಯೊ ?

ಇನ್ನೂ ಭೆಟ್ಟಿಯಾಗಿಲ್ಲ......

ಅಪ್ಪಾಚಾರಿಯ ಹಿತ್ತಲದಲ್ಲಿ ಬೆಳಿಗ್ಗೆ ಹೋದರೆ ಊರಲ್ಲಿ ಎಷ್ಟು ಜನಕ್ಕೆ ಮಕ್ಕಳಿಲ್ಲ ಎನ್ನುವುದರ ಲೆಕ್ಕ ಸಿಕ್ಕುತ್ತದೆ.

ಆದರೆ—ಚಮತ್ಕಾರ ಹೀಗೆ.

ಪ್ರತಿ ವರುಷವೂ ಹೊಸ ಮದುವೆಯಾದ ಹುಡುಗರಿಗೆ ಆಗ ಮಕ್ಕಳ ಹಸಿವು ತಡೆಯದಿತ್ತು.

ಎಲ್ಲರೂ ಅಪ್ಪಾಚಾರಿಯ ಹಿತ್ತಲದಲ್ಲಿ ಹಾಜರಿ ಕೊಟ್ಟು ಹೋಗುವವರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆ ದಿನ ಯಾವಳೋ ಹೆಂಗಸು.

ಅಶ್ವತ್ಥದ ಮುಂದೆ ತುಪ್ಪದ ದೀಪ ಹಚ್ಚಿ ಹೋಗಿದ್ದಳು.

ಶೀನ ಶಾಲೆಗೆ ಹೋಗಬೇಕು !

ಶಾಲೆಯೆಂದರೆ ಜೈಲಿಗಿಂತ ಬೇರೆ ಏನು.

ಆ ಪುರಾಣಿ ಟೀಚರ್.

ಅವನ ಬೆತ್ತ

ಮೂಲದಂಡಿಗೆ

ಕುರ್ಚಿ ಕೂಡುವುದು

ನಾನಾತರದ ಶಿಕ್ಷೆ

ಇಂಡಿಯನ್ ಪೀನಲ್ ಕೋಡಿನಲ್ಲಿ ಇಲ್ಲದ ತರಗಳನ್ನು ಈ ಟೀಚರ್ ಬಳಕೆಗೆ ತಂದಿದ್ದರು.

ಹಲವಾರು ಅಭ್ಯಾಸಗಳಲ್ಲಿ ಆಸಕ್ತನಾದ ಶೀನ ಶಾಲೆಯ ಜೈಲಿನಿಂದ ಬಿಡುಗಡೆಯಾಗುವ ತನಕ...

ಈಗ ಆತ ಕೈತೊಳೆದ ಕೂಡಲೆ ಅಗ್ನಿಹೋತ್ರಕ್ಕಾಗಿ ಅಶ್ವತ್ಥಕಟ್ಟೆಯ ಕಡೆಗೆ ಬಂದ.

ಶೀನನಿಗೆ ದೇವರ ಮೇಲೆ ಅಗಾಧ ವಿಶ್ವಾಸ.

ಅವನನ್ನು ಪೂಜಿಸುತ್ತಿದ್ದ ಅಪ್ಪಾಚಾರಿಗೆ ಫಲ ದೊರಕಿತ್ತೊ ಇಲ್ಲವೊ ಗೊತ್ತಿಲ್ಲ. ಆದರೆ ಮಗನಿಗೆ ಮಾತ್ರ ದೈವಾನುಗ್ರಹ ಸಾಕಷ್ಟಿತ್ತು.

ಹಿತ್ತಲ ಬಾಗಿಲು ತೆಗೆದು ಅಶ್ವತ್ಥಮರದ ಕೆಳಗಡೆ ನೋಡಿದ.

ದೇವರೆಂದೂ ಕೊಟ್ಟ ಭಾಷೆಗೆ ತಪ್ಪುವುದಿಲ್ಲ.

ಶೀನನ ಕಣ್ಣಿಗೆ ಬೆಳಕು ಬಂತು.

ಕಟ್ಟೆಯವರೆಗೆ ನಡೆದು ಬಂದು ಅಲ್ಲಿ ಭೂಗರ್ಭ ಶೋಧನೆ ನಡೆಸಿದ.

ಕೂಡಲೆ ತವನಿಧಿ ದೊರೆಯಿತು.

ಅಪ್ಪ ಇಂತಹ ಕಾಲದಲ್ಲಿ ಬರಲಾರನು ಎಂದು ಅವನಿಗೆ ಗೊತ್ತೇ ಇತ್ತು. ಆದರೂ ಚೂಟಿಯಾದ ಹುಡುಗ ಶೀನ ರಿಸ್ಕ್ ತೆಗೆದುಕೊಳ್ಳುವವನಲ್ಲ.

ಅಪ್ಪನನ್ನು ಇಲ್ಲಿಗೆ ಕರೆಸಲಾರದ ಹೊಣೆಯನ್ನು ದೇವರ ಮೇಲೆ ಹೊರಿಸಿದ.

"ದೇವಾ ! ಅಪ್ಪ ಇಲ್ಲಿ ಬರದಂತೆ ನೋಡಿಕೋ !"

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಕೈಯೊಳಗಿದ್ದ ಸಂಸ್ಕಾರಕ್ಕೆ ಸಿದ್ಧವಾದ ಬೀಡಿಯೊಂದಿಗೆ ನಮಸ್ಕರಿಸಿದ.

ಉರಿಯುತ್ತಿದ್ದ ತುಪ್ಪದ ದೀಪಕೆ ಬೀಡಿ ಹಚ್ಚಿದ. ಸಜ್ಜನರಿಗೆ ಲೋಕದಲ್ಲಿ ಉಪದ್ರುವ ಬಹಳ.

ಸತ್ಕಾರ್ಯಕ್ಕೆ ವಿಘ್ನಗಳು ಅಷ್ಟೇ !

ಮತ್ತೆ ಆತನಿಗೆ ಭಯ ಬಂತು.

ಅಪ್ಪ ಬಂದೇ ಬಿಟ್ಟರೆ...?

ದೇವನಿದ್ದಾನೆ ; ನನಗೇಕೆ ಭಯ ?

ಇನ್ನೊಮ್ಮೆ ಆತನಿಗೆ ಸರಿಯಾಗಿ ಹೇಳಿಟ್ಟು ನನ್ನ ಕೆಲಸ ಆರಂಭಿಸುವುದು ಒಳ್ಳೆಯದು ಎಂದ.

"ಸ್ವಾಮಿ ದೇವರೆ—"

ನಾನು ಬಾಲಕ. ನೀನು ಎಂತೆಂತಹ ಜನರ ಎಷ್ಟೆಷ್ಟು, ದೊಡ್ಡ ಕೆಲಸ ಮಾಡಿದ್ದೀ.

ನಮ್ಮ ತಂದೆಯ ಕೈಯಿಂದ ನನ್ನನ್ನು ಪಾರು ಮಾಡುವುದೇನು ಚಿಕ್ಕ ಕೆಲಸವಲ್ಲ !

ನಾನು ಬೆಂಕಿ ಹಚ್ಚಿದ್ದ ಈ ಬೀಡಿಯನ್ನು ದಾರದವರೆಗೂ ಎಳೆಯತಕ್ಕವ. ಅಷ್ಟರವರೆಗೆ ನಮ್ಮ ತಂದೆ ಬರಲಾರದಂತೆ ಕಾಯುವ ಭಾರ ನಿನ್ನದು" ಎಂದ.

ಏನೋ ನೆನಪಾಯಿತು.

ದೇವರು ಶುಷ್ಕ ಭಕ್ತಿಗೆ ಮೆಚ್ಚಲಾರ.

ಜೇಬಿನಲ್ಲಿ ಒಂದು ಪುಟ್ಟ ಪುಡಿಗಾಸಿತ್ತು.

ಅವನ ಮುಂದೆ ಇಟ್ಟು ಅರ್ಪಿಸಿ, ಬೀಡಿ ಎಳೆದ.

ಒಮ್ಮೆ, ಎರಡು ಸಲ.

ಮತ್ತೊಮ್ಮೆ, ಇನ್ನೊಮ್ಮೆ, ಎಳೆದೇ ಎಳೆದ. ಈಗ ಆತ ನಿಶ್ಚಿಂತನಾಗಿದ್ದ.

ಅವನಿಗಿರುವುದು ತಂದೆಯದೇ ಒಂದು ಅಂಜಿಕೆ, ಅವನನ್ನು ನೋಡಿಕೊಳ್ಳಲು ದೇವನನ್ನೇ ನೇಮಿಸಿಬಿಟ್ಟಿದ್ದ

ಇದು ಶೀ[illegible] ಪದ್ಧತಿ.
Sri Vidyabharathi Book Centre, Sringeri

ಎಲ್ಲ ಭಾರವನ್ನು ದೇವರಿಗೆ ಒಪ್ಪಿಸಬೇಕು,

 CC-O. In Public Domain. Digitized by eGangotri

ಅಂದರೆ ನಮಗೆ ಕ್ಷೇಮ ಆನಂದ.

ಶೀನ ಇದನ್ನು ಗೀತೆಯಿಂದ ಕಲಿಯಲಿಲ್ಲ, ಅಗತ್ಯದಿಂದ ತಿಳಿದಿದ್ದ.

ಆನಂದಾನುಭವದಲ್ಲಿ ಭಯ ಇರಬಾರದು.

ಕಟ್ಟೆಯ ತುದಿಗೆ ಕುಳಿತು ಸೇದುತ್ತಿದ್ದ ಶೀನ ಈಗ ಅಶ್ವತ್ಥ ಮರವನ್ನೆ ಆನಿಸಿಕೊಂಡು ಹಾಯಾಗಿ ಕುಳಿತು ಬೀಡಿ ಸೇದುತ್ತಿದ್ದ.

ಬೆನ್ನಿಗೆ ದೇವರ ರಕ್ಷೆ.

ತನ್ನ ಎರಡು ಬೆರಳ ಸಂದಿನೊಳಗೆ ಸಿಕ್ಕು ಮೈಸುಟ್ಟುಕೊಂಡು ಹಿಗ್ಗಿ ನೀಡುತ್ತಿದ್ದ ಬೀಡಿಯ ಬಗ್ಗೆ ಶೀನನಿಗೆ ಅಪಾರ ಮಮತೆ ಬಂದಿರಬೇಕು ಮತ್ತೆ ಚುಂಬಿಸಿದ.

ಒಣಗಿದ ತುಟಿಗಳನ್ನು ಹಸಿ ನಾಲಗೆಯಿಂದ ಒದ್ದೆ ಮಾಡಿದ ಶೀನ.

ಶಾಲೆಯಲ್ಲಿ ಆ ಹಾಳು ಪುರಾಣಿ ಗುರುಗಳು ಬಹಳ....

ನಿತ್ಯ ಅಪರಾಧಿಗಳ ಶೋಧನೆ ನಡೆಸಬೇಕು.

ಬೀಡಿ ಸೇದಿದವರ ಕೈ ಮೂಸಬೇಕು ?

ಶೀನನಿಗೆ ಅಲ್ಲಿಯೂ ದೇವರ ನೆರವು.

ಮನೆಯಿಂದ ಬೀಡಿ ಸೇದಿ, ಕೈಗೆ ತುಲಸಿ ತಿಕ್ಕಿಕೊಂಡು ಜೇಬಿನಲ್ಲಿ ಎರಡು ಎಸಳಿಟ್ಟುಕೊಂಡು ಶಾಲೆಗೆ ಹೋಗಬೇಕು.

ಬೀಡಿ ಸೇದುವವರ ತುಟಿ ಕಪ್ಪು ಸೀಳಿ ಹೋಗಿರುತ್ತವೆ.

ಎಂಬುದು ಶಿಕ್ಷಕರ ಅಪರಾಧಿ ಸಂಶೋಧಕ ಗಮಕಗಳು. ಶೀನ ಬೀಡಿಯನ್ನು ಎಂದೂ ಒಂಟಿಯಾಗಿ ತೆಗೆದುಕೊಳ್ಳದೆ ಜತೆಗೆ ಬೀಡಾ ತೆಗೆದುಕೊಳ್ಳುತ್ತಿರುವಲ್ಲಿ ತಪ್ಪಿದವನೇ ಅಲ್ಲ.

ಈಗ ಶಾಲೆಗೆ ಹೊರಟು ನಿಂತ.

ನಿನ್ನೆ ಗೆಳೆಯ ಅಬ್ದುಲ್ ಇವನ ಬೀಡಾ ತಾನೆ ಸ್ವಾಹಾ ಮಾಡಿದ್ದ. ಅಲ್ಲದೆ ಸ್ನೇಹಿತರು ಕೇಳಿದ ಯಾವ ವಸ್ತುವನ್ನು ಇಲ್ಲ ಎಂದಿಲ್ಲ ಈ ಕರ್ಣ.

ಅಯ್ಯೋ ತಾನು ಬೀಡಾ ಹಾಕಲೇಬೇಕು ? ಶೀನ ಸ್ವಲ್ಪ ಅನಾಥನಾಗಿ ಮೊರೆಯಿಟ್ಟ !

"ಬೀಡಾಕ್ಕಾಗಿ ಏನು ಮಾಡಬೇಕು ?"

ತುಟಿಗೆ ಹಚ್ಚಿದ ಕೈಯನ್ನು ಚಿಂತಾಕ್ರಾಂತನಾಗಿ ನೆಲಕ್ಕೆ ಊರಿದ.

ತನ್ನ ಕೈಯ ಬುಡದಲ್ಲಿಯೆ ಎಲೆ ಅಡಿಕೆ? ದೇವನ ಬಗ್ಗೆ ಅವನ ಅಂತಃಕರಣದ ಬಗ್ಗೆ [illegible]

Sri Vidyabharathi Book Centre, Sringeri

 CC-O. In Public Domain. Digitized by eGangotri

ಎಲೆ ಅಡಿಕೆ ಕೈಗೆತ್ತಿಕೊಂಡು, ಕಣ್ಣು ಮುಚ್ಚಿ ಹೇಳಿದ,

ದೇವಾ !

ನಾನು ಚಿಕ್ಕವ ಬಹಳ ಚಿಕ್ಕವ.

ನನ್ನಿಂದ ಈ ಬೀಡಿ, ಎಲೆ ಅಡಿಕೆ ಮುಂತಾದ ಕೆಲಸಗಳನ್ನು ಚಾಚೂ ತಪ್ಪದೆ ಮಾಡಿಸುವ ನಿನ್ನ ಕೃಪೆ ಅಗಾಧವಾದದ್ದು.

ಇದು ನಿನಗೂ ಅಭ್ಯಾಸವಾಗಿದೆ. ಹಳೆಯ ಅಭ್ಯಾಸ.

ಧ್ರುವ ಎಂಬ ಹುಡುಗನಿಗೆ ನೀನು ನನಗಿಂತ ಏನು ಕಮ್ಮಿ ಮಾಡಿದ್ದೀ ?

ನಿನಗೆ ಹಿರಿಯ ಕಿರಿಯರೆಂಬ ಭೇದ ಏಕೆ. ನಮ್ಮ ಟೀಚರಿಗೆ ಅದೆಲ್ಲ ಇರಲಿ.

ದೇವಾ ನಿನ್ನ ಉಪಕಾರ ಬಹಳವಾಯಿತು. ನಾನು ಪೂರ್ತಿ ಬೀಡಿ ಸೇದುವವರೆಗೆ ತಂದೆ ಬರದಂತೆ ಅವರನ್ನು ಸ್ಥಾನಪ್ರತಿಬಂಧಕ ಮಾಡಿದಿ. ನಾನು ಬೀಡಿ ಸೇದಿದ್ದು ಟೀಚರಿಗೆ ಗೊತ್ತಾಗಬಾರದೆಂದು ಎಲೆ ಅಡಿಕೆ ಕೈಗೆ ಕೊಟ್ಟಿದ್ದೀ.

ಇನ್ನೇನು ಬೀಡಿಯು ಬೆಂಕಿದಾರಕ್ಕೆ ಬಂತು.

ಕೊನೆಯ ಸೆಳೆತ ಎಳೆದು ಕೆಳಗೆ ನೋಡಿದ. ಒಂದಾಣೆಯ ಎರಡು ತುಂಡುಗಳು. ದೇವರ ದಯೆ ಎಂತಹುದು.

"ಮೂಕಂ ಕರೋತಿ ವಾಚಾಲಂ."

ವಾಚಾಲನನ್ನೂ ಮೂಕನನ್ನಾಗಿ ಮಾಡುತ್ತದೆ.

ಬೆಚ್ಚಿದ.

ಮೇಲೆ ಮುಖ ಮಾಡಿ ಕೊನೆಯ ಹೊಗೆ ಊದಿದ. ನಿರ್ಮಾಲ್ಯವಾದ ಬೀಡಿಯನ್ನು ಅಲ್ಲೇ ಎಸೆದ. ಅವನಿಗೆ ದೈವಬಲವೇ ಇತ್ತು. ಎಲ್ಲಿ ಎಸೆದರೇನು ? ಹಿತ್ತಲಲ್ಲಿ ಹೊಗೆ—

ರಾಜಕೀಯ ಪ್ರಚಾರಿಯ ಮನಸ್ಸನ್ನು ವ್ಯಾಪಿಸಿದ ಅಧಿಕಾರದಾಹ ವಾಗಿತ್ತು.

ಆರ ಬಂದಿದ್ದರೂ ವಾಸನೆ, ಸಂದೇಹಕ್ಕೆ ಅವಕಾಶ ಸಾಕಷ್ಟಿತ್ತು.

ಶೀನನ ಅಪ್ಪ ಪಿಶಾಚದಂತೆ ಹಿತ್ತಲಿಗೆ ನುಗ್ಗಬೇಕೆ ?

ಅಪ್ಪನ ಈ ರಾಕ್ಷಸೀಕೃತ್ಯದ ಪರಿಚಯು ಇದೇ ಮೊದಲ ಸಲವಲ್ಲ ಶೀನನಿಗೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಶೀನನ ಬ್ರೈನ್ ಬಹಳ ಫಲವತ್ತಾದುದು.

ಸ್ವತಃ ದೇವರೇ ಅದನ್ನು ಕೃಷಿ ಮಾಡಿದ್ದು.

ತಡಮಾಡಲೇ ಇಲ್ಲ. ಹೆಗಲಿಗೆ ಜೋತುಬಿದ್ದ ಚೀಲದಿಂದ ಸ್ಲೇಟು ತೆಗೆದ.

ಬಳಪ ಝಳಪಿಸಿ ಅದರ ಮೇಲೆ—

"ಈ ಸ್ಥಳದಲ್ಲಿ ಯಾರೂ ಬೀಡಿ ಕುಡಿಯಬಾರದು" ಎಂದು ಬರೆದ.

ದಾರವೊಂದನ್ನು ಹುಡುಕಿ ಕಟ್ಟಿ ಅಶ್ವತ್ಥಕಟ್ಟೆಯ ದೀಪದ ಕಂಬಕ್ಕೆ ನೇತು ಹಾಕುವ ಹೊತ್ತಿಗೆ ಆತನ ತೀರ್ಥರೂಪರ ಸಾಕ್ಷಾತ್ಕಾರ.

ಹೃದಯ ತುಂಬಿ ಮಗನ ಧರ್ಮಕಾರ್ಯ ಕಂಡು ಹಿಗ್ಗಿಹೋದರು ತಂದೆ.

ಇಂತಹ ಸತ್ಪುತ್ರನನ್ನು ಕೊಟ್ಟಿದ್ದಕ್ಕೆ ಅದೇ ಅಶ್ವತ್ಥನಾರಸಿಂಹನಿಗೆ ನಮಿಸಿದರು.

"ದೇವರ ಸನ್ನಿಧಿಯಲ್ಲೂ ಬೀಡಿ ಸೇದುತ್ತವೆ ಪಾಪಿ ಮುಂಡೇವು...."

"ದುರಭ್ಯಾಸ..."

ಸ್ಲೇಟನ್ನು ಅಲ್ಲೇ ಬಿಟ್ಟು ಹೊರಟು ನಡೆದ.

ಶೀನ ರಾಜಕೀಯ ಧುರೀಣರಂತೆ ದೂರಾಲೋಚನೆ ಇಲ್ಲದೆ ಏನೂ ಮಾಡಿದವನಲ್ಲ.

ಸ್ಲೇಟ್ ಬಿಟ್ಟು ಹೋಗುವುದರಿಂದ ಆತನಿಗೆ ಇಬ್ಬಗೆಯ ಲಾಭ.

ತಂದೆಯ ಪ್ರೀತಿ.

ಟೀಚರಿಗೆ ತೋರಿಸಬೇಕಾದ ಹೋಂವರ್ಕಿನಿಂದ ವಿನಾಯಿತಿ !

ಇದು ಶೀನನ ಬಾಲ್ಯಲೀಲೆಯ ಒಂದು ಸ್ಯಾಂಪಲ್. ಇಂತಹ ಅನೇಕ ಲೀಲೆಗಳನ್ನು ಬಂಡಲ್ ಗಟ್ಟಲೆಮಾಡಿ ದೊಡ್ಡವನಾದ.

ಸೀತಾಮಾತೆಯ ಚೈನಾಪಹರಣ !

ಶೀನ ತನ್ನ ತಂದೆಯನ್ನು ಬಹಳ ದೊಡ್ಡ ಮನುಷ್ಯ ಎಂದು ನಂಬುತ್ತಾರೆ.

ಹೌದು ! ನಿಜವಾಗಿಯೂ ಆತ, ದೊಡ್ಡ ಮನಷ್ಯ.

ಅಪ್ಪ ಜೀವದಿಂದ ಇದ್ದು ಇವನಿಗೆ ಮಾಡಿದ ಉಪಕಾರ ದೊಡ್ಡದು.

ಆತ ಸತ್ತೂ [illegible]

Sri Vidyabharathi Book Centre, Sringeri

CC-O. In Public Domain. Digitized by eGangotri

ಮಗ ದೊಡ್ಡವನಾಗಿದ್ದ.

ಈ ಮೊದಲೇ ದೊಡ್ಡವನಾದ ತಂದೆ ಏಕೆ ಇರಬೇಕು ?

ಎರಡು ವಸ್ತುಗಳು ಒಂದೇ ಜಾಗೆಯಲ್ಲಿ ಇರಲಾರವು. ಆದ್ದರಿಂದ ಮೊದಲು ಬಂದದ್ದು ಹೋಗಬೇಕು.

ಅಂತೆಯೆ ಮಗ ದೊಡ್ಡವನಾಗುತ್ತಿದ್ದಂತೆಯೆ ಶೀನನ ತಂದೆ ಸತ್ತುಹೋದ.

"ಪುಣ್ಯವಂತನೆಂದೇ ಇಷ್ಟು ಬೇಗ ಸತ್ತ" ಹಲವರೆಂದರು.

ಆದರೆ ಆತ ಮಾಡಿದ ಪುಣ್ಯವೆಂತಹುದೋ ?

ಮಗನನ್ನು ಧರ್ಮ ಕಾರ್ಯನೆಂದು ತಿಳಿದು ಸತ್ತದ್ದು. ಆತ ಮಾಡಿದ ಅದ್ಭುತ ಕೆಲಸದಲ್ಲಿ ಒಂದು ಎಂದು ಯಾರೂ ಧಾರಾಳ ಹೇಳಬಹುದು.

ಶೀನ ಸಮದರ್ಶಿ.

ನಾಯಿ, ಅಬ್ದುಲ್, ದ್ಯಾಮ ಎಲ್ಲರಲ್ಲಿಯೂ ಒಂದೇ ಪ್ರೇಮ.

ಇವನ ಗಳಸ್ಯ ಕಂಠಸ್ಯ ಫ್ರೆಂಡ್ ಅಬ್ದುಲ್.

ಹಿಂದು–ಮುಸ್ಲಿಂ ಭಾಯಿ ಭಾಯಿ.

ಇದು ದೊಡ್ಡ ತತ್ವ ಎನ್ನಿಸಿದ್ದಿಲ್ಲ ಶೀನನಿಗೆ, ವೈಯಕ್ತಿಕ ಅಗತ್ಯ-ಸಂಬಂಧ ಎನ್ನಿಸಿತ್ತು.

ಶಾಲೆ ಬಿಡುವುದರೊಳಗಾಗಿ ಈ ಇಂಡೊಪಾಕ್ ಮೈತ್ರಿ ದೃಢವಾಗಿ ಬಿಟ್ಟಿತ್ತು.

ತಂದೆಯು ಸತ್ತ ಬಳಿಕ ನಿರ್ಜೀವಶಾಲೆಯನ್ನು ವ್ಯರ್ಥವಾಗಿ ಮುಂದು ವರಿಸುವುದು ಶೀನನಿಗೆ ಉಚಿತ ಕಾಣಲಿಲ್ಲ.

ದೆವ್ವನಂತಹ ತಂದೆಯೇ ಸತ್ತ ಬಳಿಕ ಸ್ಮಶಾನದಂತಹ ಶಾಲೆ ಏನು ಪ್ರಯೋಜನ ಎಂದು ಬಿಟ್ಟುಬಿಟ್ಟ.

ಶೀನ ಸರಕಾರ ಅಮಲಿನಲ್ಲಿ ತರಲು ತಿಣಿಕಾಡುತ್ತಿದ್ದ ಎಷ್ಟೋ ತತ್ವ ಗಳನ್ನು ನೀರು ಕುಡಿದಂತೆ—

ಅಲ್ಲ ಬೀರು ಕುಡಿದಂತೆ ಆಚರಣೆಗೆ ತಂದಿದ್ದ.

"ಜಾತ್ಯತೀತತೆ—"

ದೇಶದ ಅಗತ್ಯ ಶೀನನಿಗೆ ಅನಿವಾರ್ಯ. ಶೀನನ ತಂದೆಯು ಯೋಗ್ಯತೆ ಪಂಡಿತ ನೆಹರೂಗಿಂತ ದೊಡ್ಡದು.

Sri Vidyabharathi Book Centre, Sringeri

 CC-O. In Public Domain. Digitized by eGangotri

ತಾನು ಇರುವುದರೊಳಗಾಗಿ ಊರಿನ ಇತರ ಬ್ರಾಹ್ಮಣರನ್ನು ಊರು ಬಿಡಿಸಿದ್ದು.

ತಾನು ಸತ್ತ ಬಳಿಕ ತನ್ನ ಮಗನಾದ ಶೀನನೇ ಊರಿನ ಬ್ರಾಹ್ಮಣೋತ್ತಮನಾಗಿ ಸವ್ಯ–ಅಪಸವ್ಯ ಕರ್ಮಗಳ ಅಧ್ಯಕ್ಷನನ್ನು ಮಾಡಿದ್ದು.

ಲೋಕದಲ್ಲಿ ಧರ್ಮ, ದೇವರಲ್ಲಿಯೂ ಒಂದು ಬಗೆಯ ಆಂತರಿಕ ರಾಜಕೀಯ ಜಾಗೃತಿ.

ಆಗೀಗ ಹೊರಗಿನಿಂದ ಕೆಲ ಇಂಪೋರ್ಟೆಡ್ ಬ್ರಾಹ್ಮಣರು ಊರಿಗೆ ಶಾನುಭೋಗರ ಮನೆಗೆ ಆಗಾಗ ಊಟಕ್ಕೆ ಬರಬೇಕು.

ಅವರಿಗೇನೋ ಜಾತಿ ವೈರ. ಶೀನನ ಬಗ್ಗೆ ಇಲ್ಲದ ಅಪವಾದಗಳು.

ರಂಗಣ್ಣ ಶಾನುಭೋಗರು ಮುಖ್ಯಮಂತ್ರಿ ಜಾಗೆಯಲ್ಲಿದ್ದಾರೆ. ತಮ್ಮ ಸದಸ್ಯರಾದ ಶೀನನ ಬಗ್ಗೆ ಎಂತಹ ಅಪವಾದ ಬಂದರೂ ವಿಚಾರಣೆಗೆ ಅವಕಾಶ ಕೊಡಲಾರರು.

ಅಲ್ಲದೆ ರಂಗಣ್ಣ ಕಿವಿಯಲ್ಲಿಯ ಕೂದಲು ಬೆಳ್ಳಗಾಗುವವರೆಗೆ ಊರಿನ ಲೆಕ್ಕ ಬರೆದೇ ಇದ್ದವರು.

ಶೀನ ಇತ್ತೀಚೆ ಒಂದು ಸ್ವತಂತ್ರ ಪಕ್ಷ ಕಟ್ಟಲು ಶಕ್ತಿ ಉಪಾಸಕನಾಗಿದ್ದು ಅವರಿಗೆ ಗೊತ್ತಿತ್ತು.

"ಕಪ್ಪು ತಿಂತಾನೆ.

ಬಾಟಲ್ ಕುಡಿತಿದ್ದಾನೆ."

ಈ ಆರೋಪಕ್ಕೆ ರಂಗಣ್ಣ ಕಿವಿಗೊಡಲೇ ಇಲ್ಲ.

"ತಮ್ಮ ಮನೆಯ ದೇವರನ್ನು ತೊಳೆಯುತ್ತಾರೆ ಸಾಕು..." ಎಂದಿದ್ದರು.

ಈತನ ಗೆಳೆಯ ಅಬ್ದುಲ್‌ನಿಗೆ ಮದುವೆಯಾಯಿತು.

ಶೀನನಿಗೆ ಸ್ವಲ್ಪ ವ್ಯಸನವಾಯಿತು.

'ಇಂತಹ ಜೀವಸ್ನೇಹಿತನ ಮದುವೆಯ ಕಾಲದಲ್ಲಿ ತಾನು ಏನನ್ನೂ ಓದಿಸಲಿಲ್ಲ' ಎಂದು.

ಅಬ್ದುಲ್ ಏನಿದ್ದರೂ ಎಲ್ಲ ಶೀನನಲ್ಲಿ ತೋಡಿಕೊಳ್ಳುವವ. ಒಂದು ದಿನ—

"ಆಚಾರಿ ಬೀಬಿ ಅದೇನೋ ಚಿನ್ನದ ಸರ ಅಂತಾಳೆ. ಬಡವರು ನಮಗೆ ಎಲ್ಲಿ ಬರಬೇಕು ಎಂದರೂ ಕೇಳಲೊಲ್ಲಳು. ನೀನಾದರೂ ಹೇಳು..."

Sri Vidyabharathi Book Centre, Sringeri

ಶೀನನಿಗೆ ಅಬ್ದುಲನ ಮನೆಯಲ್ಲಿ ಅಪ್ರತಿಬಂಧ ಸಂಚಾರ.

CC-O. In Public Domain. Digitized by eGangotri

ಅಬ್ದುಲ್‌ನ ಹೆಂಡತಿಯೂ ಪಾಕಿಸ್ತಾನದವಳಲ್ಲ. ಶೀನನ ಊರಿನ ಗೋಡೆಕಾರ ಇಮಾಮಸಾಬಿಯ ಮಗಳು...

ಶೀನನ ಕರುಳಿಗೆ ಬರೆ ಕೊಟ್ಟಂತಾಯಿತು. ಹುಟ್ಟಿನಿಂದಲೂ ದೇವರ ಮೇಲೆ ಅಪಾರ ವಿಶ್ವಾಸವಿದ್ದ ಆತ ಹೇಳಿದ,

"ದೇವರಿದ್ದಾನೆ ಯಾಕೆ ಚಿಂತೆ ಅಬ್ದುಲ್ ?"

ಮರುದಿನ ಶೀನ ಹಾಸಿಗೆಯಲ್ಲಿದ್ದಾಗಲೇ ಊರಿನ ಚಾತ್ಪರರ ಸಿಪಾಯಿ ಬಂದು ಹೇಳಿದ,

"ಇಂದು ಡಾಕ್ಟರ ಸಾಹೇಬರ ಮನೆಯಲ್ಲಿ ದೊಡ್ಡ ದೇವರಿಗೆ ಪೂಜೆ ಅಂತೆ. ಊಟಕ್ಕೆ ಬರಬೇಕು."

"ಕರಾಗ್ರೇ ವಸತೆ...."

ಎನ್ನುತ್ತ ಹೂಂ ಎಂದ.

ಬೆಳಗಿನ ಚಹಕ್ಕಾಗಿ ಇನ್ನೇನು ಊರ ಹೊರಗೆ ಹೋಗಬೇಕು ಅಷ್ಟ ರಲ್ಲಿಯೇ—

ಡಾಕ್ಟರರು ತಮ್ಮ ಕಾಲುಗಳೊಡನೆಯೇ ಖುದ್ದಾಗಿ ಬಂದರು.

"ಶೀನಪ್ಪ ಆಚಾರ್ಯರೆ, ಇಂದು ನಮ್ಮ ಮನೆಯಲ್ಲಿ ಪ್ರತಿಮಾರ್ಚನೆ. ಯಾರಾರಿಗೊ ಊಟಕ್ಕೆ ಹೇಳಿದ್ದೇನೆ. ದಯವಿಟ್ಟು ಪೂಜೆಮಾಡಿ ಪ್ರಸಾದ ಸ್ವೀಕರಿಸಿ ಹೋಗಬೇಕು..."

ಈಗ ಊರಿಗೇ ಏಕೈಕ ಬ್ರಾಹ್ಮಣನಾದ್ದರಿಂದ ಅವನ ಬೆಲೆ ಭಾರೀ ದುಬಾರಿ.

"ಶ್ರೀ ಹರೀಚ್ಛೆ" ಎಂದ ಶೀನ ಚಹಕ್ಕಾಗಿ ಊರ ಹೊರಗೆ ಹೋದ.

ಅಂದು ಡಾಕ್ಟರರು ಬೇರೆ ಊರಿಗೆ ವರ್ಗವಾಗಿ ಹೋಗುವುದಕ್ಕಾಗಿ ಊರಿನ ಶಿಷ್ಟರಿಗೆ (ವಿ) ಆಮಂತ್ರಣವಿತ್ತಿದ್ದರು.

ಮನೆಯಲ್ಲಿ ಅವರ ಗೃಧ್ರುತಾಯಿ.

ಮುಗ್ಧ 'ಬಾಯಿ'

ಇಬ್ಬರು ಹೆಂಗಸರ ರಾಜ್ಯದಲ್ಲಿ ದೇವರು ಬದುಕದೆಹೋದರೆ ಇನ್ನೆಲ್ಲಿ ಬದುಕಬೇಕು. ಅತ್ತೆ ಸೊಸೆಗೆ ಚಿಕ್ಕ ಮತಭೇದ ಬಂದಿತ್ತು.

ಪ್ರತಿಮಾರ್ಚನೆ ಪರ್ವಕಾಲದಲ್ಲಿ ಎಂದೋ ಒಮ್ಮೆ ನಡೆಯುವುದು ಕುಲಧರ್ಮ. ದೊಡ್ಡ ಆಚಾರ್ಯರನ್ನು ಕರೆಸಬೇಕು.

Sri Vidyabharathi Book Centre, Sringeri
ಸೊಸೆ, ಪ್ರಗತಿಶೀಲಳು. ಯಂಗ್ ಟರ್ಕ್ ! ಊರಿನಲ್ಲಿದ್ದ ಶೀನಪ್ಪಾ

CC-O. In Public Domain. Digitized by eGangotri

ಚಾರ್‍ಯರನ್ನು ಕಡಿಮೆ ಎಂದು ತಿಳಿಯುವ ಅತ್ತೆಯ ಧೋರಣೆ ಸರಿ ಎಂದು ತಿಳಿಯಲಿಲ್ಲ.

"ಶೀನಪ್ಪಾಚಾರ್‍ಯರು ಮಂತ್ರ ಹೇಳಿದರೆ…ನಮ್ಮೂರಿನಲ್ಲಿರುವ ಅವರಿಗೇನ ಪ್ರಾಶಸ್ತ್ಯ ಕೊಡಬೇಕು. ಸುಮ್ಮನೆ ಇಂಪೋರ್ಟ್ ಮಾಡಿಕೊಳ್ಳುವ ಪಾಲಿಸಿ ತಪ್ಪು" ಎಂದು ಪುರುಷ ವಿಗ್ರಹವಾದ ಡಾಕ್ಟರರೆದುರು ಅತ್ತೆಗೆ ಹೇಳಿದರು.

ಡಾಕ್ಟರರ ತಾಯಿ ಜಾಣೆ ! ತನ್ನ ಕಾಲ ಸಂದಿವೆ. ಅಲ್ಲದೆ ಅತ್ತೆಯಾದ ವಳು ತಾನು ಇನ್ನು ಸೊಸೆಯಾಗಲಾರಳು. ಆದರೆ ಈ ಸೊಸೆಗೆ ಅತ್ತೆ ಯಾಗುವ ಛಾನ್ಸ್ ಬೇಕಾದಷ್ಟಿದೆ. ತಾನು ಹಿಂದೆ ಸರಿದುಕೊಳ್ಳುವುದೇ ಸರಿ ಯಾದ ರಾಜಕೀಯ ಧೋರಣೆ ಎಂದು ಶೀನಪ್ಪಾಚಾರ್‍ಯರ ಅರ್ಚಕತ್ವ ಒಪ್ಪಿದಳು.

ಒಂದು ಮನೆಯ ಪುಟ್ಟ ಕೆಲಸದಲ್ಲೂ ದಿಲ್ಲಿಯಲ್ಲಿ ನಡೆಯುವ ರಾಜ ಕೀಯ ಘಟನೆಗಳಷ್ಟು ವೈಚಾರಿಕ ಸಂಘರ್ಷ ! ಅಧಿಕಾರಕ್ಕೆ ತಿಕ್ಕಾಟ ! !

ಅಂತೂ ಡಾಕ್ಟರರ ಮನೆಯ ಸಂಯುಕ್ತರಂಗದಲ್ಲಿ ಗೃಹಮಂತ್ರಿಗಳ ಮಾತೇ ಜ್ಯೋತಿ ! ಡಾಕ್ಟರರಿಗೂ ಒಂದು ಸಮಾಧಾನ.

ದೇವರು ಉಂಡರೆ ಆಗುವ ನಷ್ಟ ಏನು ? ಅಂದು ಯಾರಾರೋ ಹತ್ತು ಸಮಸ್ತರು ಸಿಕ್ಕಾಪಟ್ಟೆ ಚೆಲ್ಲಿ ಹೋಗುವಷ್ಟನ್ನೂ ಆತ ತಿನ್ನುವುದಿಲ್ಲ.

ದೊಡ್ಡ ದೇವರು ಒಬ್ಬನೇಕೆ ಹಲವರು ಉಂಡರೂ ಆಗುವ ನಷ್ಟ ಅಷ್ಟರಲ್ಲೇ ಇದೆ.

ಹೆಂಗಸರ ಸೆಂಟಿಮೆಂಟಲ್ ಸಂತೋಷ ಅಷ್ಟೆ ! ಶೀನನ ಕೊರಳಿಗೆ ಪೂಜೆ ಅಂಟಿಕೊಂಡಿತು.

ಶೀನನಿಗೋ ಈ ಕೀಟಲೆ ಇಲ್ಲದೆ ಹೋಗಿದ್ದರೆ ಸಾಕಿತ್ತು.

ಆದರೂ ಅವನಿಗೆ ದೇವರ ಮೇಲೆ ವಿಶ್ವಾಸ ಬಹಳ. ತಾನು ಒಲ್ಲೆನೆಂದ ಕೆಲಸ ತನಗೆ ಕೊಡಲು ಏನು ಉದ್ದೇಶವೊ ಯಾರಿಗೆ ಗೊತ್ತು ?

ಡಾಕ್ಟರರ ಮನೆಯಲ್ಲಿ ಅಂದು ಯಾರಿಗೆ ಬಿಡುವು ?

ಆಳುಕಾಳುಗಳು, ಸಾಮಾನು ಕಟ್ಟಬೇಕು.

ಗೃಹಮಂತ್ರಿ ಅವರಿಗೆ ಸಲಹೆ, ಆದೇಶ ನೀಡಬೇಕು.

ಡಾಕ್ಟರರ ತಾಯಿಗೆ ಗರುಡ ದೃಷ್ಟಿ ಮಂದವಾದರೂ "ಇದ್ದೀಲು ಒಲೆಯು ಪಟ್ಟಿ ಮರೆಯಬೇಡಿರಿ" ಎನ್ನುವಾಕೆ.

"ಪೊರಕೆ ಕಟ್ಟುವ ದಾರ ಇಲ್ಲೇ ಉಳಿದಿದೆ" ಎನ್ನದಿದ್ದರೆ ಹೇಗೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಮಧ್ಯಾಹ್ನವಾಗುತ್ತ ಬಂದಿತ್ತು. ಶೀನ ಸ್ನಾನ ಮಾಡಿ ದೇವರಕಟ್ಟೆ ಏರಿ, ಗಂಟೆ ಬಾರಿಸಿದ.

"ಆಗಮಾರ್ಥಂತು ದೇವಾನಾಂ"

ಡಾಕ್ಟರರ ತಾಯಿ ಎಲ್ಲೋ ದೂರ ಪ್ರಾಚ್ಯದಲ್ಲಿದ್ದವರು ಓಡಿಬಂದರು.

ಗೃಹಮಂತ್ರಿ ಪಾಕ ನಿರೀಕ್ಷಣೆಗೆ ಭೇಟ್ಟಿ ಕೊಡುತ್ತಿದ್ದವರು ಧಾವಿಸಿ ಬಂದರು.

ಶೀನನಿಗೆ ಮೊದಲು ಕಾದಿದ್ದ ಡ್ಯೂಟಿ ಎಂದರೆ ದೇವರ ವಸ್ತ್ರಾಪಹರಣ!

ಅದಕ್ಕಿಂತ ಮೊದಲು ದೇವತೆಗಳ ಬಂಧ ಯೋಚನೆ.

ಅನೇಕ ಭಕ್ತರಿಗೆ ಮೋಕ್ಷ ಕೊಟ್ಟ ದೇವರಿಗೆ ದುರ್ದಸೆ. ಭಕ್ತರಿಂದಲೇ ಬಹುಕಾಲದ ಬಂಧನ. ದೇವರಿಗೆ ಮೋಕ್ಷ ಕೊಡುವ ಯೋಗ್ಯತೆ ತನಗೆ ಎಂಬು ದಕ್ಕೆ ಶೀನನಿಗೆ ತುಂಬ ಆಢ್ಯತೆ.

ಅದೆಷ್ಟು ದಿನ ದೇವರು ಕೊಳೆ ಬಟ್ಟೆ ಹಾಕಿಕೊಂಡಿದ್ದರೋ. ಚಿಗುರೆಯ ಚರ್ಮದ ಒಂದು ಪೆಟ್ಟಿಗೆಯಲ್ಲಿ ಬಂಧಿತರಾದ ಎಲ್ಲ ದೇವತೆಗಳನ್ನೂ ಶೀನ ಏಕ ಕಾಲದಲ್ಲಿ ಅಂದರೆ ಒಂದೇ ದಿನ ಬಿಡುಗಡೆ ಮಾಡಿದ.

ರಾಜಕೀಯದಲ್ಲಿ ಹಬ್ಬಿದ ವೈಷಮ್ಯ ದೇವರಲ್ಲಿಯೂ. ಅದರಲ್ಲೂ ಮಾಧ್ವರ ಜಗುಲಿ ಅಂದರೆ ದೊಡ್ಡ ರಾಜಕೀಯ.

ಆತ ದೊಡ್ಡವನು.

ಇವನು ಅಲ್ಲಿ ಕುಳಿತರೆ ಆಗದು.

ಈತನಿಗೆ ಶಂಖದ ನೀರು ಮೈಗೆ ಹಿಡಿಸದು. ದೇವತೆಗಳಲ್ಲೂ ರಾಜ ಕೀಯ ಬಣಗಳು.

ಮಾಧ್ವರಿಗೆ ಶಿವ ವಿರೋಧಿ ಪಕ್ಷದ ಪ್ರಮುಖ. ಹೀಗೆ ನೂರೆಂಟು ಅವಾಂತರ !

ಶೀನನಿಗೆ ಒಂದು ದೊಡ್ಡ ಆಪತ್ತು ತಪ್ಪಿದ್ದೆಂದರೆ ದೇವತೆಗಳಲ್ಲಿ ಈ ವರ್ಗ ಕಲಹ ಹಬ್ಬಿಸುವ ಇಂಪೋರ್ಟೆಡ್ ಬ್ರಾಹ್ಮಣರು ಬಂದಿಲ್ಲ ಎಂಬುದು.

ದೇವತೆಗಳನ್ನು ಪೆಟ್ಟಿಗೆಯಿಂದ ತಟ್ಟೆಗೆ ಇಳಿಸುವ ಕ್ರಮದಲ್ಲಿ ವ್ಯತ್ಯಾಸ ಆದರೆ ಯಾರದು ಪ್ರತಿಭಟನೆ—?

ದೇವರ ಕಟ್ಟೆಯ ಕೆಳಗೆ ವೃದ್ಧ ಗರುಡ; ಡಾಕ್ಟರರ ತಾಯಿ! ಇನ್ನೊಬ್ಬಳು ಬಹುತರ ಡಾಕ್ಟರರ ತಂಗಿ. ಅವಳೂ ರಿಟೈರ್ ಆದ ಸುವಾಸಿನಿ. ಇವರ ನಡುವೆ ಡಾಕ್ಟರರ ಅಧಿಕೃತ ಗೃಹಿಣಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಡಾಕ್ಟರರ ತಾಯಿ ಅಧಿಕಾರ ಇರದಿದ್ದರೂ ಅಧ್ಮತೆ ಕಡಿಮೆಯಾಗದ ರಿಟೈರ್ಡ್ ಪೋಲೀಸ್ ಆಫೀಸರ್. ಡಾಕ್ಟರರನ್ನು ಕೈಹಿಡಿದು ನಿಲ್ಲಿಸಿದವಳು, ಮನೆಯಲ್ಲಿ ಕಮ್ಯೂನಿಸ್ಟ್ ಸರ್ವಾಧಿಕಾರಿ.

ಶೀನ ಮೊದಲು ಶ್ರೀರಾಮಚಂದ್ರನಿಗೆ ಮೋಕ್ಷವಿತ್ತು ಕೂರಿಸಿದ.

ಬಳಿಕ ಘಟನಾತ್ಮಕವಾಗಿ ಸೀತಾದೇವಿಯೇ ಮೋಕ್ಷಾರ್ಹಳು !

ಸೀತಾದೇವಿಯನ್ನು ಕೈಗೆತ್ತಿಕೊಂಡ ಶೀನ.

ಪಾಪ ಆ ದೇವಿಯನ್ನು ಎತ್ತಿದವರಲ್ಲಿ ಮೊದಲಿಗ ರಾವಣ; ಅನಂತರ ದವನೇ ಶೀನಪ್ಪಾಚಾರಿಯೇ ?

"ಸೀತಾದೇವಿಯನ್ನು ನೋಡಿರಿ...."

ಮಹಿಳಾ ಸಮಾಜದಲ್ಲಿ ಚಟುವಟಿಕೆ !

ಡಾಕ್ಟರರ ತಾಯಿ ಕಣ್ಣಿನ ಪೊರೆ ಬಂದಿದ್ದರೂ ಸೀತಾದೇವಿಯನ್ನು ಕಾಣುವ ಚಪಲ !

ಎಲ್ಲರಿಗೂ ಅವಳ ಬಗ್ಗೆ ಕನಿಕರ.

ಕೈ ಮುಗಿದುಕೊಂಡು ನಿಂತಿದ್ದರು.

ಶೀನ ಅವಳನ್ನು ಕೈಗೆತ್ತಿಕೊಂಡವನೇ....

ಮೈಗೆ ಸುತ್ತಿದ....

ದೇವಿಯ ಕೊರಳಲ್ಲಿ ಚಿನ್ನದ ಪದಕ.

ಪಟ್ಟದಲ್ಲಿ ದೊಡ್ಡದೇ—

ಚಿನ್ನದ ಸರ ಕಂಡ ಕೂಡಲೇ ಶೀನನಿಗೆ ವಿಲಕ್ಷಣ ಆನಂದ !

ಡಾಕ್ಟರರ ತಾಯಿ ಪಕ್ಕದಲ್ಲಿನವಳಿಗೆ,

"ಸೀತಾದೇವಿ ಪಟ್ಟ ಕಷ್ಟ ಎಂತಹದು ! ಆ ಕಷ್ಟ ದೇವರಾಗಿದ್ದರಿಂದಲೆ ತಡೆದಳು. ದೇವರಿಗೆ ಬಂದದ್ದು..."

ರಾಮಾಯಣದ ಸೀತಾದೇವಿಗೆ ಬರಿ ವನವಾಸವಾಗಿತ್ತು. ಆದರೆ ಡಾಕ್ಟರ್ ಮನೆಯ ಆ ದೇವಿಗೆ ಅಜ್ಞಾತವಾಸ ಬೇರೆ ಇತ್ತು.

ಈಗ ಶೀನನ ಪೂಜೆಗೆ ರಭಸ ಬಂತು. ಎಲ್ಲ ದೇವರನ್ನೂ ಬಟ್ಟೆ ತೆಗೆಯಿಸಿ ಸ್ನಾನಕ್ಕೆ ನಿಲ್ಲಿಸಿದ.

ಬಹಳ ದಿನದಿಂದ ಇದೇ ಕೆಲಸ ಮಾಡಿದ ಆತನಿಗೆ ಯಾವ ದೇವರು ಎಲ್ಲಿ ನಿಲ್ಲಬೇಕೆಂಬುದು ಗೊತ್ತು.

Sri Vidyabharathi Book Centre, Sringeri

ಸ್ನಾನ,

CC-O. In Public Domain. Digitized by eGangotri

ಗಂಧ !

—ಧೂಪ, ದೀಪ, ನೈವೇದ್ಯ ಎಲ್ಲ ಆಯಿತು.

"ನೈವೇದ್ಯ ಆಯಿತೆ ಆಚಾರ್ಯರೆ ?"

"ಮುಗಿಯಿತು."

ಡಾಕ್ಟರರ ತಾಯಿ ಪ್ರಶ್ನೆ ಕೇಳಿದಳು,

"ಕಂಬದ ಲಕ್ಷ್ಮಿಗೆ ನೈವೇದ್ಯ ತೋರಿಸಿದಿರಾ ?"

"ಹೋಹೋ ಮರೆತೇ ಹೋಗಿತ್ತು. ಈಗ ತೋರಿಸಿಬಿಡುತ್ತೇನೆ...."

ಎಲ್ಲಿಂದಲೊ ಘಟನಾತ್ಮಕ ತೊಡಕು ಎದ್ದಿತು. ಬಹುಶಃ ಡಾಕ್ಟರರ ಅಕ್ಕ ಇರಬೇಕು.

"ಲಕ್ಷ್ಮಿಗೆ ನೈವೇದ್ಯ ಈಗ ಹೇಗೆ ಬಂದೀತು? ತಿರುಗಿ ಪ್ರಾಣದೇವರ ನೈವೇದ್ಯ ಆಗಿಹೋಗಿದೆ..."

ನಿಜವಾಗಿ ಜಟಿಲ ಘಟನಾತ್ಮಕ ಸಮಸ್ಯೆ ಎನ್ನಿಸಿತು ಡಾಕ್ಟರರ ತಾಯಿಗೆ.

ಹೇಗೊ ಸಮಸ್ಯೆ ಬಗೆಹರಿಸಿದ ಶೀನ. ಹೆಂಗಸರು ಮುಂದಿನ ಕೆಲಸಕ್ಕೆ ತೊಡಗಿದರು. ಎಲೆ ಹಾಕುವುದು, ನೀರು ರಂಗೋಲಿ...

ಶೀನನಿಗೆ ಉಳಿದದ್ದು ಕೊನೆಯ ಡ್ಯೂಟಿ, ದೇವರನ್ನು ಮತ್ತೆ ನಿವಾರಕ ಸ್ಥಾನಬದ್ಧತೆಯಲ್ಲಿ ಇಡುವುದು.

ರಾಮಚಂದ್ರ ದೇವರನ್ನು ಕಟ್ಟಿ ಪೆಟ್ಟಿಗೆಯಲ್ಲಿ ಮಲಗಿಸಿದ.

ಸೀತಾದೇವಿಯನ್ನು ಕೈಗೆ ಎತ್ತಿಕೊಂಡ.

ಅವಳ ಕೊರಳಲ್ಲಿ ಮಿನುಗುವ ಸರ !

ಫಕ್ಕನೆ ಅವನಿಗೆ ಅಬ್ದುಲ್‌ನ ಬೀಬಿಯ ನೆನಪು. 'ಪಾಪ ! ಈ ಪೆಟ್ಟಿಗೆಯಲ್ಲಿರುವ ಈ ಹೆಣ್ಣುಮಗಳಿಗೆ ಇದರಿಂದ ಏನು ಪ್ರಯೋಜನ ?' 'ಅಬ್ದುಲ್‌ನ ಬೀಬಿಯೋ ನಾಲ್ಕು ಜನರಲ್ಲಿ ಅಡ್ಡಾಡುವವಳು. ಅವಳಿಗಿದ್ದರೆ ಪ್ರಯೋಜನ.' ಶೀನನ ತಲೆ ಸರಕಾರೀ ಆಫೀಸಿನಂತೆ ಮಿಜಿಮಿಜಿಯದಲ್ಲ.

ಎಳೆದಾಟ, ಎಡೆತಾಗು ಇಲ್ಲವೇ ಇಲ್ಲ.

ಸರ ತೆಗೆದು ಸೊಂಟಕ್ಕೆ ಸೇರಿಸಿದ.

ರಾವಣ ಎತ್ತಿಕೊಂಡು ಹೋದಾಗಲೆ ಏನೂ ಪ್ರತಿಭಟನೆ ಮಾಡದ ಸೀತಾದೇವಿ, ಈ ಕಾಸಿನಸರ ಹೋದುದಕ್ಕೆ ಗಲಾಟೆ ಮಾಡದೆ ಇದ್ದುದು ಸ್ವಾಭಾವಿಕವೇ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸೀತಾದೇವಿ ನಿರಾಭರಣ ಸುಂದರಿಯಾಗಿ ರಾಮಚಂದ್ರ ದೇವರ ಮಗ್ಗುಲಲ್ಲಿ ಮಲಗಿದಳು. ಇದು ಶೀನನ ಕೌಮಾರಲೀಲೆಯ ಇನ್ನೊಂದು ದೃಷ್ಟಾಂತ.

ಶೀನ ನೇರವಾಗಿ ಅದನ್ನು ಆ ದಿನ ಅಬ್ದುಲ್‌ನ ಬೀಬಿಗೆ ತಲುಪಿಸಿದ. ತಾನು ಕೃತಕೃತ್ಯನೆಂದುಕೊಂಡ.

ಶೀನ ಹಿಂದುವೇ ಆಗಿದ್ದರೂ ಅನೇಕ ಮೂರ್ತಿಭಂಜಕ ಮಹಾಕಾರ್ಯ ಸಾಧಿಸಿದ್ದ. ಗಜನಿ ಮಹಮೂದನಿಗಿಂತ ಈತ ಬುದ್ಧಿವಂತ.

"ಅಯ್ಯೋ ಆ ಸಾಬ, ತಲೆ ಇಲ್ಲದ ಹುಂಬ. ಕಲ್ಲಿನ ದೇವರನ್ನು ಒಡೆದು ಕೈ ನೋಯಿಸಿಕೊಂಡ.'

ಇವನೋ ಚಿನ್ನದ ದೇವರ ಹೊರತು, ಹಿರಣ್ಯಗರ್ಭನಾದ ಪರಮಾತ್ಮನನ್ನು ಬಿಟ್ಟು, ಇನ್ನೇನನ್ನೂ ಮುಟ್ಟಲಿಲ್ಲ.

ಒಮ್ಮೊಮ್ಮೆ ದೇವರ ಸ್ಪೇರ್‌ಪಾರ್ಟ್ಸ್‌ಗಳನ್ನೂ ನೋಡಿದ್ದ...

ಕಿರೀಟ, ಬಾಹುಬಂಧ...

ಇವನ ಭಕ್ತಿಗೆ ಕರಗಿದ್ದವು.

ನಾನೇ ಕಾಶಿಯಲ್ಲವೇ ?

ಬಹಳ ದಿನ ಕಳೆದವು!

ಶೀನ ಗಂಗಾತೀರದಲ್ಲಿದ್ದಾನೆ.

ಪುಣ್ಯವಂತನಲ್ಲವೇ ?

ಗಂಗಾತೀರದಲ್ಲಿ ಅನೇಕರು ಮರಣ ಬೇಡುತ್ತಾರೆ. ಆದರೆ ಶೀನ ಜೀವನವನ್ನು ಪಡೆದ.

ಪುಣ್ಯವಂತ !

ಹಲವು ಪಾಪಿಗಳು ಗಂಗಾ ಸಾನ್ನಿಧ್ಯ ಬಯಸಿರಬಹುದು. ಆದರೆ ಜನ್ಮಾಂತರ ಸುಕೃತವಿದ್ದುದು ಶೀನನಿಗೆ ಮಾತ್ರ!

ಅಮೃತ ಕುಡಿದವರಿಗೂ ನೆಮ್ಮದಿ ಎಲ್ಲಿರುತ್ತದೆ? ಯಾವ ದೇವರು ಬೀರ್ ಕುಡಿದಿದ್ದಾನೆ?

ಚಿಂತೆ ಇಲ್ಲದೆ ದೇವರಲ್ಲಿ ಬದುಕಿದ ಗಂಡಸಾದರು ಯಾರು ?

ವಿಷ್ಣು ?

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದು ಕಾಲದಲ್ಲಿ ಹೆಂಡತಿಯನ್ನು ಯಾರೋ? ಇನ್ನೊಂದು ಕಾಲದಲ್ಲಿ ಓಡಿಹೋದ ಹೆಂಡತಿಯನ್ನು—ವಿಲಕ್ಷಣ ಸಾಂಸಾರಿಕ ಸಮಸ್ಯೆಗಳು.

ಇಂದ್ರನಿಗೊ ?

ಇದಕ್ಕಿಂತ ವಿಪರೀತ.

ಹೆಂಗಸರ ಚಿಂತೆ.

ರಾಜಕೀಯ ಗಲಾಟೆ.

ಪರದೇಶಗಳ ದಾಳಿಯ ಭಯ.

ಆದರೆ ಈ ಈ ಶೀನ ನಿಶ್ಚಿಂತನಾಗಿದ್ದ.

ಆದರೆ ದೇವತೆಗಳ ಒಂದು ಬೇನೆ ಅವನಿಗೂ ಅಂಟಿತ್ತು.

ತನಗೆ ತಿಳಿದದ್ದನ್ನು ಮಾಡುತ್ತೇನೆ ಎಂದು ಡಂಗುರ ಹೊಡೆಯಲಾರ.

ಬಲ ಇಲ್ಲದಾಗ ಪಾಂಡವರೂ ಅಜ್ಞಾತವಾಸದಲ್ಲಿದ್ದರು.

ಗಂಗಾತರಂಗದಲ್ಲಿ ತೇಲುತ್ತಿದ್ದ ಶೀನನಿಗೆ ಭೀಕರ ಜಲಚರಗಳ ಭಯ.

ಆದರೂ ಆತ ಪುರುಷ.

ಅಶಕ್ತತೆಯನ್ನೂ ತನ್ನ ಬಲದ ಒಂದು ಭಾಗವೇ ಎಂದುಕೊಂಡಿದ್ದ.

ಗಂಡು ಹೆಣ್ಣಿನ ನೆರೆಯ ಬಗ್ಗೆ ಜನ ಬಹುಬೇಗ ತೀರ್ಮಾನಕ್ಕೆ ಬರುತ್ತದೆ.

ಶೀನನ ಪೌರುಷವೆಂದರೆ ಗಂಗಾನ ವಿಷಯದಲ್ಲಿ ತಾನು ಪದ್ಮಪತ್ರದಂತಿದ್ದೇನೆ ಎಂದು ಜನ ತಿಳಿಯುವಂತೆ ಮಾಡಿದ ನಾಟಕ.

ಒಂದು ದಿನ ಗ್ರಹಣ !

ಗಂಗಾನ ಮನೆಯಲ್ಲಿ ಶೀನ ಇದ್ದ.

ಗಂಗಾನಿಗೇಕೊ ಸುಸ್ತು.

ಶೀನ ಬಗೆದ ಗ್ರಹಣ ಚಂದ್ರನಿಗಲ್ಲ ; ಗಂಗಾನಿಗೆ !

"ಗ್ರಹಣಕ್ಕೆ ಇನ್ನೂ ಎಷ್ಟು ಹೊತ್ತು ?"

ಗಂಗಾನ ಪ್ರಶ್ನೆ ಶೀನನನ್ನು ಕುರಿತು,

"ಈಗ ಹಿಡಿದಿದೆಯಲ್ಲ...."

ಶೀನನ ವಕ್ರೋಕ್ತಿ.

ನನಗೆ ಹಿಡಿದದ್ದು ಹೇಳ ಬೇಡಿರಿ.

"ನಿಮ್ಮಂತಹ ಗಂಡಸರಿದ್ದರೆ ಹೆಂಗಸರು ಬದುಕುವುದೇ."

ಗಂಗಾನಿಗೆ ಶೀನನ ಬಗ್ಗೆ ಇಷ್ಟು ಹತ್ತಿರದ ಮಾತುಗಳು.

ಶೀನ ತನ್ನನ್ನು ಧನ್ಯನೆಂದ.

Sri Vidyabharathi Book Centre, Sringeri

CC-O. In Public Domain. Digitized by eGangotri

ಲೋಕದಲ್ಲಿ ತನ್ನನ್ನು ಇಷ್ಟು ಸಮೀಪ ಕಾಣುವ ಹೆಣ್ಣು ಜೀವ ಯಾವುದು ?

ಗಂಗಾನಿಗೆ ಇದೇ ಸಮಾಧಾನ. 'ಶೀನ, ತನಗೆ ಮಾಡಿದ್ದನ್ನು ಇತರರು ಮಾಡಲು ಸಾಧ್ಯವೆ ?'

ಪುರುಷಸೂಕ್ತ ಶೀನನಿಗೆ ಅಂತೆಯೆ ಮುಖೋದ್ಗತ.

"ಇರಲಿ, ಹೇಳು ! ಗ್ರಹಣಕ್ಕೆ ಇನ್ನೂ ಎಷ್ಟು ಹೊತ್ತು ?"

ಗಂಗಾ ಶೀನನ ಹತ್ತಿರ ಬಂದು ಮೆಲ್ಲಗೆ ಕೇಳಿದಳು,

"ಶೀನ, ಒಂದು ಮಾತು ನಡೆಸಿಕೊಡುತ್ತೀಯಾ ?" ಶೀನ ಎಷ್ಟಾದರೂ ಗಂಡಸು, ಹೇಳಿದ,

"ಹೀಗೇಕೆ ಹೆಂಡತಿಯ ಹಾಗೆ ಮೆಲ್ಲನೆ ಮುರಿದು ಸುತ್ತಿಕೇಳುತ್ತೀ. ಕೇಳ ಬಾರದೆ ಸ್ಪಷ್ಟವಾಗಿ ಕೇಳುವುದನ್ನು...."

"ಹೆಂಡತಿಯ ಹಾಗೆ...."

ಗಂಗಾನಿಗೆ ಆ ಮಾತು ಆನಂದವನ್ನೋ ದುಃಖವನ್ನೋ ಉಂಟು ಮಾಡಿತ್ತು.

ಆದರೂ ತನ್ನನ್ನು ಸನಿಹವಾಗಿ ಕಾಣುವ ಏಕೈಕ ವ್ಯಕ್ತಿ ಶೀನನೇ ಆ ಮಾತನ್ನು ಆಡಿದ್ದ.

ಗಂಗಾ ಎದ್ದು ಹೋಗಿ ಒಂದು ಹಿತ್ತಾಳೆಯ ಕರಡಿಗೆ ತಂದು ಹೇಳಿದಳು,

"ಶೀನ, ನನ್ನನ್ನು ಕಾಶಿಗೆ ಕರೆದೊಯ್ಯುತ್ತೀಯಾ?"

ಗಂಗಾನಿಗೆ ಕಾಶಿಯ ಬಯಕೆ....?

ಶೀನನಿಗೆ ಎಷ್ಟು ಆಶ್ಚರ್ಯ.

"ಗಂಗಾ ಕಾಶಿಯಲ್ಲಿ ಏನಿದೆ—?"

ಶೀನ, ನೀನು ಗಂಡಸು. ನಿನ್ನ ಧೈರ್ಯ, ಒರಟುತನ ನನಗೆ ಬರದು. ನನ್ನ ಚಿಕ್ಕಮ್ಮನನ್ನು ನೀನು ನೋಡಿದ್ದಿಯಲ್ಲ; ಅವಳ ಅಪೇಕ್ಷೆ ಉಂಟು...

"ಅವಳು ಸತ್ತದ್ದೂ ನನಗೆ ಮರೆತುಹೋಗಿದೆ.

"ಅವಳದೊಂದು ಅಪೇಕ್ಷೆ ಇವಳಿಗೆ ನೆನಪಿದೆ...."

ಶೀನನ ಹಾರಿಕೆಯ ಉತ್ತರ.

"ಶೀನ, ಅವಳು ಸತ್ತಳು ನಿಜ. ಆದರೆ ನನ್ನನ್ನು ಬದುಕಿಸಿದಳಲ್ಲವೆ. ಅವಳಿಲ್ಲದೆ ಹೋಗಿದ್ದರೆ ನಿನಗೆ ನಾನು ದೊರೆಯುಬಹುದಿತ್ತೇ ?"

Sri Vidyabharathi Book Centre, Sringeri

ಶೀನ ಅವಳ ಮೂಲಭೂತ ಆಹ್ವಾನದ ಮಾತಿಗೆ ಸ್ವಲ್ಪ ಸಡಿಲಾದ.

CC-O. In Public Domain. Digitized by eGangotri

ಅವಳಿಗೆ ಬಯಕೆ ಇತ್ತು,

"ಗಂಗಾ, ನಾನು ಕಾಶಿಗೆ ಹೋಗಬೇಕೆಂದು ಜೀವನದ ಉದ್ದಕ್ಕೂ ಯತ್ನಿಸಿದೆ, ಆಗಲಿಲ್ಲ."

ಅಂತಹ ಜೋಡು ಯಾರು ಸಿಕ್ಕಬೇಕು.

ಕಳ್ಳರು, ಕಾಕರು. ನನಗೆ ಸಾಧ್ಯವಾಗದೇ ಹೋಯಿತು. ನಾನು ಸತ್ತ ಬಳಿಕ ಎಂದಾದರೊಂದು ದಿನ ನೀನು ಕಾಶಿಗೆ ಹೋಗಿ ಗಂಗಾನದಿಯಲ್ಲಿ ನನ್ನ ಚಿತಾಭಸ್ಮ ಚೆಲ್ಲು, ಅಂದರೆ ನನಗೆ ಸದ್ಗತಿ. ನನ್ನ ಪಾಪಗಳೆಲ್ಲ ಪರಿಹಾರವಾಗುವವು.

"ಗಂಗಾ, ನಿನ್ನ ಚಿಕ್ಕಮ್ಮ ಅಷ್ಟು ದೊಡ್ಡ ಪ್ರಮಾಣದ ಪಾಪ ಮಾಡಿದ್ದಳೆ?"

"ಶೀನ,ನಿನ್ನದು ಯಾವಾಗಲೂ ಅಡ್ಡದಾರಿಯೆ. ಪಾಪ ಮಾಡಿದ್ದರೇನೇ ಅದನ್ನು ತೊಳೆಯಬೇಕೆ?"

"ಎಂತಹ ಮಾತಿದು ಗಂಗಾ? ಪಾಪ ಮಾಡದೆ ಅದನ್ನು ತೊಳೆದುಕೊಳ್ಳುವ ಚಪಲ ಏಕೆ ಬಂದೀತು?"

ಗಂಗಾನಿಗೆ ಚಿಕ್ಕಮ್ಮನ ಬದುಕಿನ ಕ್ಷಣದ ಚಿತ್ರ ನೆನಪಾಯಿತು. ಅವಳು ಅಂದು ಹೇಳಿದ್ದ ಹಲವು ಮಾತುಗಳ ಹಳೆ ರೆಕಾರ್ಡು ಕಿವಿಯ ಮೇಲೆ—

"ಗಂಗಾ, ನಾನು ಬಹಳ ಪಾಪಿ!"

ಎಂದು ಒಂದಲ್ಲ ಹಲವು ಸಲ ಹೇಳಿದ್ದಳು.

ಆದರೆ ತನ್ನ ಪಾಪಗಳ ಪರ್ಟಿಕ್ಯುಲರ್‌ಗಳನ್ನು ಒಂದರ್ಧಸಲ ಮಾತ್ರ ಹೇಳಿ ಮತ್ತೆ ಅಳುಕಿಸಿದ್ದಳು.

ಗಂಗಾನಿಗೆ ಶೀನನ ಉತ್ತರದಿಂದ ಕಣ್ಣಲ್ಲಿ ನೀರು ಬಂದಿತ್ತು. ಶೀನ ಒರಟಾಗಿಯೇ ಇದ್ದ.

ಈಗ ಕಾಶಿಗೆ ಹೋಗಬೇಕು ಎಂದರೆ, ಆತ ಗಂಗಾನ ಗಂಟಿಗೇ ಗಂಟು ಬೀಳಬೇಕು. ಆದರೂ ದರ್ಪ ಕಡಿಮೆಯಲ್ಲ.

ಗಂಡಸಿನ, ಅಪ್ಪಟ ಗಂಡಸಿನ ಧಾಟಿ!

ಒಳಗೆ ಪೊಳ್ಳು; ಮೇಲೆ ಗಟ್ಟಿ!!

"ನಾನೆ ಕಾಶಿಯಲ್ಲವೇ?

ನೀನು ಗಂಗಾ ಇದ್ದೇ ಇರುವಿ?"

Sri Vidyabharathi Book Centre, Sringeri

"ಅದು ಹೇಗಾದೀತು?"

 CC-O. In Public Domain. Digitized by eGangotri

"ಆಗದೆ ಏನು ? ನೀನು ಹುಚ್ಚಿ ನಿನ್ನಿಂದ ನನಗೆ ನೆವೆ ಹತ್ತಿತು.

ನನ್ನಿಂದ ನಿನಗೆ ಮಹಾತ್ಮ್ಯ ಬಂದಿತು.

ಸಾಕಾಗದೆ—? ಆ ಕಾಶಿ, ಆ ಗಂಗಾ..."

ಈ ಶುಷ್ಕ ವಂಗವಾದವನ್ನು ಗಂಗಾ ಒಪ್ಪದೆ ಹೇಳಿದಳು.

ಕೈಯೊಳಗಿನ ಕರಡಿಗೆ ತೋರಿಸಿ,

"ಇದೇನು ನೋಡು ಶೀನ, ನಮ್ಮ ಚಿಕ್ಕಮ್ಮನ ಚಿತಾಭಸ್ಮ......"

ಆ ದಿನಗಳಲ್ಲಿ ತನ್ನನ್ನು ಕಂಡರೆ ಕೆಂಡವಾಗುತ್ತಿದ್ದ ಅವಳ ಭಸ್ಮ ಇಂದು ನೋಡುವನೇ ಶೀನ ?

ಒಮ್ಮೆ ಇದೇ ಮುದುಕಿ—ತಾನು ಬೀಡಿ ಸೇದಿದ್ದ ಸಂಗತಿಯನ್ನು ತಮ್ಮ ತಂದೆಯ ಎದುರು ಹೇಳಿದ್ದಳು.

ಎಷ್ಟಾದರೂ ತಂದೆ! ತನ್ನ ತಂದೆ ! ಮಗನ ಮೇಲೆ ಅಭಿಮಾನ ವಿಲ್ಲದವನೆ—?

"ಶೀನ ಬೀಡಿ ಸೇದಲಾರ. ಸಾವಿತ್ರೀ, ನೀನು ಬೇರೆ ಯಾವ ಹುಡುಗ ನನ್ನೊ ನೋಡಿದ್ದೀ ಎಂದಿದ್ದ····ನಮ್ಮಪ್ಪ ಭೂಪ····"

ತಾನು ಇವಳ ಚಿಕ್ಕಮ್ಮನ ಕೈಗೆ ಬೀಡಿ ಸಹಿತ ಸಿಕ್ಕಿದ್ದು ನಿಜವೇ ಇತ್ತು.

ಮಗನ ಮಾನ ತಂದೆ ಕಾಯದೆ ಮಂದಿ ಕಾಯಬಹುದೆ ?

ಶೀನ ಗಂಗಾಳಿಗೆ ಸಮಾಧಾನ ಮಾಡುತ್ತ ಹೇಳಿದ,.

"ನೋಡು, ಗಂಗಾ ! ನಿನ್ನ ಚಿಕ್ಕಮ್ಮ ಸತ್ತಿದ್ದಾಳೊ ಇಲ್ಲವೋ ?"

"ಶೀನ, ಯಾವಾಗಲೂ ನಿನ್ನದು ಇದೇ ಹಾಡು–ಅಡ್ಡ ತಿಡ್ಡ ಆಡುವುದು?"

"ನಿನ್ನ ಚಿಕ್ಕಮ್ಮ ಸತ್ತುಹೋಗಿದ್ದೇ ನಿನಗೆ ಖಚಿತವಾಗಿದ್ದರೆ ಕಾಶಿಯೂ ಬೇಡ, ಗಂಗೆಯೂ ಬೇಡ."

"ಹಾಗೆನ್ನಬೇಡ ಶೀನ, ಅದು ನಮ್ಮ ಚಿಕ್ಕಮ್ಮಗೆ ನಾನು ಕೊಟ್ಟ ಮಾತು...ನಡೆಸಬೇಕು..."

"ನಿಮ್ಮ ಚಿಕ್ಕಮ್ಮ ಇದ್ದಾಗ ಅವಳ ಮಾತು ಯಾವುದನ್ನೂ ನೀನು ಮೀರಲೇ ಇಲ್ಲವೆ ?"

"ಅದನ್ನೆಲ್ಲ ಈಗ ತೆಗೆದುಕೊಂಡು ಏನು ಮಾಡುವುದು."

"ಏನೇ ಮಾಡಲಿ ಬಿಡಲಿ ಅವಳಿದ್ದಾಗ ನೀನು ಅವಳ ಮಾತು ಮೀರಿ ದ್ದೀಯಾ ? ಇಲ್ಲವೆ ?"

"ಎಷ್ಟೋ ಮೀರಿದ್ದೇನೆ..."

Sri Vidyabharathi Book Centre, Sringeri

CC-O. In Public Domain. Digitized by eGangotri

ಗಂಗಾಳ ಪ್ರಾಮಾಣಿಕ ಉತ್ತರ.

"ಹಾಗಾದರೆ ಬದುಕಿದ್ದಾಗ ಅವಳ ಮಾತು ಮೀರಿ, ಆಕೆ ಸತ್ತಬಳಿಕ ಅವುಗಳಲ್ಲಿ ಒಂದನ್ನು ನಡೆಸುತ್ತೇನೆ ಎಂದು ಆಣೆಮಾಡಿದ್ದೀಯಾ ? ಹರಕೆ ಹೊತ್ತಿದ್ದೀಯಾ ?"

"ಶೀನ ನೀನು ಹೀಗೆಲ್ಲ ಓಗ್ಗಾಮುಗ್ಗು ಎಳೆದರೆ ನನಗೆ ಅಳುಬರುತ್ತದೆ."

"ಗಂಗಾ ನಿನ್ನ ಬುದ್ಧಿಗೇಡಿತನ ಕಂಡು ನನಗೆ ನಗೆ ಬರುತ್ತಿದೆ...ನಿನಗೆ ಅಳು ಬರದೆ ಮತ್ತೇನು ಬರಬೇಕು. ಗಂಡುಸಾದ ನನಗೂ ಅದನ್ನು ಬರಿಸ ಬೇಕು ಎನ್ನುತ್ತಿಯಾ ?"

ಈಗ ಅವರಿಬ್ಬರಲ್ಲಿ ಯಾರು ನಗಬೇಕು ? ಯಾರು ಅಳಬೇಕು !

"ಗಂಗಾ ನಿನ್ನ ತಲೆ ಇಲ್ಲದ ಚಿಕ್ಕಮ್ಮ ಹೇಳಿಹೋದದ್ದೆಲ್ಲವನ್ನು ನೀನು ನಡೆಸಬೇಕಿಲ್ಲ..."

"ಶೀನ ದೇವರೆಂಬುವವನು ಇಲ್ಲವೆ ?"

ಶೀನನಿಗೆ ಒಂದು ಕ್ಷಣ ಬೆರಗಾಯಿತು.

"ಇರಲಿ ಬಿಡು" ಎಂದ.

ತಾನು ಬೇಕಾದಾಗೆಲ್ಲ ಚಿಕ್ಕಂದಿನಿಂದ ದೇವರು ಇದ್ದ ಎಂದು ನಂಬಿ ಕೊಂಡಿದ್ದ. ಈಗೀಗ ಆತನಿಗೆ ದೇವರ ಅಗತ್ಯ ಕಡಿಮೆಯಾಗಿತ್ತು. ಆದರೆ—

ಗಂಗಾ ದೇವರಿದ್ದಾನೆ ಎಂದು ತಿಳಿದಿದ್ದಾಳೆ.

ಅವಳು ತಿಳಿದುಕೊಂಡಂತೆ ದೇವರಿರಲೇಬೇಕಲ್ಲವೇ ?

ಪಾಪ ಗಂಗಾ ಮೊಳಕಾಲ ಕೆಳಗಿನ ಬುದ್ಧಿ ಜೀವಿ ! ಅವಳೆಷ್ಟರವಳು.

ತಲೆಯ ಮೇಲೆ ಜಡೆ ಹೊತ್ತು ಹುತ್ತು ಬೆಳೆಸಿದ ಹಲವರೇ ದೇವರನ್ನು ತಿಳಿದದ್ದು ಹೇಗೆ ?

ಹೆಂಡತಿ ಇದ್ದ ದೇವರು.

ಮಕ್ಕಳಾದ ದೇವರು.

ಇನ್ನೊಬ್ಬರ ಹೆಂಡತಿಯನ್ನು ಓಡಿಸಿಕೊಂಡು ಹೋದ ದೇವರು.

ತನ್ನ ಹೆಂಡತಿಯನ್ನು ಇತರರು ಓಡಿಸಿಕೊಂಡು ಹೋಗಲು ಅವಕಾಶ ಕೊಟ್ಟ ದೇವರು...

ಶೀನ ದೇವರ ಬಗ್ಗೆ ಇರುವ ವಿಚಾರದ ಬಾಗಿಲು ಇಕ್ಕಿದ. ತನ್ನ ಬಗ್ಗೆ ವಿಚಾರಿಸಿದ, 'ಗಂಗಾಳೆ ದೇವರು ಬೇಕೆಂದ ಬಳಿಕ ತನಗೂ ಅರ್ಥಮರ್ಥ ಬೇಕೆ ಅಲ್ಲವೇ ?'

Sri Vidyabharathi Book Centre, Sringeri

 CC-O. In Public Domain. Digitized by eGangotri

"ಇರಲಿ ಗಂಗಾ! ಕಾಶಿಗೆ ಹೋಗಬೇಕಲ್ಲವೆ? ಸ್ವಲ್ಪ ಪರಿಸ್ಥಿತಿ ಅನುಕೂಲವಾಗಲಿ ಹೋಗಿಬಿಡೋಣ. ಅದರಲ್ಲಿ ಯಾವ ಮಹಾ?..."

ಗಂಗಾ ಮಾತ್ರ ಶೀನನನ್ನು ದೇವರೇ ಎಂದು ತಿಳಿದಳು. ಯಾಕೆಂದರೆ, ಅವನು ನಿಷ್ಠುರನೆಂದರೆ ನಿಷ್ಠುರ; ಮೃದು ಎಂದರೆ ಬೆಣ್ಣೆಯ ಮುದ್ದೆ.

ಈಗ ಗಂಗಾನ ಜೀವನದಲ್ಲಿ ಒಂದು ನೆಮ್ಮದಿ. ಚಿಕ್ಕಮ್ಮ ಕೊಟ್ಟಿದ್ದ ಪುಟ್ಟ ಗಂಟು ಶೀನನಿಗಾಗಿ ಕರಗಿತು.

ಗಂಗಾನಿಗೆ ಇದು ವಿಶೇಷ ಎನ್ನಿಸಲಿಲ್ಲ. ಅವಳಿಗೆ ದಿಕ್ಕುಗೇಡಿತನದ ಈಟಿಗಳು ಎತ್ತಲಿಂದಲೂ ಇರಿಯುತ್ತಿರುವಾಗ—

ಶೀನ ಅವಳ ಕಣ್ಗೆ ಕಾಮನರಕ್ಷೆಯಾದ.

ಬೆಣ್ಣೆ ಭೀಮನ ರಕ್ಷೆಯಾದ.

ಗಂಗಾ ಅವನಿಗಾಗಿ ಏನನ್ನೂ ತ್ಯಜಿಸಲು ಸಿದ್ಧಳಾಗಿದ್ದಳು. ಪಾಪ! ನಾಲ್ಕು ಪುಡಿಕಾಸು ಹೋದರೆ ಲೆಕ್ಕ ಹಾಕುವಳೇ—?

ಶೀನ ಈಗ ಅವಳಿಗೆ ಬೇರೆಯವನೇ ಅಲ್ಲ.

ಶೀನ ಅಂದು ಸಂಜೆಯ ಮುಂದೆ ಮನೆಯೊಳಗೆ ಇದ್ದಿರಬೇಕು.

ಸಾಬರ ಓಣಿಯ ಯಾವುದೋ ಹುಡುಗ ಬಂದು ಹೇಳಿದ, "ಅಬ್ದುಲ್ ಚಾಚಾ ಕರೆಯುತ್ತಾನೆ."

ಅಬ್ದುಲ್‌ನ ಹೆಸರು ಕಿವಿಗೆ ಬಿದ್ದದ್ದೇ ತಡ ಶೀನ ಧಿಗ್ಗನೆ ಎದ್ದು ನಡೆದೇ ಬಿಟ್ಟ.

ಅಬ್ದುಲ್‌ನಿಂದ ಸ್ವರ್ಣಸೃಷ್ಟಿ

ನಾಲ್ಕು ತಿಂಗಳಿಂದ ಅಬ್ದುಲ್ ಅಂತರ್ಧಾನನಾಗಿದ್ದ. ಅಬ್ದುಲ್‌ನ ಯಾವ ಚಟುವಟಿಕೆಗೂ ಶೀನನ ಸಲಹೆ ಅಗತ್ಯವಿತ್ತು. ಆದರೆ ಒಮ್ಮಿಂದೊಮ್ಮೆ ಆತ ಮರೆಯಾಗಿದ್ದರಿಂದ ಅವನಿಗೊಂದು ಯೋಚನೆ :

ಪಾಪ ಹೊಸದಾಗಿ ಮದುವೆಯಾಗಿದೆ.

ಬೆನ್ನು ಹಿಂದೆ ನೂಕಿಕೊಂಡು ಬರುವ ದಾರಿದ್ರ್ಯ. ಈ ಉಂಡಾಡಿಗೆ ಬೇರೆ ಏನೂ ಕೆಲಸ ಬರುವುದಿಲ್ಲ.

ಯಾರನ್ನು [illegible] ಅಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಲಾಗಿ ಹೆಂಡಂದಿರ ಹತ್ತಿರ ಇಲ್ಲದ ಆಢ್ಯತೆಯ ಕತೆ ಹೇಳಿ ಅದನ್ನು ವಿಸ್ತರಿಸದೆ ಪೇಚಾಡುತ್ತಿರುವ ದುರ್ಬಲ ಜೀವಿಗಳು !

ಶೀನನಿಗೆ ಕನಿಕರ. ಆದರೆ ಅಬ್ದುಲ್‌ನ ಮನಸ್ಸು ತುಂಬ ಒಳ್ಳೆಯದು. ಶೀನನಿಗಾಗಿ ಆತ ಏನೂ ಮಾಡಲು ಸಿದ್ಧ.

ಈತ ಇದ್ದಕ್ಕಿದ್ದಂತೆಯೆ ಪಲಾಯನ ಮಾಡಿದಾಗ ಒಂದೆರಡು ಸಲ ಅವನ ಬೀಬಿ ಕಂಡಿದ್ದಳು ಈತನಿಗೆ.

"ಭಾಬಿ ಹೇಗಿದೆ—"

ಪಾಪ ಮಾನವಂತರ ಮನೆಯ ಹುಡುಗಿ.

"ಚನ್ನಾಗಿದೆ ಅಣ್ಣ" ಎಂದಿದ್ದಳು.

ಧ್ವನಿಯ ಮೇಲೆಯೆ ಶೀನ ಗುರುತು ಹಿಡಿದು ಮರುದಿನ ಕೆಲ ಹಣ ಕೊಟ್ಟು ಬಂದಿದ್ದ.

ಒಂದಲ್ಲ ಹಲವು ಸಲ.

ಇದು ಶೀನ ತನಗೆ ತಾನೇ ಹೆಮ್ಮೆಪಟ್ಟುಕೊಳ್ಳುವ ಕೃತಿ ಅಲ್ಲದಿದ್ದರೂ ಇದನ್ನು ಬಹು ಶ್ರದ್ಧೆಯಿಂದ ಮಾಡಿದ್ದ.

ಅಬ್ದುಲ್ ಊರಿಗೆ ಬಂದ ಬಳಿಕ ತನ್ನ ಹೆಂಡತಿಯಿಂದ ಶೀನನ ಗುಣ ವರ್ಣನೆ ಕೇಳಿದ್ದ.

ಅಬ್ದುಲ್ ಹೃದಯ ತುಂಬಿ ಹೇಳಿದ್ದ,

"ಸಚ್ಚಾ ಬೊಮ್ಮನ್. ಬಹುತ್ ಅಚ್ಛಾ ಆದಮಿ" ಎಂದಿದ್ದ.

ಶೀನ ತಲೆಬಾಗಿಲಿಗೆ ನೇತಾಡುವ ಗೋಣಿತಟ್ಟಿನ ಪರದೆ ಓರೆಮಾಡಿ ಅಬ್ದುಲ್‌ನ ಮನೆ ಪ್ರವೇಶಿಸಿದ.

ಅಬ್ದುಲ್ ಎದ್ದು ಬಂದವನೆ ಶೀನನನ್ನು ಅಪ್ಪಿಕೊಂಡ. ಒಂದು ಕ್ಷಣ ಸುಮ್ಮನಿದ್ದ ಶೀನ.

ಆತ ಹೋದಾಗ ಅವನನ್ನು ಹರಿದು ತಿನ್ನುವಂತೆ ಗಂಗಾನ ಎದುರು ಬೈದಿದ್ದ. ಬೀಬಿಯ ಎದುರೂ ಬೈಯ್ಯುವವನೆ—

ಆದರೆ ಮೆದುಮನಸ್ಸಿನ ಹುಡುಗಿ—ಮನಸ್ಸಿಗೆ ಹಚ್ಚಿಕೊಂಡಾಳೆಂದು ಅವಳನ್ನು ಸಂತೈಸಿ ಕಳಿಸಿದ್ದ.

ಅಬ್ದುಲ್ ಎದುರಿಗೆ ಇದ್ದಾಗಲೂ ಒಂದು ಮಾತು ಆತನನ್ನು ಬೈಯಲಿಲ್ಲ ಶೀನ.

ಕೆಲ ಹೊತ್ತಿನ ನಂತರ [illegible] ಪ್ರಶ್ನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

"ಎಲ್ಲಿ ಹೋಗಿದ್ದಿ ಸಾಬ ?"

"ಓಡಿ ಹೋಗಿದ್ದೆ ಆಚಾರಿ..."

"ಬೀಬಿಯನ್ನು ಸಾಕುವುದು ಆಗದಿದ್ದರೆ ಮದುವೆ ಏಕಾದೆ? ಗಂಡಸಂತೆ... ಈತ..." ಆಚಾರಿಯ ಧ್ವನಿ ಸ್ವಲ್ಪ ಗಡುಸಾಗಹತ್ತಿತು.

"ಆಚಾರಿ ಸಿಟ್ಟಾಗಬೇಕಿಲ್ಲ. ನಿನ್ನ ಹಾಗೆ ನಾನು ಆಫೀಸರನಲ್ಲ."

"ನನ್ನದೇನು ಆಫೀಸರಿಕೆ ಕಂಡಿಯೋ ?"

"ನೀನು ಗಂಟೆ ಬಾರಿಸಿದರೆ ದೇವರು ಪ್ಯೂನ್‌ನ ಹಾಗೆ ಓಡಿ ಬರುತ್ತಾನೆ–ನಮ್ಮ ಅಲ್ಲಾ ಗಂಟಲ ಹರಿದುಕೊಂಡರೂ ಬರಲಿಲ್ಲ. ಓಡಿ ಹೋದೆ..."

"ಏಕೆ ಹೋಗಿದ್ದಿ ಹೇಳೋ ?"

ಅಬ್ದುಲ್ ಶೀನರಿಬ್ಬರಿಗೂ ತೌಡು ಕುಟ್ಟುವುದು ಸಾಕಿತ್ತು. ಒಳಗೆ ಹೋದ ಅಬ್ದುಲ್ ಗೇಣುದ್ದ ಎರಡು ಚಿನ್ನದ ಬಾರ್ ತಂದು ಶೀನನ ಮುಂದೆ ಚೆಲ್ಲಿದ.

ಬೆಂಕಿಯಾಗಿ ನಿಗಿನಿಗಿ ಹೊಳೆಯುವ ಚಿನ್ನದ ಬಾರ್ ಕಂಡು ಶೀನ ಒಂದು ಕ್ಷಣ ದಿಗ್‌ಭ್ರಾಂತನಂತೆ ಇದ್ದ.

"ಆಚಾರಿ ಬೀಬಿಗೆ ಒಂದು ಚಿನ್ನದ ಸರ ತಂದು ಕೊಟ್ಟೆ. ಅದಕ್ಕೆ ನಿನಗೆ ಆದ ತೊಂದರೆ...

ನಾನು ಹೊಟ್ಟೆಯುಪಾಡಿಗೆ ಅದನ್ನು ತಿಂದುಹಾಕಿದೆ ನಿನಗಾಗ ಸಂಕಟ ವಾಗಿತ್ತು. ಬೀಬಿಯ ಕೊರಳು ಹಾಳು ಸುರಿಯುತ್ತದೆ ಎಂದಿದ್ದಿ. "

ಈ ಮಾತು ಬೀಬಿ ಅನ್ನಬೇಕು. ಹೆಂಗಸು ಚಿನ್ನ ಅನ್ನೋದು ಬಹಳ ಕಷ್ಟದಿಂದ ಸಂಪಾದನೆಯಾಗುತ್ತದೆ ಎನ್ನುವುದನ್ನು ಆಕೆ ತಿಳಿಯಬೇಕು. ಗಂಡುಸಾದವನಿಗೆ ...

"ಚಿನ್ನ—ಕಲ್ಲು ಎಲ್ಲ ಒಂದೇನೆ.

ವಜ್ರ—ಇದ್ದಲು ಸಮಾನೆ.

ತಗೊ ಈ ಚಿನ್ನ. ಬೀಬಿಗೆ ಇದರಲ್ಲಿ ಸರ ಎಷ್ಟಾದಾವು ?"

ಶೀನನ ತಲೆಯಲ್ಲಿಯ ಆವೇಗ ಕಡಿಮೆ ಆಗಹತ್ತಿತು.

ಕುತೂಹಲ ಹೆಚ್ಚಿತ್ತು.

"ಎಲ್ಲಿಯದೋ ಇದೆಲ್ಲ ?

ಎಲ್ಲನೂ ಚಿನ್ನವೇನೋ ?"

Sri Vidyabharathi Book Centre, Sringeri

ಶೀನ. ಕೈಗೆತ್ತಿ ನೋಡಿದ. ಚಿನ್ನ ! ನಿಗನಿಗಿ ಕಂಡಿ. ಆಯುಷ್ಯದಲ್ಲಿ

CC-O. In Public Domain. Digitized by eGangotri

ಇಂತಹ ಚಿನ್ನವನ್ನು ಇಷ್ಟು ಪ್ರಮಾಣದಲ್ಲಿ ಕಂಡಿದ್ದಿಲ್ಲ. ಮುಟ್ಟುವುದಂತೂ ದೂರ.

ಅಬ್ದುಲ್ ತನ್ನ ತೀರದ ಹತ್ತಿರದವ.

ತನ್ನ ಜಾತಿಯವ !

"ಜಾತಿ—?"

ಶೀನನಿಗೆ ತನ್ನ ಮನಸ್ಸಿನಂತೆಯೆ ಮನಸ್ಸುಳ್ಳವನೆ ತನ್ನ ಜಾತಿಯವ.

ಬ್ರಾಹ್ಮಣ...ತನ್ನ ಜಾತಿಯಲ್ಲ.

ತನ್ನ ಮನಸ್ಸೆ, ಕೆಲಸವೆ, ವಿಚಾರವೆ ತನಗೆ ಜಾತಿ ತಂದದ್ದು. ಅಬ್ದುಲ್ ಅವೆಲ್ಲದರಲ್ಲಿ ತೀರ ಹೊಂದಿಕೊಂಡವ.

ಇದು ಶೀನನ ಜಾತಿ ವಿವೇಕಾ ಧರ್ಮ ನಿರ್ಣಯ.

"ಎಲ್ಲಿಯದೊ ಇದೆಲ್ಲ....?"

"ಗಣಿಯಿಂದ ಇದನ್ನು ತಂದಿದ್ದೇನೆ.

"ಆಚಾರಿ, ಕೋಲಾರದಲ್ಲಿ ಚಿನ್ನದ ಗಣಿ ಇದೆಯಂತೆ, ನಿನಗೇ ಗೊತ್ತು. ಬ್ರಾಹ್ಮಣ ನೀನು. ಶಾಲೆಗೆ ಮಣ್ಣು ಹೊತ್ತವ. ಆದರೆ ನಾನೂಸು ಚಿನ್ನದ ಗಣಿ ನೋಡಿದ್ದೇನೆ. ಅದು ಕೋಲಾರದಲ್ಲಿ ಇಲ್ಲ; ಗೋವವಲ್ಲಿದೆ. ಶಾಲೆಯ ಭೂಗೋಲಕ್ಕೂ, ಬದುಕಿನುದ್ದಕ್ಕೂ ಎಷ್ಟು ಅಂತರ ಕಣೋ ಆಚಾರಿ !"

"ಏನು ಹೇಳೊ, ಇದನ್ನು ಹೊಡೆದುಕೊಂಡು ಬಂದಿದ್ದೀಯಾ ? ಹಾಗೆ ಹೇಳು. ಕವಿಯ ಹಾಗೆ ಎಷ್ಟು ಅಲಂಕಾರವಾಗಿ ಮಾತನಾಡುತ್ತಿದ್ದೀ?"

"ಚಿನ್ನ ಹೊಡೆದುಕೊಂಡು ಬರದೆ ಅತ್ತು ಕರೆದರೆ ಬರುತ್ತದೆಯೆ ?"

"ನೀನು ಹಿಂದೆ ಬೀಬಿಗೆ ಸರ ತಂದುಕೊಟ್ಟೆ. ದೇವರಿಗೆ ಕಾಲುಬಿದ್ದು ಕೈಜೋಡಿಸಿದಾಗ ಸಿಕ್ಕಿತೆ ? ಮುಂಗೈಯಲ್ಲಿ ಜೋರು. ಎದೆಯಲ್ಲಿ ನೀರು ಬೇಕು. ನೀನೇ ಹೇಳಿದ್ದಿಯಲ್ಲವೋ ?"

'ಸಾಬ ಗಂಡಸರು ಮಾತ್ರ ಬದುಕುತ್ತಾರೆ' ಎಂದು.

"ಇರಲಿ, ಸಾಬ ನಿನ್ನ ಚಿನ್ನದ ಪುರಾಣ ಕೇಳಲು ನನಗೆ ತವಕವಾಗಿದೆ ಬೇಗ ಹೇಳೊ"

ನೀನು ಈಗಲೂ ಬ್ರಾಹ್ಮಣ ಕಣೋ ನಿಮ್ಮಲ್ಲಿ ಎರಡೇ ಜಾತಿ—

ಒಂದು ಪುರಾಣ ಹೇಳುವವರದು

ಇಲ್ಲವೆ ಕೇಳುವವರದು..."

Sri Vidyabharathi Book Centre, Sringeri

CC-O. In Public Domain. Digitized by eGangotri

"ಆಚಾರಿ ಪುರಾಣ ಮಾಡುವವರ ಜಾತಿಗೆ ಸೇರಬೇಕೋ"

ನಿನ್ನೆಯೆ ತನ್ನಿಂದ ಮುಖಕ್ಕೆ ತಿವಿಸಿಕೊಳ್ಳುವ ಈ ಸಾಬಿಗೆ ಎಷ್ಟು ಆರೋಗ್ಯದ ಎಮುಕ ?

ಉದ್ಯೋಗ ಮಾಡಿದರೆ ಸಿರಿ, ಸಂಪತ್ತು.

ನೀನೇ ಎಂದೋ ಹೇಳಿದ್ದ ಜ್ಞಾಪಕ ಇದೆ ಆಚಾರಿ.

'ಲಕ್ಷ್ಮಿ ಸಿಂಹದಂತ ಮನುಷ್ಯನಿಗೆ ಸಿಗುತ್ತಾಳೆ ಎಂದು ಹಣಪುಕ್ಕರಿಗೆ ಬರೋದಿಲ್ಲ ಕಣೋ...'

"ಹೇಳೊ, ಜಂಭಕೊಚ್ಚಿಕೊಳ್ಳಬೇಡ. ನಿನಗೀಗ ಬಂದ ಗಂಡಸುತನ ಚಿನ್ನದ್ದೇ ಅಲ್ಲವೆ ? ಸಾಬಾ. ಚಿನ್ನ ಇಲ್ಲದಾಗಲೂ ಗಂಡಸಾಗಿದ್ದರೇನೆ ನರಸಿಂಹ. ಹೇಳಯ್ಯ ಹೇಳು ನಿನ್ನ ಚಿನ್ನದ ಪುರಾಣ !"

"ಹೇಳ್ತೀನಿ ನನ್ನ ಚಿನ್ನದ ಪುರಾಣಾ !"

ಅಬ್ದುಲ್ ಮನಸ್ಸು ನೀರು. ಅದರಲ್ಲಿಯೂ ಗಳಸ್ಯ ಆಚಾರಿ ಇದುರು ಆತ ಇನ್ನೂ ಹಗುರು.

"ಮನೆಯಲ್ಲಿ ಏನಿತ್ತು? ನಿನ್ನನ್ನಾದರೂ ಎಷ್ಟು ಕಾಡುವುದು. ಸಾಕಾಗಿ ಹೋಗಿತ್ತು. ಒಂದು ದಿನ ಲತೀಫನ ಲಾರಿ ಹತ್ತಿದೆ. ಹತ್ತಿಸಿಕೊಳ್ಳಬೇಕಾದರೆ ಲತೀಫನಿಗೆಷ್ಟು ಕಾಲು ಬೀಳಬೇಕು ! ಕೈಮುಗಿಯಬೇಕು ! ! ಲತೀಫನ ಪರಿಚಯ ಮೊದಲಿನದೇ ಅಲ್ಲ. ಒಂದೆರಡು ಸಾರಿ ಮನೆಗೆ ಊಟಕ್ಕೆ ಕರೆದು ಕೊಂಡು ಹೋಗಿದ್ದೆ. ಆತ ಬೇಡಿದಾಗ ಕಂಟ್ರಿ ಬಾಟಲ್ ತಂದು ಸೇವೆಸಲ್ಲಿ ಸಿದ್ದೇನೆ. ಅವನಿಗೆ ನಾನು ಮಾಡಿದ್ದು ಅಲ್ಪವೇ. ಆದರೆ ಆತ ನನಗೆ ಕೊಟ್ಟಿದ್ದು ತುಂಬ ಜಾಸ್ತಿ..."

"ದೇವರ ಮಾತು, ಕೆಲಸ ಎಲ್ಲ ಹಾಗೇನೇ..." ಶೀನನ ಅಣುಭಾಷ್ಯ ನಡುವೆ.

"ಹೌದು ಲತೀಫ ದೇವರೇ ಏಕಲ್ಲ ಎನ್ನಿಸುತ್ತದೆ."

"ಅಲ್ಲದೇ ಏನು ? ದೇವರಿಗೆ ಇದಕ್ಕಿಂತ ಬೇರೆ ಏನು ಹೆಚ್ಚು ಮಾಡಲು ಸಾಧ್ಯ ?"

"ನಾನು ಲಾರಿಯ ಜತೆ ಬರುತ್ತೇನೆ."

"ಎಲ್ಲಿಗೆ ಬರುತ್ತೀಯಾ ಅಬ್ದುಲ್ ?"

"ಲಾರಿ ಎಲ್ಲಿಗೆ ಹೋಗುತ್ತದೆಯೋ ಅಲ್ಲಿಗೆ..." ನನ್ನ ಉತ್ತರದಿಂದ ನನ್ನ ತಲೆಯ ಬಗ್ಗೆ ಸರಿಯಾಗಿ ಲತೀಫನಿಗೆ ತಿಳಿವಳಿಕೆಯಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

"ನಿನಗೆ ತಲೆ ಕೆಟ್ಟಿದೆ. ಮನೆಯಲ್ಲಿ ಬೀಬಿ ಇದ್ದಾಳೆ. ಅವಳಿಗೆ ಹೇಳಿದ್ದೀಯಾ ?"

ಲತೀಫನಿಗೂ ಅವಳ ವಿಷಯದಲ್ಲಿ ಕನಿಕರ.

ನಾನು ಮನೆಯಲ್ಲಿದ್ದು ಮಾಡುವುದಾದರೂ ಏನು ? ಹಾಗೆ ಏನಾದರೂ ಹೆಚ್ಚು ಕಡಿಮೆ ಬಂದರೆ…ನನ್ನ ಗೆಳೆಯನೊಬ್ಬನಿದ್ದಾನೆ…ಎಂದು ನಿನ್ನ ಹೆಸರು ಹೇಳಿದೆ. ಆತನದು ಅಚ್ಚ ಸಾಬರಮತಿ ! ಏ ಬೇವಕೂಫ್. ಹಾಗೆಲ್ಲ ನಂಬಬೇಡ. ಎಷ್ಟಾದರೂ ಆ ಜನ…ಎಂದ. ನೀನು ಬ್ರಾಹ್ಮಣನೇ ಅಲ್ಲ ಎಂದು ಅವನಿಗೇನು ಗೊತ್ತು ? ಲತೀಫನ ವರಪ್ರಸಾದದಿಂದ ನಾನು ಬೊಂಬಾಯಿಗೆ ಬಂದೆ.

"ಮೊಟ್ಟ ಮೊದಲು ನಾನು ಬೊಂಬಾಯಿ ನೋಡಿದ್ದು. ಮೊದಲ ದಿನ ಊರು ಆಶ್ಚರ್ಯ ಎನ್ನಿಸಿತ್ತು. ಎರಡನೆಯ ದಿನ ಜನ ಅದಕ್ಕೂ ಆಶ್ಚರ್ಯ. ಕೊನೆಗೆ ಜನರ ತಲೆ ಆಶ್ಚರ್ಯಕ್ಕೆ ಪರಮಾಶ್ಚರ್ಯ ಎನ್ನಿಸಿತು.

"ನಮ್ಮ ಹಳ್ಳಿಯಲ್ಲಿ ತಲೆ ಇಲ್ಲದವರು ಕುರಿಗಳ ಹಾಗಾದರೂ ಬದುಕುತ್ತಾರೆ. ಇಲ್ಲಿ ಬೊಂಬಾಯಿಯಲ್ಲಿ ತಲೆ ಇಲ್ಲದೆ ಹೋದರೆ ಕಸಾಯಿ ಖಾನನೇ ಗತಿ.

"ಆಚಾರಿ ತಲೆ ಇಲ್ಲದೆ ಇರುವ ಮನುಷ್ಯ ಬದುಕಬೇಕಾದರೂ ಯಾಕೆ ಅನ್ನಿಸಿತು…"

"ತಲೆ ಎಂದರೆ ಇದೇ ಕಣೊ. ನಿನಗೆ ಬೊಂಬಾಯಿಗೆ ಹೋದ ಬಳಿಕ ತಲೆ ಬಂತು ಎನ್ನು…."

ಅಬ್ದುಲ್‌ನ ಕಾರಿಕೆಗೆ ಶೀನನ ವಾರ್ತಿಕ

"ಬೊಂಬಾಯಿಯಲ್ಲಿ ನಾನು ಲತೀಫನ ಪರೀಕ್ಷೆಯಲ್ಲಿ ಪಾಸಾದೆ. ನನಗೆ ಪಾಸಾದ ಮೇಲೆಯೆ ಪರೀಕ್ಷೆಗೆ ಕಟ್ಟಿದ್ದು ತಿಳಿಯಿತು."

'ಜಾಣ ಪರೀಕ್ಷಕರು ಪಾಸಾದಮೇಲೆಯೆ. ಈ ವಿದ್ಯಾರ್ಥಿ ಪರೀಕ್ಷೆ ಕಟ್ಟಿದ್ದ ಎಂದು ಹೇಳುತ್ತಾರೆ' ಎಂಬ ಮರ್ಮ ಶೀನನಿಗಿತ್ತು.

"ಲತೀಫನಿಗೆ ತನ್ನವರು ಬೇಕಾಗಿದ್ದರು.

ಅಂತಹ ಜನ ನಾನು ಎಂದೂ ಒಪ್ಪಿಕೊಂಡ.

ಬೊಂಬಾಯಿಂದ ಕೊಂಕಣಕ್ಕೆ

ಲತೀಫನ ಕಾರಿಯು ಯಾತಾಯಾತ !

Sri Vidyabharathi Book Centre, Sringeri

CC-O. In Public Domain. Digitized by eGangotri

ಹೋಗುವಾಗ ಚರ್ಮ ಹಾಗು ಇನ್ನೇನೊ ಕಬ್ಬಿಣದ ಯಂತ್ರದ ಹಲವು ಸಾಮಾನು ಒಯ್ಯುವುದು.

ಬರುವಾಗಲೋ—

ಮೀನು...

ಉಳಿದ ಏನೇನೊ ಸಾಮಾನು ತರುವುದು.

"ಮೀನು ಬೊಂಬಾಯಿಯಲ್ಲೇನು ಕಮ್ಮಿ."

"ಮೀನನನ್ನು ಅಲ್ಲೆ ಬೆಳಗಾಮಿಗೊ, ಅದನ್ನು ದಾಟಿಯೋ ಎಲ್ಲಿ ಯಾದರೂ ಇಳಿಸುವುದು. ಈ ಮೀನು ಹಾಗು ಇತರೇ ಕೆಲವು ಸಾಮಾನು ಬರಿ ನೆವದ್ದು."

"ಕೊಂಕಣದಲ್ಲಿ ಬಹು ವಿಚಿತ್ರ ಬಿಸಿನೆಸ್ ನಡೆಯುತ್ತದೆ. ಅದೆಲ್ಲ ಪುರಾಣ ನಿಮ್ಮ ಆ ಯಾರಪ್ಪ ಆತ ಪುರಾಣ ಬರೆದನಲ್ಲ ಅವನೇ ಬರೀಲಿ. ಚಿನ್ನದ ಪೇಟೆಯ ಕತೆ ಹೇಳುತ್ತೇನೆ ಕೇಳು."

ಲಾರಿಯ ಲೋಡ್ ಏನು?

"ನೋಡು ನಾವು ಲಾರಿ ತೆಗೆದುಕೊಂಡು ಎಲ್ಲಿಯಾದರೂ ಸಮುದ್ರ ತೀರದ ಒಂದು ಹಳ್ಳಿಯಲೋ ಇಲ್ಲವೇ ಹತ್ತಿರದ ಟೌನ್‌ನಲ್ಲೋ ವಸತಿ ಮಾಡುತ್ತೇವೆ.

"ಮೊನ್ನೆ ಆದ ಒಂದು ಸಂಗತೀನೇ ಹೇಳಿಬಿಡುತ್ತೇನೆ ಕೇಳು.

"ಈ ಚಿನ್ನ ಸಾಗಿಸುವ ಬಿಸ್ಸಿನೆಸ್‌ದಲ್ಲಿ ಸಂಬಳಗಿಂಬಳ ಇಲ್ಲ, ರೂಪಾಯಿ ಇಲ್ಲಿ ಇಲ್ಲ. ಚಿನ್ನದಬಾರೇ ಲೆಕ್ಕ."

"ಎಲ್ಲರಿಗೂ ಅಂದೀಮತ್ತೆ, ಅಲ್ಲಿ ಸಮತಾವಾದ ಬಂದಿಲ್ಲ, ಎಲ್ಲರಿಗೂ ಈ ಬಿಸಿನೆಸ್ಸೆ ನಡೆದುದು."

"ಗೊತ್ತಾಗುವುದೇ ಇಲ್ಲ. ನನ್ನ ಜತೆಗೇ ಇದ್ದ ನಮ್ಮ ಲಾರಿಯ ಇನ್ನೊಬ್ಬ ಕ್ಲಿನ್ನರ್ ನನಗಿಂತ ಸೀನೀಯರ್. ನೋಡಿದರೆ, ಅವನಿಗೆ ಚಿನ್ನದ ವಾಸನೇನೇ ಇಲ್ಲ."

ಅವನಿಗಿರುವುದು ಮರಿಯ ಮೀನಿನ ವಾಸನೆ ಮಾತ್ರ. ಜೀವದ

Sri Vidyabharathi Book Centre, Sringeri

CC-O. In Public Domain. Digitized by eGangotri

ಯೋಗ್ಯತೆಯು ಮೇಲೆ ಪುರುಷಾರ್ಥ ಕಂಡು, ಕೊಂಕಣದಲ್ಲಿ ಮಾಧ್ವಮತ ಜೀವಿಸಿದೆ ಎಂದು ಟ್ರೆಡಿಶನಲ್ ಮಾಧ್ವನಾದ ಶೀನನಿಗೆ ಸಂತೋಷವಾಯಿತು.

"ಆ ದಿನ ಸಮುದ್ರದ ದಂಡೆಯ ಹಳ್ಳಿಗೆ ಹೋಗಿ ನಾವು ಸ್ವಲ್ಪ ಮೀನ ತುಂಬಿದೆವು.

ಪರ್‌ಮಿಟ್ ಇದ್ದ ಪರದೇಶೀ ಸರಾಯಿಯು ಕೆಲವು ಪೆಟ್ಟಿಗೆ ಇದ್ದವು.

ಈ ಪರ್‌ಮಿಟ್ಟಿನದೂ ಒಂದು ಸ್ಪೆಶಲ್ ಪುರಾಣವೇ ಇದೆ..."

ನಾಲ್ಕೇ ತಿಂಗಳಿನಲ್ಲಿ ಅಬ್ದುಲ್‌ನ ತಲೆ ಇಷ್ಟು ದೊಡ್ಡದಾದದ್ದು ಶೀನನಿಗೆ ಸಂತೋಷವಾಯಿತು.

"ಮುಸಲಂ ಕಿಸಲಾಯತೇ..."

"ಕೊರಡು ಕೊನರುತ್ತದೆ...ಹೌದು..." ಬ್ರಾಂದಿಯ ಜತೆಗೆ ಕೆಲವು ಚಿಲ್ಲರೆ ಸಾಮಾನು—ತೆಂಗಿನಹಗ್ಗ ಮುಂತಾದ್ದು.

"ಈ ಸಾಮಾನುಗಳ ನಡುವೆ ನಿಗಿ ನಿಗಿ ಕೆಂಡ..."

"ಕೆಂಡ ಏಕೋ...?"

ಆಚಾರಿಯ ಅನಾಗರಿಕ ಪ್ರಶ್ನೆ.

"ಹುಚ್ಚು ಆಚಾರಿ ನೀನು, ಅಲ್ಲಿಯ ಚಿನ್ನದ ಬಣ್ಣ ಕೆಂಡಕ್ಕಿಂತ ಕೆಂಪು. ಚಿನ್ನ ತರುವುದು ಸುಲಭವೇ ? ಕೆಂಡ ಹೊತ್ತು ತರಬಹುದು, ಚಿನ್ನ ತರಲಾಸಲ್ಲ. ಚಿನ್ನ ಅದರೊಳಗಿತ್ತು."

"ಹೇಗಿತ್ತು ?"

"ಅಜ್ಞಾನಿಗಳನ್ನೂ ಅಜ್ಞಾನವನ್ನೂ ನೀನೇ ಎಷ್ಟೋ ಸಲ ತೆಗಳಿದ್ದೀ ಅಲ್ಲ..."

"ಗುರುವು ಎಷ್ಟೊಸಲ ಶಿಷ್ಯನಾಗುವ ಸರತಿ ಬರುತ್ತದೆ ಎಂಬುದನ್ನು ನಮ್ಮಪ್ಪ ಹೇಳುತ್ತಿದ್ದ. ಸಾಬ ನಿನ್ನದು ಎಣ್ಣೆ ಬುದ್ಧಿ..."

"ಆಚಾರಿ, ಲಾರಿಯಲ್ಲಿ ಚಿನ್ನ ಇಡುವುದೂ ಒಂದು ಕಲೆ ಕಣೋ."

"ದೊಡ್ಡ ವಿಮಾನ ನೋಡಿದ್ದೀಯಾ ?"

"ನೀನೆಲ್ಲಿ ನೋಡಬೇಕು ? ನಾನು ಯಾವಾಗಲಾದರೂ ಹಿಡಿದ ಮರಿ ಮೀನು, ಜಿಂಗಿಗಳ ರುಚಿ ಮಾತ್ರ ನೋಡಿದವ."

"ಸಮುದ್ರದಲ್ಲಿ ಮಾರುಗಟ್ಟಲೆ ಉದ್ದ ಮೀನು, ನಮ್ಮಲ್ಲಿ ಜಿಂಗಿ ಸಿಕ್ಕ ಹಾಗೆ ಸಿಕ್ಕುತ್ತವೆ..." ಕೇಳುವವ ಅಜ್ಞಾನಿ ಎಂದು ಖಚಿತವಾದ ಮೇಲೆ ಹೇಳುವವನ ಜ್ಞಾನಕ್ಕೆ ಮೊಳ ಉದ್ದ ಕೋಡು.

Sri Vidyabharathi Book Centre, Sringeri

CC-O. In Public Domain. Digitized by eGangotri

"ಮೊಳಗ ಎಲೆ ಇದ್ದ ವಿಮಾನಂತೂ ಸರ್ವೇ ಸಾಮಾನ್ಯ. ಮೊಳಲುದ್ದ ವಿಮಾನಿಗೆ ಹೊಟ್ಟೆಯಲ್ಲಿ ಗೇಣುದ್ದ ಚಿನ್ನದ ಬಾರ್ ಗುಪ್ತವಾಗಿ ಇಡುವುದು. ಮೇಲೆ ಹೊಲಿಗೆ—

"ಇದೆಲ್ಲವೂ ಸ್ಪೆಶಲಿಸ್ಟರ ಕೆಲಸ. ನಮಗೆಲ್ಲ ಬಂದೀತೆ? ಹೊಟ್ಟೆ ಹರಿದು ಹೊಲಿವರೆ—ಇದು ಓರಿಜನಲ್ ವಿಮಾನಿನ ಶರೀರವೇ ಎನ್ನಬೇಕು, ಯಾವ ನನ್ನ ಮಗನೂ.

ಇದೆಲ್ಲ ನಾವು ಮಾಡುವ ಕೆಲಸವೇ ಅಲ್ಲ. ಅದಕ್ಕಾಗಿಯೆ ಸಿದ್ಧಪುರುಷರು ಕೆಲವರಿದ್ದಾರೆ."

ಜಾಣರಿಂದಲೇ ದೊಡ್ಡ ಕೆಲಸವಾಗಬಲ್ಲವು.

ನಮ್ಮ ಡ್ಯೂಟಿ ನಾವು ಮಾಡಬೇಕು. ಅವರ ಕೆಲಸ ಅವರು ಮಾಡಬೇಕು. ಅವರದನ್ನು ನಾವು ಮಾಡಿದರೆ...

ವರ್ಣ ಸಂಕರವಾಗುತ್ತದೆ.

ಸಂಕರದಿಂದ ನರಕವಾಗುತ್ತದೆ.

ನರಕದಿಂದ ಪಿತೃಗಳು—

ಪಿತೃಗಳು ಎಂದರೆ ಪಿತಾಪುತ್ರರೂ.

ಲುಪ್ತಪಿಂಡೋದಕರು —ಹೊಟ್ಟೆಗೆ ಕೂಳಿಲ್ಲದವರೂ ಆಗುತ್ತಾರೆ.

ಶ್ರೀ ಕೃಷ್ಣ ಪಾಂಚಜನ್ಯ ಊದಿ ಹೇಳಿದ್ದ : ನಾಲ್ಕು ವರ್ಣಗಳನ್ನು ಕೆಲಸದ ಆಧಾರದ ಮೇಲಿಂದ ನಾನೇ ನಿರ್ಮಿಸಿದ್ದೇನೆ ಎಂದು.

ಅಬ್ದುಲ್‌ನಂತಹನಿಗೂ ಅದರ ಅನುಭವ. ದೇವರ ಅನುಭವ ಸಾಮಾನ್ಯರಿಗೆ ಬಂದದ್ದೇ ಸಾರ್ಥಕ !

ಈ ವರ್ಣ ವ್ಯವಸ್ಥೆ ಸರಿಯಾಗಿ ನಡೆದರೂ ಒಮ್ಮೊಮ್ಮೆ ಧರ್ಮಗ್ಲಾನಿಯಾಗುತ್ತದೆ. ಧರ್ಮ ಒಮ್ಮೊಮ್ಮೆ ಹಾಳಾಗದೆ ಇದ್ದರೆ ಲೋಕಕ್ಕೆ ಉಳಿಗಾಲವೇ ಇಲ್ಲ. ದೇವರು ಬಂದಿಳಿಯಬೇಕಾದರೆ ಧರ್ಮ ಹಾಳಾಗುವುದು ಅಗತ್ಯವೇ ಆಗಿದೆ.

ದೇವರ ಅವತಾರ ಬೇಕು.

ಧರ್ಮ ಹಾಳಾಗುವುದು ಬೇಡ ಎಂದರೆ ಸಾಧ್ಯವೇ ಇಲ್ಲ.

ಇದೆಲ್ಲ ಶೀನನ ತಲೆಗೆ ಅಂಟಿದ ಸಂಸ್ಕಾರದ ಸೂತಕದ ಚಟುವಟಿಕೆ. ಅಬ್ದುಲ್ ಮುಂದುವರಿದು

Sri Vidyabharathi Book Centre, Sringeri

"ತಜ್ಞರು ತಮ್ಮ ಕರ್ತವ್ಯ ಮಾಡಿದ್ದರು."

CC-O. In Public Domain. Digitized by eGangotri

ನಾವು ನಮ್ಮ ಕರ್ಮಕೌಶಲದೊಂದಿಗೆ ಸಾಮಾನು ಹೇರಿದೆವು. ಯಾವ ಮೀನಿಗೆ ಎಲ್ಲಿ ಜಾಗ, ಚಿನ್ನ ನುಂಗಿದ್ದ ಮೀನು ಯಾವುದು ? ಮನುಷ್ಯ ನುಂಗುವ ಮೀನು ಯಾವುದು ? ಎಂಬ ತಾರತಮ್ಯ ಜ್ಞಾನಪೂರ್ತಿ ಇತ್ತು— ನಮಗೆ.

"ನಾವು ಹಳ್ಳಿಯಲ್ಲಿ ಕುತ್ತಿಗೆಮಟ್ಟ ಗನೆ ಮರದ ಸೇಂದಿ ಕುಡಿದು ಲಾರಿ ಬಿಟ್ಟೆವು. ರತ್ನಾಗಿರಿಯ ದೊಡ್ಡ ರಸ್ತೆಗೆ ಬಂದೆವು.

"ಎದುರಿಗೊಂದು ಯಮದೂತರ ವಾಹನ ! ಧೂಳು ತೂರುತ್ತ ಬಂತು.

"ನಮಗೆ ಪೋಲಿಸರ ತೊಂದರೆ ಇಲ್ಲ. ಕೊಡುವುದನ್ನು ಕೊಟ್ಟಮೇಲೆ ಅವರದಾದರೂ ಏಕೆ ಅಂಜಿಕೆ ಇರಬೇಕು ?

"ಸಾಮಾನ್ಯಮಟ್ಟಿಗೆ ಪೋಲಿಸರೂ ಎಂದೂ ಮಾತಿಗೆ ತಪ್ಪುವುದಿಲ್ಲ. ತಿಂದಮೇಲೆ ತಿರುಗಿ ಬೀಳುವ ಜನ ಮನುಷ್ಯರಲ್ಲಿ ಕಡಿಮೇನೇ ಅನ್ನು. ತಿಂದವರೂ ಒಬ್ಬೊಬ್ಬರೆ ಅಲ್ಲ ಸಾಲಾಗಿ–ಮೇಲಿಂದ ಕೆಳಗಿನವರೆಗೆ, ಅಲ್ಲವೊ ತಪ್ಪಿದೆ ಕೆಳಗಿನಿಂದ ಮೇಲಿನವರೆಗೆ. ಪಾಂಕ್ತವಾಗಿ ಅವರವರ ಜೀವದ ಯೋಗ್ಯತೆಗೆ ತಕ್ಕಂತೆ !...

ಅಲ್ಲಿಯೂ ಮಧ್ವಮತ.

"ಮಧ್ವಮತದ ಪದ್ಧತಿ ಬಿಡಬೇಡ್ರಿ, ಬಿಡಬೇಡ್ರಿ..."

ದಾಸರ ಕೂಗು ಸಾರ್ಥಕ....

"ಆಚಾರಿ ಪೋಲಿಸಿನವರು ಎಷ್ಟು ಪ್ರಾಮಾಣಿಕರು ನಿನಗೆ ಗೊತ್ತೇ ಇಲ್ಲ. ಮೇಲಿನ ಅಧಿಕಾರಿ ಕೆಳಗಿನವರಿಗೆ ಆದೇಶ ಕೊಡುತ್ತಾರೆ–'ಇಂತಹ ದಾರಿಯಲ್ಲಿ ಈ ದಿನ ಬರುವ ಲಾರಿಗಳ ತನಿಖೆ ನಡೆಯುತ್ತದೆ. ಆ ದಿನ ಲಾರಿ ಗಳಲ್ಲಿ ಯಾರೂ ಕಳ್ಳಚಿನ್ನ, ಮಧ್ಯ, ಪರಮಿಟ್ಟಿಲ್ಲದ ಯಾವ ಸಾಮಾನೂ ಸಾಗಿಸಕೂಡದು.'

"ಸರಕಾರದ ಆಜ್ಞೆ ಪಾಲಿಸುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯ ಎಂದು ನೀನೂ ಹೇಳುತ್ತಿದ್ದಿ. ನಾವೂ ಹಾಗೆ ನಡೆದುಕೊಳ್ಳುತ್ತೇವೆ.

"ಇಷ್ಟೇ ಅಲ್ಲವೊ.

"ಒಮ್ಮೊಮ್ಮೆ ನಮಗೆ ಪಾಳಿ ಇರುತ್ತದೆ.

"ನಮ್ಮ ಮೋಟರಿಗೆ ನಂಬರು ಇರುತ್ತದೆ.

"ಗೊತ್ತೆ ? ಪೋಲೀಸ್ ಆಫೀಸಿನಿಂದ ನಮಗೆ ಪ್ರೈವೇಟ್ ಆಗಿ ಹೇಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಲಾಗಿರುತ್ತದೆ. ಎರಡು ತಿಂಗಳಿಗೊ ಮೂರು ತಿಂಗಳಿಗೊ ಒಂದು ಮೈನರ್ ಕೇಸು ರಿಜಿಸ್ಟ್ರಿ ಮಾಡುತ್ತೇವೆ ಎನ್ನುತ್ತಾರೆ. ನಾವೇಕೆ ಬೇಡ ಅನ್ನಬೇಕು.

"ಕೇಸು ರಿಜಿಸ್ಟ್ರಿ ಮಾಡುವುದು ಅವರ ಡ್ಯೂಟಿ, ಮಾಡಲೇಬೇಕು.

"ಆ ದಿನ ಅವರು ಅಂತಃಕರಣದಿಂದ ನಮಗೆ ಹೇಳಿದ ಮೇರೆಗೆ ನಾವು ಲಾರಿಯಲ್ಲಿ ಬರಿ ಹುಲ್ಲು, ಖಾಲಿ ಮಿಾನು ಒಂದೆರಡು ಪರಮಿಟ್ಟಿಲ್ಲದ ಮಧ್ಯದ ಬಾಟಲು, ಪೋಲೀಸಿನವರಿಗೆ ಬೇಕು ಎನ್ನಿಸಿದ್ದರೆ ಒಂದೆರಡು ಚಿಲ್ಲರೆ ಚಿನ್ನದ ಬಾರು ಹಾಕಿಕೊಂಡು ಬಂದಿರುತ್ತೇವೆ.

"ಮಾಮೂಲಾಗಿ ತನಿಖೆ ನಡೆದು ಮಹಜರ್ ನಡೆಸಲಾಗುತ್ತದೆ. ಅದರಿಂದ ಲಾರಿಗೆ 10 ದಿನ ಸಸ್ಪೆನ್‌ಷನ್ ಇಲ್ಲವೆ ಐವತ್ತು ರೂಪಾಯಿ ಜುಲ್ಮಾನೆ.

"ಈ ಸಸ್ಪೆನ್‌ಷನ್ ತೆಗೆದುಕೊಳ್ಳುವ ಮುಂಚೆ ನಾವೂ ಲಾರಿ ಸರ್ವೀಸಿಗೆ ಬಂದಾಗ ಇಲ್ಲವೆ ರಿಪೇರಿ ಹೋಗುವಾಗ ತೆಗೆದುಕೊಳ್ಳುತ್ತೇವೆ.

"ಪೋಲೀಸಿನವರೂ ಅಷ್ಟು ಅಡ್‌ಜೆಸ್ಟ್ ಆಗುತ್ತಾರೆ ಪಾಪ!

"ಆ ದಿನ ಪಾಪ! ಅದಾವನೊ ಸಬ್‌ಇನ್ಸಪೆಕ್ಟರ್!! ಹೊಸತಲೆಯ ಹುಡುಗ. ಸರಕಾರದ ಕೆಲಸವನ್ನು ತನ್ನ ಮನೆಯ ಕೆಲಸ, ದೇವರ ಕೆಲಸ ಎಂದು ತಿಳಿದುಕೊಂಡ. ಹನುಮಂತ! ನಮ್ಮ ಲಾರಿ ತರುಬಿದ. ಈ ಹೊಸ ತಲೆಯ ಹುಡುಗನನ್ನು ಕಂಡು ಲತೀಫ್ ಸ್ವಲ್ಪ ಬೇಜಾರುಗೊಂಡಿದ್ದ.

"ಪ್ರಮಥಗಣವೆಲ್ಲ ಸನಾತನ ಕಾಲದ್ದೇ. ಒಬ್ಬ ಪೋಲೀಸಿನವ ಬೀಡಿಗೆ ಮುತ್ತು ಕೊಡುತ್ತ ಲತೀಫನಿಗೆ ಏನೋ ಹೇಳಿದ. ಕೂಡಲೆ ಲತೀಫ ಕರೆದು ನನ್ನನ್ನು ಎಳೆದುಕೊಂಡುಹೋದ. ಸಬ್ ಇನ್ಸಪೆಕ್ಟರ್ ಹೊಸಬ. ಲಾರಿಯನ್ನು ತನಿಖೆಮಾಡುವಲ್ಲಿ ತಾನೂ ತೊಡಗಿದ್ದ. ಉಳಿದ ಪೋಲೀಸರಿಗೆ ನಾವು ಪಾರಾಗುವುದೇ ಬೇಕಿತ್ತು. ನಮ್ಮನ್ನು ರಕ್ಷಿಸುವುದೂ ಅವರ ಹೊಣೆ. ಪೋಲೀಸರು ಪ್ರಜೆಗಳ ರಕ್ಷಕರು. ನಾವು ಪೋಲೀಸರ ದಯೆಯಿಂದಲೆ ಪಾರಾದೆವು. ದೂರ ಓಡಿಬಂದ ಬಳಿಕ ಲತೀಫ ಹೇಳಿದ—ಅಬ್ದುಲ್ ನಮ್ಮ ಕಮಾಯ್ ಇನ್ನು ಇದೆ. ಬಲು ಜೋರ್ ಓಡು. ಇವನಾವನೋ ಬೇವಕೂಫ್ ಇನ್ಸಪೆಕ್ಟರ್ ನನ್ನ ಮಗ ತಿಳಿಸದೆ ತನಿಖೆಗೆ ಬಂದಿದ್ದಾನೆ. ಹೊಸಬ ಒಂದು ತಿಂಗಳಲ್ಲಿ ಹಾದಿಗೆ ಬರುತ್ತಾನೆ.

"ನಾವು ಓಡಹತ್ತಿದೆವು. ಒಂದು ಗಂಟೆ ಓಡಿರಬೇಕು. ಕಾಡಿನಲ್ಲಿ ಮುಳ್ಳುಕಂಟಿ ತರೆದು ಮೈ ಪರಚಿಕೊಂಡಿತ್ತು. ನನಗೆ ದಣಿವಾಗಿತ್ತು. ಆದರೂ ಓಡಬೇಕೆಂದು ಲತೀಫನ ಆಜ್ಞೆಯಿತ್ತು. ಬಹಳ ಓಡಿದ ಮೇಲೆ ನಿಂತೆವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಲತೀಫನ ಮೈಗೆ ಬೆವರು, ರಕ್ತ ಜಳಕ ಹಾಕಿತ್ತು. ನನಗೂ ಹಾಗೆಯೆ ಇತ್ತು. ಶರ್ಟು ಹರಿದಿದೆ, ಪೈಜಾಮ ಕಿತ್ತುಹೋಗಿದೆ.

"ಲತೀಫ್ ಚಾರ್‌ಮಿನಾರಿಗೆ ಬೆಂಕಿ ಹಚ್ಚಿದ. ನನ್ನದು ಕ್ಲಿನ್ನರ ಗ್ರೇಡ್. ಕ್ಲಿನ್ನರ ಬೀಡಿ ರ‍್ಯಾಂಕಿನವ. ಬೀಡಿ ಹುಡುಕಾಡ ಹತ್ತಿದೆ. ನನ್ನ ದೇವರು ಲತೀಫ್ ಕನಿಕರದಿಂದ ಮುಂದೆ ಕರೆದು, 'ಜೇಬೇ ಕಿತ್ತುಹೋಗಿದೆ. ಬೀಡಿ ಸಿಕ್ಕೀತೆನೋ ? ಹಿಡಿ ಈ ಚಾರ್‌ಮಿನಾರ್....'

"ಒಂದನ್ನು ಎಳೆದುಕೊಟ್ಟೆ.

"ಬೆಂಕಿಕಡ್ಡಿಗಾಗಿ ಪೆಟ್ಟಿಗೆ ಅಲುಗಾಡಿಸಿದ. ಅಲ್ಲೂ ದ್ವೈತ. ಎರಡೇ ಕಡ್ಡಿ ಇತ್ತು.

"ಮಿತವ್ಯಯ—ತನ್ನ ಸಿಗರೇಟಿನಿಂದ ನನ್ನದನ್ನು ಚುಂಬಿಸಿದ.

"ಎದೆ ನಡುಗುತ್ತಿತ್ತು. ನನ್ನದು ಲತೀಫನದಲ್ಲ. ಆತ ಆರು ಹೆತ್ತವ. ನನ್ನದೊ...

"ಭಾಯಿ ಲಾರಿಯ ಗತಿ...?"

"ಇದು ಪ್ರಜಾರಾಜ್ಯ ಲಾರಿಗೇನಾಗುತ್ತದೆಯೋ ಎಲ್ಲ ಪೋಲೀಸಿನವರೂ ನಮ್ಮವರೆ ಕಾಯುತ್ತಾರೆ. ಇವನೇ ಯಾವನೊ ಬೇವಾರ್ಸಿ ಹೊಸಬ ಇಷ್ಟು ಗಲಾಟೆ ಮಾಡಿದ."

"ಆದರೊಳಗಿದ್ದ ಚಿನ್ನ...?"

"ಸಬ್ ಇನ್ಸಪೆಕ್ಟರ್‌ಗೆ ತಲೆ ಇದ್ದರೆ ಚಿನ್ನ ಹೋಯಿತು. ಇಲ್ಲದಿದ್ದರೆ ಬಚಾವಾದೆವು. ಈ ಸಲ ನಾವು ಮಾಡಿದ ಟ್ರಿಕ್ ಹೊಸತು. ಇದು ಪೋಲೀಸರಿಗೆ ತಿಳಿಯಬೇಕಾದರೆ ಸಮಯ ಬೇಕಾದೀತು.

'ಅಲ್ಲಾ ಏನು ಮಾಡುತ್ತಾನೆಯೋ ಮಾಡಲಿ...'

"ಚಿನ್ನ ಇದ್ದದ್ದು ಗೊತ್ತಾದರೆ..."

"ಹೋಯಿತು."

"ಎಷ್ಟು ಈಸಿಯಾಗಿ ಅಂದ ಗೊತ್ತೇ ? ಲತೀಫ್ ಹೆಂಟೆ ಕಳೆದರೆ ಎಷ್ಟು ಸಲೀಸೋ ಹಾಗೆ—"

ಶೀನ ಉತ್ತೇಜಿತನಾಗಿ ಹೇಳಿದ.

ಅದನ್ನೇ ಹೇಳುವುದು—

"ಚಿನ್ನ ಹೆಂಟೆ ಒಂದೇ ಎಂದು ತಿಳಿಯುವಾತನೇ ಗಂಡಸು" ಎಂದು.

"ಮುಂದೆ ಆಯಿತು ಬಿಡು, ಎಂಟು ದಿನಗಳಲ್ಲಿ ಲಾರಿ ನಮ್ಮ ವಶಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂತು. ಚಿನ್ನ ಯಾರ ಕೈಗೂ ಹತ್ತದೆ ಉಳಿದಿತ್ತು. ಮದ್ಯದ ಬಾಟಲ್‌ಗಳು ಪೋಲೀಸ್ ಸ್ಟೇಶನ್‌ನಲ್ಲೇ ಹೋಗಿರಬೇಕೆಂದು ಅನುಭವಸ್ಥನಾದ ಲತೀಫ ಹೇಳಿದ್ದ.

"ಒಂದು ದಿನ ಲತೀಫ್ ನನ್ನನ್ನು ಮುಂದೆ ಕರೆದು ಹೇಳಿದ—

'ಅಬ್ದುಲ್ ನಿನಗೆ ಒಂದು ವಾರ ರಜ. ಲಾರಿಯನ್ನು ರಿಪೇರಿಗೆ ತೆಗೆದಿದ್ದೇನೆ. ಊರಿಗೆ ಹೋಗಿ ಬಾ—'

"ನಾನು ಊರು ಬಿಟ್ಟು ಎಷ್ಟೋ ದಿನ ಆಗಿತ್ತು. ಊರಿಗೆ ಹೋಗಬೇಕೆಂಬ ಎಚ್ಚರವೇ ಇಲ್ಲ"

"ಬೇರೆ ಯೋಚನೆಯಿಲ್ಲದೆ ಕೆಲಸ ಮಾಡುವುದೇ ಯೋಗ!"

"ನೀನೆಲ್ಲ ಪುಕ್ಕ ಬ್ರಾಹ್ಮಣರ ಶಾಸ್ತ್ರ ಹೇಳಬೇಡವೊ"

"ನೀನು ಪುಕ್ಕನೇನೂ—?"

"ಬ್ರಾಹ್ಮಣನೇ...."

"ಅಲ್ಲದೇನು...."

ಬುದ್ಧಿ ಇದ್ದವರೆಲ್ಲರೂ ಅವರೇ—

ಬುದ್ಧಿ ಇಲ್ಲದ ಬ್ರಾಹ್ಮಣ...ಅಲ್ಲವೇ ಅಲ್ಲ.

"ಲತೀಫ ನನಗೆ ಊರಿಗೆ ಹೋಗು ಎಂದಾಗ ಜೀವದ ಸುತ್ತು ಬಂತು. ಬೀಬಿ, ಆ ಖಾಲಿ ಮನೆ ನೆನಪಾಯಿತು.

"ನಾಲ್ಕು ಚಿನ್ನದ ಬಾರುಗಳನ್ನು ನನ್ನ ಮುಂದೆ ಚೆಲ್ಲಿ ಹೇಳಿದ,

'ಹೋಗು ಊರಿಗೆ ಹೋಗು.'

'ನಾನು ಹಿಂದು ಮುಂದು ನೋಡಿದೆ. ಲತೀಫ್ ಪ್ರೇಮದಿಂದ ಹೇಳಿದ,

'ಅಬ್ದುಲ್ ನೀನು ಬಹು ಸಾಚಾ ಹುಡುಗ. ಇದು ತೆಗೆದುಕೊ ಮೇಲೆ ವೆಚ್ಚಕ್ಕೆ...' ಎಂದು ಹತ್ತು ದೊಡ್ಡ ನೋಟುಗಳನ್ನು ನನ್ನ ಕೈಗೆ ಕೊಟ್ಟ.

'ಆತ ಬರಿ ಚಿನ್ನ ಕೊಡಲಿಲ್ಲ; ಅದರ ಅನುಪಾನವನ್ನೂ ಹೇಳಿದ್ದ.

'ಪ್ರಾಪ್ತಿಯ ಅರ್ಧಪಾಲು ನಿನಗೆ. ಇದು ತೆಗೆದುಕೊ ಎರಡು ಬಾರ್. ನಿನ್ನ ಐನೂರು ಹಣ. ನಾನು ಮನಸ್ಸಿನಲ್ಲಿ ಮಾಡಿದ್ದೆ. ನಾನು ಹಣ ಸಂಪಾದಿಸಿದ್ದರಲ್ಲಿ ನಿನಗೆ ಅರ್ಧ ಸೇರಲೇಬೇಕು ಎಂದು. ನನ್ನ ಸಂಪಾದನೆಯುಲ್ಲಿ ನಿನ್ನದೂ ಶ್ರಮ ಇದೆ. ನೀನು ಇಲ್ಲಿ ಇದ್ದರೂ ನನಗೆ ಒಳ್ಳೆಯದಾಗಲಿ ಎಂದು ತಪಿಸುತ್ತಿದ್ದಿ. ನನಗೂ ಒಳ್ಳೆಯದು ನಿನಗೂ....' "

Sri Vidyabharathi Book Centre, Sringeri

ಬೀಬಿ ಕಾಫಿ ಮಾಡಿದ್ದಳು. ಇಬ್ಬರೂ ಕುಡಿದರು. ಶೀನ ತನ್ನನ್ನು ತಾನೇ

CC-O. In Public Domain. Digitized by eGangotri

ನಂಬಲಿಲ್ಲ. ಚಿನ್ನದ ಗಟ್ಟಿಗಳನ್ನು ಕೈಗೆತ್ತಿಕೊಂಡು ನೋಡಿದ, ಜಡ! ತುಂಬ ಜಡ.

ಅವನ ಹೃದಯ ತುಂಬಿ, ಚಿನ್ನಕ್ಕೂ ಜಡ.

"ಇಷ್ಟು ತೆಗೆದುಕೊಳ್ಳಲು ಭಯವಾಗುತ್ತದೆ ಅಬ್ದುಲ್."

"ಭಯ! ಎಂತಹ ಬ್ರಾಹ್ಮಣನೊ ನೀನು? ಬ್ರಾಹ್ಮಣರಿಗೆ ಭಯವೇ? ಶೂದ್ರನೇ ಸರಿ ನೀನು..."

ಅಬ್ದುಲ್ಲನಿಗೆ ಬೊಂಬಾಯಿ ನಾಲ್ಕು ತಿಂಗಳಲ್ಲಿ ಕೊಟ್ಟ ಲೋಕಾನುಭವದ ದಾರ್ಢ್ಯದಿಂದ ಬಂದ ಮಾತು ಇದು.

"ಪೋಲಿಸರ ಕೈಗೆ ಸಿಕ್ಕಿಹಾಕಿಕೊಂಡೇನು ಎಂದು ಹೆದರುತ್ತಿಯಾ? ಪೋಲಿಸರು ನಾಲ್ಕನೆ ವರ್ಣದ ಜನ. ನಮ್ಮ ಸೇವಕರು ಕಣೋ! ಅವರ ಭಯ ನಿನಗೆ ಬೇಡ. ನಿನ್ನಿಂದ ಅವರಿಗೆ ಭಯ ಸಾಧು..."

ಶೀನ ತನ್ನ ಧೋರಣೆ ಸ್ಪಷ್ಟ ಪಡಿಸಿದ:

"ಎಲೊ ಸಾಬ ನನ್ನ ಭಯ ಅದು ಅಲ್ಲವೊ, ಈಗ ನಾನು ಈ ಚಿನ್ನ ತೆಗೆದುಕೊಂಡೆ ಎಂದಿಟ್ಟುಕೊ; ಇದನ್ನು ನೀನು ಎಷ್ಟು ಸಲೀಸಾಗಿ ಕೊಟ್ಟಿದ್ದೀಯೋ ಅಷ್ಟೇ ಧಾರಾಳವಾಗಿ ನಾನು ಹಾಳುಮಾಡುತ್ತೇನೆ. ಇದು ದುಡ್ಡು! ನಮ್ಮ ಸಂಬಂಧ ಕೆಡಿಸೀತು ಅನ್ನೋ ಭಯನೇ–? ಮತ್ತೇನಿಲ್ಲ"

"ತಾಪ್ರುದ ದುಡ್ಡಾದರೆ ತಾಯಿ ಮಕ್ಕಳನ್ನೂ ಕೆಡಿಸೀತು. ಇದು ಚಿನ್ನದ ದುಡ್ಡು ಕಣಪ್ಪ ಆಚಾರಿ. ಯಾವ ಭಯವೂ ಇಲ್ಲದೆ ಬೇಕಾದಷ್ಟನ್ನು ಹಾಳುಮಾಡಬಹುದು.

"ಹಾಳುಮಾಡುವುದಕ್ಕೆ ಹೆದರಬೇಡ!

"ಜಿಂಜರಿಯ ಬೇಡ!

"ಹಣವೆಂದರೇನೆ ದ್ರವ್ಯ ಎಂದು ತಿಳಿಯಲಾರದ ನೀನೆಂತಹ ಸು-ಸಂಸ್ಕೃತ?

"ಹಣ ಹರಿಯಲಿಕ್ಕೇ ಹುಟ್ಟಿದೆ.

"ಗಟ್ಟಿಯಾಗಿರಲಿಕ್ಕೆ ಅದು ಬಂದಿಲ್ಲ."

ಅಬ್ದುಲ್ಲನ ಅರ್ಥಶಾಸ್ತ್ರ ಸರಣಿ.

ಅಪಾರವಾದ ಅನುಭವ ಪಡೆದ ಅಬ್ದುಲ್ ಶೀನನಿಗೆ ಇನ್ನೂ ಮುಂದು ವರಿದು ಹೇಳದೆ ಇರಲಿಲ್ಲ.

"ಲೇ ಹುಚ್ಚು ಆಚಾರಿ. ನೀನು ಎಬಡ ಶೀನ. ಚಿನ್ನ ನಮಗಿದ್ದುದು ಉಪಯೋಗಕ್ಕಾಗಿ ಎಂಬುದನ್ನು ನೀನು, ನಾನು ಚಿನ್ನಿಗ ಬಲ್ಲೆವು. ನೀನು

Sri Vidyabharathi Book Centre, Sringeri

 CC-O. In Public Domain. Digitized by eGangotri

ಇದನ್ನು ಇಡಿಯಾಗಿ ಅಂಗಡಿಗೆ ತೆಗೆದುಕೊಂಡು ಹೋಗೀ...? ಸಿಕ್ಕಿಬಿದ್ದೀ ಬಲು ಹುಶಾರಿ.

"ನೀನೂ ಮಾನಿನ ಮರಿಯೇ ಸರಿ.

"ನನ್ನಿಂದ ಈಜು ಕಲಿಯಬೇಕಿಲ್ಲ ಎಂದಿಟ್ಟುಕೋ.

"ಈ ಹಣ ತೆಗೆದಕೋ, ಚಿಲ್ಲರೆ ವೆಚ್ಚಕ್ಕಾಗಿ.

"ಚಿನ್ನ ಮಾರುವಾಗ ಚೆನ್ನಾಗಿ ಹುಶಾರಿರು."

ಈಗ ಅಬ್ದುಲ್ ಶೀನನಿಗೆ ತಂದೆಯ ಸಮಾನ.

ಈ ಮಾತುಗಳನ್ನು ಉಪನಯನ ಸಮಯದಲ್ಲಿ ಉಪದೇಶಿಸುವ ಗಾಯತ್ರಿಗೆ ಯಾವ ಕಮ್ಮಿ ತೂಕದ್ದಲ್ಲ ಎಂದು ಶೀನನಿಗೆ ಅನ್ನಿಸಿತು.

ಇದು ಶೀನನ ಮಾನಸಿಕ ಲಾಘವವಲ್ಲ.

ಗಟ್ಟಿ ಗಟ್ಟಿಯೇ, ಟೊಳ್ಳು ಟೊಳ್ಳೆ?

ಶೀನ ಚಿನ್ನ ಮಾರಿದ್ದೂ ಇದೇ ಮೊದಲ ಸಲವಲ್ಲ.

ಅಬ್ದುಲ್ ಚಿನ್ನ ತರುವುದೂ ಇದೇ ಕೊನೆಯ ಸಲವೂ ಅಲ್ಲ.

ಹುಚ್ಚು ಮನಸ್ಸು ಒಂದು ಕ್ಷಣ ಹಿಂದಿನ ಹುದುಲಿನಲ್ಲಿ ಸಿಕ್ಕಿಬಿದ್ದು ಕಿತ್ತುಕೊಂಡು ಬಂತು.

ಬೀಬಿಗೆ ಒಂದು ತೊಲದ ಚಿನ್ನದ ಸರ ತರಲು ತಾವು ಮಾಡಿದ ಯಾಗ ಚಿಕ್ಕದಾಗಿರಲಿಲ್ಲ.

ಈಗಲೋ ಮನೆಯಲ್ಲಿ ಚಿನ್ನ ಒಂದು ಲೋಹ!

ಗಂಗಾ ಮೈ ತುಂಬ ಬಂಗಾರ

ಶೀನನ ಕೈಗೆ ಬಂದ ಚಿನ, ಗಂಗಾನ ಮೈಗೆ ಬಂತು! ತನ್ನ ಕೈಗೆ ಬಳೆ ಕೊರಳಿಗೆ ಸರ, ಬೆನ್ನಿಗೆ ಶೀನನ ಆಸರೆ ಕಂಡು ಗಂಗಾ ಹೆಪ್ಪುಗಟ್ಟಿದಳು.

ದೇವರು ವಿವೇಕ ಹಂಚುತ್ತಾನೆ ಎಂದು ಗಂಗಾನಿಗೆ ಕೇಳಿಗೊತ್ತು!

ಗಂಗಾನಿಗೆ ದೇವರು ಯಾರು? ಇದನ್ನು ಅವಳು ವಿಚಾರಿಸಲಿಲ್ಲ. ಉಳಿದವರು ವಿಚಾರಿಸಿದ್ದರೆ ಅವರ ತಲೆಗೆ ಅದು ಬರಿ ಭಾರ.

ವಿವೇಕ ಹಂಚುವಾಗ ದೇವರಿಗೂ ಪಕ್ಷಪಾತ.

ಸ್ವಜನ ಪ್ರೇಮ ಇನ್ನುವುದು ಕೇವಲ ರಾಜಕೀಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ಜನಕ್ಕೆ ಮಾತ್ರ ಹತ್ತಿದ ತೇಪೆಯಲ್ಲ.

ರಾಜಕೀಯವೂ ದೇವತೆಗಳ ಕೊಡುಗೆಯೇ.

ಅಲ್ಲದೆ, ಅವರದೇ ಆದ ರಾಜ್ಯ ಇಲ್ಲದಿದ್ದರೆ ಮನುಷ್ಯ ಪ್ರಾಣಿ ಎಷ್ಟು ನೆಮ್ಮದಿಯಿಂದ ಇರಬಹುದಿತ್ತು. ಇವೆಲ್ಲ ವಿಚಾರ ಜಂತುಗಳು ಗಂಗಾತೀರದಲ್ಲಿ ತಲೆ ಎತ್ತಿದ್ದವು.

ದೇವರು ಗಂಡಸು ಎಂದು ಗಂಗಾನ ಕಲ್ಪನೆ.

ಗಂಡಸು ದೇವರು ಎಂಬುವುದು ಗಂಗಾನ ಅನುಭವ,

ಆತ ಮಾಡಿದೇನು ?

ಹಿಗ್ಗಿ ಅಗಲವಾಗಿದ್ದಳು. ಗಂಗಾ ಶೀನ ತಂದ ಚಿನ್ನದದಿಂದ ಚರಿತ್ರದ ಗವಿಯೊಳಗೆ ಹೊಕ್ಕಳು.

ಅಡುಗೆಯ ಮನೆಯ ತಗ್ಗಿನಲ್ಲಿಯೆ ಜೀವ ಅರೆದ ಅವಳಿಗೆ,

ಗಂಡಸರ ಭಾಗ್ಯ ಹೇಗೆ ತಿಳಿಯಬೇಕು.

ತಲೆ ಓಡಲಿಲ್ಲ !

ಭಾರವಿಲ್ಲದ ಅವರ ಹಗುರು ತಲೆಗೆಇಷ್ಟು ವಿಚಾರ ತುಂಬ ಜಡವಾಗಿತ್ತು.

ಡೈರೆಕ್ಟಾಗಿ ಶೀನನಿಗೇ ಕೇಳಿದಳು.

ಇಷ್ಟು ದಿನ ಹುಟ್ಟುಗೈ ಇಟ್ಟುಕೊಂಡಿದ್ದ ಗಂಗಾ ಅವುಗಳನ್ನು ತೋರಿಸುತ್ತ,

"ನಿನ್ನ ಹೆಸರಷ್ಟೆ ಶ್ರೀನಿವಾಸ ಎಂದು ತಿಳಿದಿದ್ದೆ..."

ಹೋಗಲಿ ಶೀನ, ಇದೆಲ್ಲ ಏನು ?

ಇದರ ಪೂರ್ವಾಪರ ಹೇಗೆ—?

ತಿಳಿಯಬಯಸುತ್ತೇನೆ. ಹೇಳುತ್ತೀಯಾ ?"

"ಗಂಗಾ ಎಲ್ಲವೂ ದೇವರ ಇಚ್ಛೆ. ನೀನು ಬರಿ ಕೊರಳಿನಲ್ಲಿ, ಹುಟ್ಟುಕೈಯಲ್ಲಿ ಇರುವುದು ಆತನಿಗೇ ಅಸಹ್ಯವಾಗಿ ಕಂಡಿರಬೇಕು. ಆತನೆ ಯಾರ ನಿಮಿತ್ತ ಮಾಡಿಕೊಂಡೊ ಇದೆಲ್ಲವನ್ನೂ ಕಳಿಸಿದ್ದಾನೆ. ಅವನು ಬಯಸದೆ ಇಲ್ಲಿ ಬಂದು ಹುಲ್ಲುಕಡ್ಡಿಯೂ ಚಲಿಸುವುದಿಲ್ಲ..."

ಶೀನನ ಮಾತಿನ ಕಡೆಗೋಲು ಗಂಗಾನ ಭಾವನೆಯನ್ನು ಸರಬರನೆ ಕಡೆಯಿತು.

ಗಂಗಾ ತೇಲಿ ಬಂದ ಬೆಣ್ಣೆಯಾದಳು.

Sri Vidyabharathi Book Centre, Sringeri

ಕಣ್ಣೊಳಗಿಂದ ಆ ಹೆಣ್ಣಿನ ಕಲ್ಲು ಎದೆ ಕರಗಿದ

CC-O. In Public Domain. Digitized by eGangotri

ನೀರು ಹರಿಯಿತು.

ಎದೆಯಲ್ಲಿ ಅವಳಿಗೇನೋ ಗಲಭೆ.

ತನ್ನದೆಲ್ಲ ಕಳ್ಳವ್ಯಾಪಾರ. ಹೆಣ್ಣಿಗೆ ಕಳ್ಳತನ ದೊಡ್ಡರೋಗ.

ಗಂಗಾ ಹಲವು ಜನ ಪ್ರಣಯಿಗಳನ್ನು ನೋಡಿದ್ದಳು.

ಮೊನ್ನೆಯೆ ಶಾನುಭೋಗರ ಮನೆಗೆ ಬಂದು ಹೋದ ಒಂದು ಹೊಸ ಮಿಥುನ,...ಇನ್ನೂ ಅವಳ ಕಣ್ಣಿನಿಂದ ಮರೆಯಾಗಿದ್ದಿಲ್ಲ.

ಅವರು ಶಾನುಭೋಗರ ಮನೆಯಲ್ಲಿ ಕಳೆದ ಮುಕ್ತಕ್ಷಣಗಳು.

ಅಷ್ಟು ನಿರ್ಬಂಧ ತನಗಿದೆಯೇ

ಎಲ್ಲಿಯದು ಬರಬೇಕು ?

ಶೀನನನ್ನು ಕೇಳಿದಾಗ ಆತ ಹೇಳಿದ್ದು ಬೇರೆ.

ಗಂಗಾ ನಮ್ಮದು ಅಪರೂಪ ವಸ್ತು.

ಸಮಾಜ ಪಾಪಿ ಇದೆ !

ಪಾಪಿಗಳಿದ್ದಲ್ಲಿ ರೂಪುಳ್ಳ ವಸ್ತುವನ್ನು ತೋರಬಾರದು......

ಪಾಪ ಸಮಾಜದ್ದೇ ?

ತನ್ನದೇ......?

ವಿಚಾರದ ಕೊರತದಲ್ಲಿ ತನ್ನ ತಲೆ ಏಕೆ ಕೊಡಬೇಕು ?

ಗಂಗಾ ನುಣುಚಿಕೊಂಡಳು.

ಆದರೆ ಅದೊಂದು ಸುಂಕದ ಕಾಯಿ !

ಒಮ್ಮೆ ಕೈತಾಗಿದರೆ ಸಾಕು, ಮೈಯೆಲ್ಲ !! ತನ್ನದೇನು ತಪ್ಪು?

ಗಂಡ ಎಂಬುವನಿದ್ದ ; ತನಗೆ ಗೊತ್ತೇ ಇಲ್ಲ.

ಸತ್ತೂಹೋದ. ಬಹಳ ದೊಡ್ಡ ಹಾನಿ ಏನು ?

ಈಗ ತಾನು ಅನಾಥಳಲ್ಲ.

ಇರಲೂ ಬೇಕಾಗಿಲ್ಲ.

ಯಾರ ಬದುಕೂ ಯಾರಿಗಾಗಿಯೂ ಕಾಯದು.

ಅನುಕೂಲತೆ, ಬಲ ಇದ್ದರೆ ಎಲ್ಲವೂ ನಡೆಯುತ್ತದೆ. ಹಾಗಾದರೆ ಈ ಚಿನ್ನದ ಬಳೆ, ಸರ ಹಾಕಿಕೊಂಡು ಶೀನನ ಕೈಹಿಡಿದು ಊರ ಬೀದಿಯಲ್ಲಿ ತಾನು,

ಅಲೆಯಬಹುದೇ ?

Sri Vidyabharathi Book Centre, Sringeri

ಇಲ್ಲ...

CC-O. In Public Domain. Digitized by eGangotri

ಹೆದರಿಕೆಯೆ ?

ಅದೂ ಅಲ್ಲ.

ಹುಚ್ಚು ಗಂಗಾತರಂಗ ಒಂದರಮೇಲೊಂದು ಅಪ್ಪಳಿಸುತ್ತಿದ್ದವು.

ರಂಗನ ಜತೆಗೆ ನಾನು ಕಳೆದ ಕ್ಷಣಗಳಲ್ಲಿ ಭಯ ಇತ್ತೇ ?

ನನ್ನ ಕ್ಷಣಗಳು ಈ ಹಳ್ಳಿಯ ಮುರುಕು ಮನೆಯಲ್ಲಿ ಬಾಗಿಲು ಹಾಕಿ ಕಳೆದವಲ್ಲ...?

ನಾನು ಹಾಗೆ ಅವನ್ನು ಅನುಭವಿಸಲೇ ಇಲ್ಲ.

ನಡೆದುದೇನು ?

ಜೀವನದಲ್ಲಿ ಲೈಂಗಿಕವೊಂದೇ ವ್ಯವಹಾರವೇ ?

ಅದನ್ನು ವ್ಯಕ್ತಿ ದಿನದಲ್ಲಿ ಎಷ್ಟು ಕ್ಷಣ ನಡೆಸೀತು ?

ಅದನ್ನು ಮೀರಿದ ಬದುಕೇ ವಿಸ್ತಾರವಾಗಿದೆ. ಲೈಂಗಿಕ ಜೀವನ ತೀರಾ ಮಿತಿಯಾದ ಅವಕಾಶ ಪಡೆದದ್ದು.

ಏನೇ ಇರಲಿ ತನಗೆ ಎಲ್ಲೋ ದೂರದಿಂದಲಾದರೂ ಅಶಕ್ತ ತಂತುಗಳ ಪ್ರಬಲ ಬಂಧನವಿದೆ ಎಂದು ಗಂಗಾನಿಗೆ ತಿಳಿದಿತ್ತು.

ಬಂಧನ ಹೇಗೇ ಇರಲಿ, ಅದು ಹೋಗಬೇಕು. ಇದು ಜೀವದ ಬಯಕೆ.

ಗಂಗಾ ಇದನ್ನೇ ಬಯಸಿದ್ದಳು. ತನಗಿದ್ದ ಭಯ ಶೀನನಿಗಿದೆಯೆ ?

ಈ ಚಿನ್ನದ ಬಳೆ ಮಾಡಿಸಿತಂದ.

ಅವನಿಗೇಕೆ ಭಯ ಇರಬೇಕು. ಏಳು ದೀಪ ಹಚ್ಚಿ ಬಂದವ.

ಕತ್ತಲಲ್ಲಿದ್ದವರಿಗೆ ಭಯ. ದೀಪ ಹಿಡಿದವರಿಗೇಕೆ ಅಂಜಿಕೆ.

ಗಂಗಾ ಮತ್ತೊಮ್ಮೆ ತನ್ನ ಕೈ ಮೈ ನೋಡಿಕೊಂಡಳು.

ಮತ್ತೆ ಭಯದ ಕತ್ತಲೆ ಮೈಯೆಲ್ಲ ಹರಿದಾಡಿತು. ಗಂಗಾನ ತಲೆಯಲ್ಲಿ ಇಲ್ಲದ ಹೆಣ್ಣು ವಿಚಾರ ಕುಣಿಯುತ್ತಿತ್ತು.

ಶೀನ ಈ ಚಿನ್ನ ಎಲ್ಲಿಂದಲೊ ಕದ್ದಿದ್ದಾನೆ. ಸ್ವಾಭಾವಿಕವಾಗಿ ಹೆಣ್ಣು ಮೈ ತೋರಿಸಲು ನಾಚಿದರೆ,

ಗಂಡಸು ಮನಸ್ಸು ಬಿಚ್ಚಲು ಸಂಕೋಚಪಡುತ್ತಿರಬೇಕು.

ಕಳವಿನಿಂದ ಶೀನ ತೊಡಕಿನಲ್ಲಿ ಸಿಕ್ಕಲಿಕ್ಕಿಲ್ಲವೆ ? ಕಳವು...

ಪಾಪ ಗಂಗಾ ಹೆಂಗಸೇ ಅಲ್ಲವೆ ?

ಕಳವೂ ಒಂದು ಉದ್ಯೋಗ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅದನ್ನು ಮಾಡಿದವರೂ ಸುಖವಾಗಿರುತ್ತಾರೆ—ಎಂಬ ಪ್ರಜ್ಞೆ ಅವಳಿಗೆ ಹೇಗೆ ಬರಬೇಕು ?

"ಗಂಗಾ ನಿನ್ನ ಚಿಕ್ಕಮ್ಮ ಕೊಟ್ಟ ಉಂಗುರ ಇದೆಯಲ್ಲ, ಅದನ್ನಿಟ್ಟುಕೊ" ಶೀನ ಹೇಳಿದ.

ಗಂಗಾ ಪೆಟ್ಟಿಗೆಯಿಂದ ತೆಗೆದು ಇಟ್ಟುಕೊಂಡಳು ಉಂಗುರವನ್ನು.

"ನಿನಗೆ ಭಯ ಎನಿಸುತ್ತದೆಯೆ ?"

"ಇಲ್ಲ."

"ಯಾಕಾದೀತು."

"ಇದು ನನ್ನ ಚಿಕ್ಕಮ್ಮ ಕೊಟ್ಟಿದ್ದು."

"ಈ ಬಳೆ, ಸರವನ್ನು ನಾನು ಕೊಟ್ಟಿದ್ದೇನೆ. ಭಯ ಏಕಿನ್ನಿರಬೇಕು ? ನಾನು ನಿನಗೆ ಅಷ್ಟು ಭಯಂಕರನೆ ?"

"ಶೀನ ನಿನ್ನ ಮಾತೇ ಹೀಗೆ ಯಾವಾಗಲು. ನೀನು ಭಯಂಕರ ಅಲ್ಲ. ಹಾಗೆಂದರೆ ನಾಲಗೆಗೆ ಹುಳು ಬಿದ್ದೀತು. ಅಷ್ಟು ಮಾತ್ರ ಅಲ್ಲ ಭೀತಳಾದ. ನನಗೆ ನೀನೇ ಅಭಯ......"

"ಹಾಗಾದರೆ ನನ್ನ ಈ ಸರ ನಿನ್ನ ಕೊರಳೊಳಗೆ ಇದ್ದರೆ ಅದು ನಿನ್ನ ಕೊರಳನ್ನು ಕರಕರನೆ ಕುಯ್ದು ಹಾಗಾಗುತ್ತಿದೆಯೆ ?"

"ನೀನೊಬ್ಬ ಕಲ್ಲುಗಂಡಸು. ಚಿನ್ನವನ್ನು ಕುತ್ತಿಗೆ ಕುಯ್ಯುತ್ತದೆ ಎಂದರೇನು?"

"ನನ್ನ ಚಿನ್ನ ನಿನ್ನ ಕುತ್ತಿಗೆ ಕುಯ್ಯುವುದಿಲ್ಲ.

ನಿನ್ನ ಚಿಕ್ಕಮ್ಮ ಕೊಟ್ಟಿದ್ದು ತಣ್ಣಗೆ ಆಗಿ ಬೆರಳಿಗೆ ಹಿತವನ್ನೂ ಕೊಟ್ಟಿಲ್ಲ, ಯಾಕಾದೀತು ಹೇಳು."

"ಯಾಕಾದೀತು ?"

ಶೀನನ ಪ್ರಶ್ನೆಯನ್ನೆ ಮತ್ತೊಮ್ಮೆ ತಾನು ಹೇಳಿಕೊಂಡಳು.

ಶೀನ ಹೇಳಿದ,

"ಏತಕ್ಕಾಗಿಯೂ ಅಲ್ಲಗಂಗಾ—

ನಿನ್ನ ಮೈಯಂತೆ ಮನಸ್ಸೂ ಹೆಣ್ಣಾಗಿದೆ. ನಾನು ಚಿನ್ನ ಕದ್ದು ತಂದೀನೆಂದು ನಿನಗೆ ಕಳವಳ. ಎಲ್ಲಿಯಾದರೂ ಸಿಕ್ಕಿಬಿದ್ದರೆ ಏನಾಗುವುದೋ ಎಂಬ ಭಯ, ಆದ್ದರಿಂದಲೇ ಈ ನಿನ್ನ ಭಯ. ನೀನು ಸುಖದಿಂದ ಇರಲಾರಿ."

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಖ ಚಿನ್ನದಲ್ಲಿ ಇಲ್ಲ. ಬರಿ ಕೊರಳಿನಲ್ಲಿಯೂ ದುಃಖ ಇಲ್ಲ. ಮನಸ್ಸು, ಎದೆಗಳಲ್ಲಿ ಅವಿತಿದೆ. ಗಂಗಾ, ಮೈಮೇಲೆ ಹಾಕಿದ ಚಿನ್ನಕ್ಕೆ ಹಣದ ಹೊರತು ಏನೂ ಬೆಲೆ ಇಲ್ಲ ಅನ್ನು. ಯಾರೋ ಕಿತ್ತುಕೊಂಡು ಹೋದರು ಎಂದು ತಿಳಿ. ಇದು ಕಳ್ಳತನದ ವಸ್ತು ಎಂದು ನನ್ನನ್ನು ಜೈಲಿಗೂ ಕಳಿಸಿದರು ಎಂದಿಟ್ಟುಕೋ. ಏನಾಗಬೇಕು? ಏನೂ ಆಗದೆಯೆ ಇರಬೇಕು. ಗಂಗಾ, ಶೀನನ ಜತೆಗೆ ಹೀಗೆ ಬದುಕಬೇಕಾಗಿದೆ" ಶೀನನ ಜ್ವಾಲಾಮುಖಿ ಮಾತು ಕೇಳಿ ಗಂಗಾ ಬಾಯಾರಿಹೋದಳು.

ಗಡ ಗಡ ನಡುಗಿದಳು.

ಶೀನ ಅವಳನ್ನು ನೋಡಿದ.

ಹೆಣ್ಣಿನೊಡನೆ ಗಂಡಿಗೆ ಬರಿ ಲೈಂಗಿಕವೊಂದೇ ವ್ಯವಹಾರವಲ್ಲ ಎನ್ನುವುದು ಅವನಿಗೆ ಈಗ ಹೆಜ್ಜೆ ಹೆಜ್ಜೆಗೂ ವಿದಿತವಾಗುತ್ತಿತ್ತು.

ಮನುಷ್ಯನಿಗೆ ಊಟವೊಂದೇ ಕೆಲಸವಲ್ಲ,ಹಾಗೆ ಗಂಡುಹೆಣ್ಣಿನ ವ್ಯವಹಾರ ದಲ್ಲಿ ಲೈಂಗಿಕತೆ. ಶೀನ ತುಂಬ ಅರಿತಿದ್ದ ಈ ಮಾತು.

ಗಂಗಾನಿಗೆ ಇದುಗೊತ್ತಾಗಿತ್ತು.

ಜೀವನದಲ್ಲಿ.........

"ಗಂಗಾ, ನನ್ನ ಪೌರುಷದಲ್ಲಿ ವಿಶ್ವಾಸ ಇಡು.

ಮೈಯಿಂದ ಹೆಣ್ಣಾಗುವುದನ್ನು ನೀನು ತಪ್ಪಿಸಿಕೊಳ್ಳಲಾರಿ, ಮನಸ್ಸಿನಿಂದ ನಿನ್ನ ಹೆಣ್ತನದ ಮೈಲಿಗೆ ದೂರ ತೆಗೆದೊಗೆ—"

"ಶೀನ...ನೀನು ಹೀಗೆಲ್ಲ ದಾಳಿ ಮಾಡಿದರೆ ನಾನು ತಡೆಯಲಾರೆ. ನಾನೂ ಮನಸ್ಸಿನ ಹೆಣ್ತನ ನೀಗಲು ಹವಣಿಸುತ್ತೇನೆ......"

"ಗಂಗಾ, ಈ ಬಂಗಾರವನ್ನು ನಾನು ಬಿಕ್ಕೆ ಬೇಡಿ ತರಲಿಲ್ಲ. ಶಾನುಭೋಗರ ಮನೆಯಲ್ಲಿ ಗಂಟೆಬಾರಿಸುವ ಶೀನ ಈ ಚಿನ್ನ ದುಡಿದು ಸಂಪಾದಿಸಿದನೆಂದು ನೀನು ನಂಬಲಾರೆಯಾ ?"

ದುಡಿಮೆ !

"ಗಂಗಾ ನಿನಗೆ ನಗರಗಳಲ್ಲಿ ನೌಕರಿ ಮಾಡುವ ಜೀವಂತ ಹೆಣಗಳ ಆಯುಷ್ಕರ್ಮವೆ ದುಡಿಮೆ ಎಂದು ಮಾತ್ರ ಗೊತ್ತು. ಆದರೆ ಅದು ನಾಯಿ ಕತ್ತೆಗಳ ದುಡಿತ. ದುಡಿತದಲ್ಲಿ ಎದೆಬೇಕು. ಎದೆಗಾರಿಕೆಬೇಕು.

ಮೇಕೆ ಹುಲ್ಲುತಿನ್ನುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿಂಹ ಮೇಕೆಯನ್ನೆ ಬೇಡುತ್ತಿದೆ.

ಹುಲ್ಲು ತಿನ್ನುವ ಸಿಂಹವನ್ನು ನೀನು ಕಂಡರೆ ಏನೆಂದುಕೊಳ್ಳುತ್ತೀಯೆ?

ಹಾಗೆಯೆ ಮನುಷ್ಯ !

"ಹಣ ಹುಟ್ಟಿಸಿ ತರಬೇಕು. ಇನ್ನೊಬ್ಬರು ಕೈ ಎತ್ತಿ ಕೊಟ್ಟರೆ ಬೊಂಬೆ. ನಾಯಿ ಹಣ ಹಿಡಿದುಕೊಳ್ಳಬಲ್ಲವು."

ಶೀನನ ಉಪನ್ಯಾಸ ಸಾಕಾಗಿತ್ತು ಗಂಗಾನಿಗೆ. ಆದರೆ ಅಖಂಡವಾಗಿ ನಡೆದ ಈ ಹೈವಾಶ್‌ನಿಂದ ಗಂಗಾನ ಹಲವು ಹೊಲಸುಗಳು ಕಿತ್ತು ಹೋಗಿ ರಲೂ ಸಾಕು.

ಗಂಗಾ, ತನ್ನ ಬಳೆ ನೋಡಿಕೊಂಡಳು, ಕೊರಳ ಸರ ಬೆರಳಿನ ಉಂಗುರ ನೋಡಿದಳು.

ಮುಖದಲ್ಲಿ ಗೆಲುವಿಗೆ ಬದಲು ದೊಡ್ಡ ಪ್ರಶ್ನಾರ್ಥಕ.

ಅವಳ ಮುಖ ನೋಡುತ್ತಿದ್ದ ಶೀನನಿಗೆ ಇಷ್ಟು ಹೊತ್ತಿನ ಶ್ರಮ ವ್ಯರ್ಥ ಎನ್ನಿಸಿತ್ತು.

"ಗಂಗಾ, ಒಬ್ಬ ಮೂರ್ಖ ಗಂಡಸು ಒಂದು ನಾಯಿಯ ಬಾಲಕೊಟ್ಟು ಒಬ್ಬ ಹೆಂಗಸನ್ನು ತೆಗೆದುಕೊಂಡನಂತೆ."

"ಏನಾಯಿತು ?"

"ಚಿನ್ನ ನೋಡಿಕೊಂಡು, ನಿನ್ನನ್ನು ನೋಡಿಕೊಂಡು ಮತ್ತೇನು ಕಮ್ಮಿ ಎನ್ನಿಸಿತು ನಿನಗೆ ? ಹಿಗ್ಗೇಕೆ ಅನ್ನಿಸಲಿಲ್ಲ ?"

"ನನ್ನನ್ನು—ಇದನ್ನೆಲ್ಲ ಬಳಸಿದ್ದ ನನ್ನನ್ನು ಯಾರು ನೋಡಿದ್ದಾರೆಂದು ನಾನು ಹಿಗ್ಗಲಿ ಶೀನ ?"

"ಮತ್ತೆ ಅದೇ ಹಸೀ ಹೆಂಗಸು !"

ಈ ಹುಂಬ ಗಂಡಸಾದ ಶೀನನಿಗೆ ಸ್ವಲ್ಪ ಕನಿಕರ ಬಂತು. ಹೆಂಗಸಾದ ವಳಿಗೆ—

ತನ್ನ ಆಭರಣ, ಬಟ್ಟೆ ನೋಡಬೇಕೆಂದು ಅನ್ನಿಸಿದರೆ ತಪ್ಪೇನು ಬಂತು ?

ಗಂಡಸರಿಗೆ ಹಾಗೆ ಅನ್ನಿಸಿಲ್ಲವೆ.

ಶ್ರೀಮಂತಿಕೆ ಇಲ್ಲದಿದ್ದರೂ

ಅಥವಾ ಅರ್ಥಮರ್ಥ ಇರದಿದ್ದರೂ

ಜನ ತನ್ನ ಬಗ್ಗೆ ಭಾರಿ ತಿಳಿದುಕೊಂಡರೇನೋ ಎಂಬ ಸಂತೋಷ ಎನ್ನಿಸುವುದಿಲ್ಲವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ತಾನು ನಿತ್ಯವೂ ಮಾಡುವುದನ್ನು ಇನ್ನೊಬ್ಬನೆದುರು ಹೇಳದೆ ಮುಚ್ಚಿಡುವುದಿಲ್ಲವೆ ?

ತಾನು ಮಾಡುವುದು ತಪ್ಪಲ್ಲ ಎನ್ನಿಸಿದ್ದನ್ನೂ ಇನ್ನೊಬ್ಬನ ಸೌಜನ್ಯಕ್ಕಾಗಿ ತಪ್ಪು ಮಾಡಿದೆ ಎಂಬ ಪ್ರದರ್ಶನ ನಿತ್ಯ ಜರುಗಿಸುವವರಿದ್ದಾರಲ್ಲವೆ ?

ಇವರು ಗಂಡಸರೆ_?

ಪುರುಷ ವಿಗ್ರಹಗಳು.

ಈ ಪ್ರಯೋಗಾಲಯದಲ್ಲಿ ತಾನು ಯಾರು–ಶೀನನಿಗೆ ಹೊಸ ಸಮಸ್ಯೆ. ಇನ್ನೂ ನಿರ್ಣಯವಾಗದೆ ಆ ಪಾತ್ರೆಯಿಂದ ಇದಕ್ಕೆ ಇದರಿಂದ ಇನ್ನೊಂದಕ್ಕೆ ಹಾಕಲಾಗುವ ಪದಾರ್ಥ–ಕಚ್ಚಾ ಪದಾರ್ಥ–ತನ್ನ ಸ್ಥಿತಿ ಎಂದೆನಿಸಿತು ಶೀನನಿಗೆ.

ಮೂಡಿಬಂದ ಹಸಿ ಆಸೆ

ಸಮಾಜ ಎಂದು ಯಾವುದಕ್ಕೆ ಕರೆಯಬೇಕು ? ಅದು ಎಲ್ಲಿದೆ ? ಅದರ ಸರಿಯಾದ ಅಡ್ರೆಸ್ ಏನು ? ಶೀನ ಬಹುದಿನ ಹುಡುಕಿದ, ಸಿಕ್ಕಲಿಲ್ಲ. ಅದು ಇಲ್ಲವೇ ಇಲ್ಲ ಎಂದು ಹೆಜ್ಜೆ ಹಾಕಲು ಕಾಲು ಮುಂದೆ ಇಟ್ಟುದೇ ತಡ, ಯಾರೋ ಹಿಡಿದಂತಾಯಿತು. "ಯಾರು?" ಎಂದು ಅಬ್ಬರಿಸಿ ಕೇಳಿದ.

"ಸಮಾಜ" ಎಂದು ಉತ್ತರ ಬಂತು.

"ಎಲ್ಲಿದ್ದೀಯೆ ನೀನು ?"

"ನಿನ್ನ ಅಶಕ್ತತೆಯಲ್ಲಿ..."

ಎಲ್ಲಿಂದಲೋ ಉತ್ತರ. ಇದನ್ನು ಹೇಳಿದವರಾರು ?

ಯಾರು ಈ ಉತ್ತರ ಕುಮಾರ...?"

ಶೀನನಿಗೆ ಈ ದೆವ್ವಿನಾಟವೇ ತಿಳಿಯಲಿಲ್ಲ.

ದುರ್ಬಲನಾದವ

ಪ್ರಬಲನಿರುವವ

ಏನನ್ನೋ ಮಾಡುತ್ತಲೇ ಇರುತ್ತಾರೆ.

ತಾನು ಮಾಡಿದ್ದಕ್ಕೆ ಹೊರಗಿನಿಂದ ಬೆನ್ನು ಚಪ್ಪರಿಕೆ ಬೇಕಿರುತ್ತದೆ.

ಇಲ್ಲವೆ ಬೈಗಳು ಬೇಡಾಗಿರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಗ ತನ್ನ ಹೊರಗಿರುವುದೊಂದಕ್ಕೆ ತಾನು ಅಧಿಕಾರ ಕೊಟ್ಟಿರುತ್ತಾನೆ.

ಸಮಾಜ ಭಾರಿ ನಶ್ಯದ ಅಭ್ಯಾಸವಿರುವ ಮೂಗು. ನಶ್ಯದ ಹೊರತು ಇನ್ನೊಂದೇನೂ ಅದಕ್ಕೆ ಗೊತ್ತಿಲ್ಲ. ತನ್ನನ್ನು ತಾಗಿದ ಶುಭ್ರ ಕರವಸ್ತ್ರವನ್ನೂ ಅದು ನಶ್ಯಮಯ ಮಾಡುತ್ತಿದೆ.

ಗಂಗಾ–ಶೀನರ ಬದುಕು ಈ ಮೂಗಿಗೆ ತಾಗಿತು. ಅದರ ಪರಿಣಾಮ—

ಒಂದು ದಿನ ಇದ್ದಕ್ಕಿದ್ದಂತೆಯೆ...

"ನಾವು ಈ ಊರು ಬಿಡಬೇಕು."

ತರಂಗಾಂತರ ಯಾವುದರಲ್ಲೂ ಗಂಗಾವಾಣಿ.

ಇಷ್ಟು ದಿನ ಇಳುಕಲಿಗೆ ಹರಿಯುತ್ತಿದ್ದ ಗಂಗಾ ಈಗ ಊರ್ಧ್ವಗಾಮಿ !

ಎಷ್ಟೋ ದಿನಗಳ ಹಿಂದಿನ ಹಳೆಯ ರೆಕಾರ್ಡು,

"ಏ ಆಚಾರಿ, ನೀನು ಗಂಡಸಾಗಿದ್ದರೆ ಈ ಊರಿನಲ್ಲಿರಬಾರದು. ನಿನಗೆ ಸರಿಯಾದ ಜಾಗ ಮುಂಬೈ. ಬರಿ ನಮಗೇ ಉಪದೇಶ ಹೊಡೆಯುತ್ತಿದ್ದಿ..."

ಹಾಡಿದವ ಅಬ್ದುಲ್, ಶೀನನ ಗಳಸ್ಯ ಸ್ನೇಹಿತ.

"ನಾವು ಈ ಊರು ಬಿಡಬೇಕು."

ಸಾವಕಾಶವಾಣಿ ಗಂಗಾನಿಂದ ಮರು ಪ್ರಸಾರ.

"ಆಗಲಿ ಬಿಡುವಾ."

ಉದಾಸೀನನಾದ ಶೀನ ಉವಾಚ.

ಶೀನನಿಂದ ಇಷ್ಟು ಸಹಜವಾದ ಪ್ರತಿಕ್ರಿಯೆ ಬಂದೀತೆಂದು ಗಂಗಾ ಭಾವಿಸಿರಲಿಲ್ಲ.

"ನಿಜವಾಗಿಯೂ ಬಿಡೋಣವೆ ?"

"ಯಾಕೆ ಹಾಗೆ ಸುಳ್ಳು, ಯಾಕೆ ಬಿಡಬಹುದು ?"

"ಯಾವಾಗ ಬಿಡಬವುದು ?"

"ನೀನು ಯಾವಾಗ ಅನ್ನುತ್ತಿ ಆಗ..."

"ರಾತ್ರಿ ಬಿಡೋಣವೆ?"

"ಆಗಲಿ..."

ಶೀನ ಹೇಳುವ ಮಾತು ಸೀರಿಯಸ್ ಅಲ್ಲ ಎನ್ನಿಸಿತು ಗಂಗಾನಿಗೆ.

ಹೆಂಗಸು ಊರಿಗೆ ಹೊರಡುವುದು ಇಷ್ಟು ಸುಲಭವಾಗಿ ನಡೆಸಿಕೊಡುವ ಕೆಲಸವಲ್ಲ ಎಂಬುದು ಅವಳು ಕೇಳಿ, ತಿಳಿದು, ಕಂಡು, ಅರಿತ ಅನುಭವ.

Sri Vidyabharathi Book Centre, Sringeri

"ಶೀನ ಹೊರಡುವುದು ಎಂದರೆ ಹೂಂ ಎಂದಿ. ಈಗಲೇ ಹೊರಡುವುದೇ

CC-O. In Public Domain. Digitized by eGangotri

ಎಂದರೆ ಅದಕ್ಕೂ ಹೂಂ. ರಾತ್ರಿಯೇ ? ಅದೂ ಸರಿ ಎನ್ನುತ್ತೀ. ನಿನಗೆ ಊರು ಬಿಡುವುದು ಬೇಜಾರೇ ?"

"ಹಾಗೆ ಯಾರು ಹೇಳಿದರು ?"

"ನಿನ್ನ ಮಾತಿಗೆ ಹಾಗೆ ಅರ್ಥ ಕಂಡಿತು. ಊರಿಗೆ ಹೋಗುವುದೆಂದರೆ ಸಿದ್ಧತೆ ಬೇಡವೆ—?"

ಗಂಗಾ ಒಂದು ದಿನವಾದರೂ—ಶೀನನ ಜತೆಗಿದ್ದು ಎಷ್ಟೋ ದಿವಸ ವಾಯಿತು.

"ನೀನು ಹೆಂಗಸಲ್ಲ ಎನ್ನುವುದನ್ನು ತಿಳಿಸು, ಊರಿಗೆ ಹೋಗಬೇಕಾದರೆ ಸಿದ್ಧತೆ ಏನು ಬೇಕು."

"ಹಣವೆ ?

ಪೆಟ್ಟಿಗೆ ತೆಗೆ ಇದ್ದಷ್ಟು-ಇಲ್ಲವೆ ಬೇಕಾದಷ್ಟು ತೆಗೆದುಕೊಂಡರಾಯಿತು. ಹೊರಟರಾಯಿತು."

"ಹೇಗಾದೀತು ?" ಗಂಗಾನ ಆಕ್ಷೇಪ.

"ಹೇಗಾದರೆ ಹೊರಡಲಿಕ್ಕೆ ಆಗಬಹುದು ? ನಿನ್ನ ಹಳೆಯ ಬಟ್ಟೆ ಎಲ್ಲ ತೆಗೆದುಕೊಳ್ಳಬೇಕು. ಈ ಮುರುಕು ಮಂಚ, ಒಡಕು ಪಾತ್ರೆ, ಈ ಬೆಕ್ಕು ಸಾಲದಕ್ಕೆ ಶಾನುಭೋಗರು...ಇವೆಲ್ಲ ತೆಗೆದುಕೊಂಡರೆ ನಾವು ಹೋಗುವುದು ಇನ್ನೊಂದು ಊರಿಗೆ ಹೇಗಾದೀತು ಗಂಗಾ.

ಹೊರಡುವುದೆಂದರೆ ಹೊರಟು ಬಿಡುವುದು. ಇಷ್ಟೇ ಊರಿಗೆ ಹೊರಡುವ ಒಳ್ಳೆಯ ಲಕ್ಷಣ ಗಂಗಾ."

"ಇದು ವಿಲಕ್ಷಣ ಅಷ್ಟೇ."

"ವಿಲಕ್ಷಣವಿರಲಿ, ಅವಲಕ್ಷಣವಿರಲಿ, ನಿನಗೆ ಊರು ಬಿಡುವುದು ಬೇಕಲ್ಲವೆ ? ಹೊರಡು, ಇಂದು ರಾತ್ರಿ ಇದ್ದಕ್ಕಿದ್ದಂತೆಯೆ ಹೊರಟುಬಿಡು." ಇದು ಶೀನನ ಕೊನೆಯ ಮಾತು.

ಗಂಗಾ ಶೀನ ಮುಂಬೈಗೆ ಬಂದು ದೊಡ್ಡ ಹೋಟೆಲ್ ಒಂದರಲ್ಲಿ ತಂಗಿದರು. ಮೊದಲು ಟ್ಯಾಕ್ಸಿಯೊಂದರಲ್ಲಿ ಕುಳಿತು ಗಂಗಾನನ್ನು ಊರನ್ನೆಲ್ಲ ಸುತ್ತಿಸಿದ.

ಗಂಗಾ ಹಣಿಕಿ ಹಾಕಿ—ಮನೆಗಳನ್ನು, ಅವುಗಳ ಎತ್ತರ ಅಂದ ಚಂದ ಗಳನ್ನೂ ನೋಡುವಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಂಬೈಗೆ ಗಂಗಾ ಹೇಗೋ ಶೀನನೂ ಹಾಗೆಯೆ. ಟ್ಯಾಕ್ಸಿಯಲ್ಲಿ ಕುಳಿತು ಹೊರಗೆ ಕತ್ತು ಚಾಚಿ ಕಂಡ ಬೋರ್ಡುಗಳನ್ನು ಓದುತ್ತ ಸಾಗುವ.

ಅಬ್ದುಲ್ಲನ ಕೃಪೆಯಿಂದ ಟ್ಯಾಕ್ಸಿಯೊಂದು ಸೇವೆಗೆ ಸಿದ್ಧವಿತ್ತು.

ಶೀನನ ಬಿಡುಗೈಯ್ಯ ಸ್ವಭಾವವೂ, ಸ್ನೇಹಶೀಲತೆಯೂ ಮುಂಬೈಗೆ ಹೊಂದಿಕೊಂಡಿತು.

ಅಬ್ದುಲ್ ಈಗ ಕೆಲಸದ ಗಲಾಟೆಯ ಮನುಷ್ಯ. ಒಂದೆರಡು ದಿನ ಇವರಿಗೆ ಕಂಪನಿ ಕೊಟ್ಟು ಹೊರಟು ಹೋದ.

ಶೀನ ಗಂಗಾನ ಜತೆಗೆ ಬಂದದ್ದು ಅಬ್ದುಲ್‌ಗೆ ಆಶ್ಚರ್ಯವೂ ಅನ್ನಿಸಲಿಲ್ಲ. ಅದೇನು ಅಂತಹ ಶತಕೃತ್ಯವಲ್ಲ. ಮಾಡಬಾರದ ಕೆಲಸವಂತೂ ಅಲ್ಲವೇ ಅಲ್ಲ. ಸಲೀಸಾಗಿ ಗಂಗಾನಿಗೆ ಆತ 'ಭಾಬಿ' ಎನ್ನುತ್ತಿದ್ದ. ಗಂಗಾನಿಗೆ ಒಳಗೊಳಗೇ ಅಭಿಮಾನದ ಉಕ್ಕು.

ಈ ದಿನದಿಂದ ಮುಂಬೈಯಲ್ಲಿ ಗಂಗಾ-ಶೀನರ ಕಾಲುನಡಿಗೆಯ ಪ್ರವಾಸ. ಬೇಜಾರು ಬಂದಾಗ ಟ್ಯಾಕ್ಸಿ ಹತ್ತುವರು. ಮುಂಬೈ ಜೀವನದ ಎಲ್ಲ ಭಾಗಗಳಲ್ಲಿಯೂ ಗಂಗಾ ಹರಿದಾಡಬೇಕೆಂಬುದೇ ಶೀನನ ಅಭಿಲಾಷೆ!

ಅಬ್ದುಲ್ ಈಗ ಮುಂಬೈ ವಾಸಿಯೇ ಆಗಿದ್ದ.

ಆದರೆ ಇವರಿಗೆ ಅಪರೂಪ! ಅಬ್ದುಲ್‌ನ ಆದರ, ಪ್ರೀತಿ ಕಡಿಮೆಯಾಗಿದ್ದಿಲ್ಲ. ಹಳ್ಳಿಯಲ್ಲಿದ್ದಂತೆಯೇ ಈಗ ಆತ ಇರಲಾರ.

ತನ್ನ ಗೆಳೆಯನಿಗಾಗಿ ಏನನ್ನೂ ಮಾಡಲು ಆತ ಸಿದ್ಧ. ಆದರೆ ಕಾಲವನ್ನು ಅಷ್ಟು ಧಾರಾಳವಾಗಿ ಅವನಿಗಾಗಿ ಮೀಸಲಿಡುವುದು ಅಬ್ದುಲ್‌ಗೆ ಸಾಧ್ಯವಾಗುತ್ತಿಲ್ಲ.

ಶೀನನಿಗೆ ಭಾಷೆಯ ತೊಡಕು ಬರಕೂಡದೆಂದು ಅಬ್ದುಲ್ ಒಬ್ಬ ಸರ್ವಭಾಷಾವಿದ ಗೈಡ್‌ನನ್ನೇ ಕೊಟ್ಟಿದ್ದ.

ಈಗ ಮುಂಬೈಗೆ ಬಂದು ಒಂದು ವಾರ ಕಳೆದಿರಬೇಕು. ಈ ದಿನ ಗೆಳೆಯನಿಗೆ ಹಣ ಕಮ್ಮಿ ಬಿದ್ದೀತೆಂದು ಬೆಳಿಗ್ಗೆ ಬಂದು ಮತ್ತಿಷ್ಟು ಹಣ ಕೊಡಲು ಮುಂದಾದ.

"ಆಚಾರಿ ಮುಂಬೈ ಹೇಗೆ ಅನ್ನಿಸುತ್ತದೆ?"

"ನನಗೇನು ಅನ್ನಿಸಬೇಕು ಸಾಬ. ಇವಳಿಗಾಗಿ ಅದನ್ನು ತೋರಿಸಬೇಕಾಗಿದೆ. ತಿಳಿಸಬೇಕಾಗಿದೆ."

Sri Vidyabharathi Book Centre, Sringeri

CC-O. In Public Domain. Digitized by eGangotri

"ಭಾಬಿಗೆ ಅಷ್ಟು ತಿಳಿಯದೆ—" ಅಬ್ದುಲ್ ಅಭಿರಾಮವಾಗಿ ಮಾತನಾಡಿದ.

ಹಾಗಾದರೆ ನನಗೆ ತಿಳಿಯಬೇಕಾದದ್ದು ಇಲ್ಲಿ ಏನಿದೆ—?

ಮುಂಬೈಗೆ ಬಂದೆನೆಂದು, ಮೈ ಬದಲಾಗಲಿಲ್ಲ.

ಮುಂಬೈಗೆ ಬದಲಾಗುವ ತಲೆ ನನ್ನ ಹೆಗಲಿಗೆ ಹತ್ತಲೇ ಇಲ್ಲ.

"ಅಬ್ದುಲ್ ನಿನ್ನ ಭಾಬಿಗೆ ಮುಂಬೈಯ ಹಲವು ರೀತಿ ತೋರಿಸುತ್ತೇನೆ."

"ನೀವಿಬ್ಬರು ಮುಂಬೈ ಬಿಡಲೇಬಾರದು."

"ಮನೆ...ಮಾರು..."

"ಯಾವಾಗಲೂ ಶೀನ ಹೀಗೆಯೇ ಸರಿ..." ಬರಿ ನನ್ನ ಜತೆಗೆ ಹೀಗೇ ಅಂತ ಮಾಡಿದ್ದೆ ಗಂಗಾ ಶೀನನ ಬಹುದಿನದ ಸಂಗಾತಿ–ಒಡನಾಡಿ ಎಂಬುದನ್ನು ಪ್ರತಿಷ್ಠಾಪಿಸುತ್ತ ಹೇಳಿದಳು.

"ಈ ಆಚಾರಿಗೆ ನಾನು ಲಂಗೋಟಿ ಗೆಳೆಯ, ಶೇರ್ ಬದುಕಿದ ಹಾಗೆ ಬದುಕಬೇಕೆನ್ನುತ್ತಾನೆ. ಆದ್ದರಿಂದ ನಾವೆಲ್ಲ ಈತನಿಗೆ ಬಕರಾಗಳು.

ಆಚಾರಿ ಪೈಸಾ ತಗೊ. ಇದು ಮುಂಬೈ, ನಮ್ಮ ಊರಲ್ಲಿ ನೀರು ಹರಿದ ಹಾಗೆ ಇಲ್ಲಿ ಹಣ ಹರಿಯುತ್ತದೆ."

"ಸಾಬ ಹಣ ಬೇಡವೊ, ಪೆಟ್ಟಿಗೆಯಲ್ಲಿ ಸಾಕಷ್ಟಿದೆ. ಅಲ್ಲದೆ ಗಂಗಾನಲ್ಲಿ ಚಿನ್ನ ಬೇರೆ ಇದೆ..."

"ಆಚಾರಿ! ಇದು ಮುಂಬೈ. ಚಿನ್ನಗಿನ್ನ ಮಾರಲು ಹೋಗಬೇಡ. ನನ್ನ ಹತ್ತಿರ ಹಣ ಸಾಕಷ್ಟಿದೆ. ಬೇಕಾದರೆ ತೆಗೆದುಕೊ."

ಒಂದು ನೋಟಿನ ಕಟ್ಟು ಅಬ್ದುಲ್ ಇಟ್ಟುಹೋದ. ಗಂಗಾ ಮುಂಬೈಯಲ್ಲಿ ಕಣ್ಣು ಅಗಲಿಸಿ ನೋಡಿದ್ದು—

ಹೆಂಗಸರ ವೇಷಗಳನ್ನು.

ಪ್ರಣಯಿಗಳ ವಿಹಾರ ವೈವಿಧ್ಯವನ್ನು.

ಬಾಲ್ಯದಿಂದಲೂ ಅಭಾವದಲ್ಲಿ ದಿನ ಕಳೆದ ಅವಳಿಗೆ ಮುಂಬೈ ಮಹಿಳೆಯರು ತಾನು ಬದುಕಿದ್ದ ಲೋಕದವರು ಅಲ್ಲ ಎನ್ನಿಸಿರಬೇಕು.

ಅರೆಮೈ ಹೆಂಗಸರು ಅವಳಿಗೆ ಚಮತ್ಕಾರದ ವಸ್ತುವಾಗಿದ್ದರು. ಕಣ್ಣು ಕುಕ್ಕುವಂತೆ ವೇಷ ಧರಿಸಿ ಗಂಡಿನ ತೋಳಿನಲ್ಲಿ ಕೈಹಾಕಿ ತಿರುಗುವ ಹೆಂಗಸರನ್ನು ಕಂಡರೆ...

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಂಬೈ, ಭೂಲೋಕದ ಊರು ಅಲ್ಲ ಎಂದುಕೊಳ್ಳುವಳು.

ಮನಸ್ಸಿನಲ್ಲಿ ಏನೋ ಹಸಿ ಆಸೆ. ಅದರಲ್ಲಿ ಹುರಿದ ಅಭಿಲಾಷೆಯ ಬೀಜಾರೂಪಣೆ. ಒಮ್ಮೆ ಶೀನನಿಗೆ ಕೇಳಿದಳು,

"ಇವರೆಲ್ಲ ದಿನಾಲು ಹೀಗೇ ತಿರುಗಾಡುತ್ತಾರೆಯೆ, ಇಲ್ಲ ಇಂದು ಏನೋ ವಿಶೇಷ ಹಬ್ಬ ಎಂದು ತಿರುಗಾಡುತ್ತಿರುವರೊ..." ಎಂದು

ಮೊಟ್ಟಮೊದಲನೆಯ ದಿನ ಕೇಳಿದ್ದಳು. ಶೀನ ಕೂಡ ಮುಂಬೈ ನೋಡಿದವನಲ್ಲ.

ಈ ಗಂಡು ಹೆಣ್ಣುಗಳ ಅಲೆದಾಟ ಕಣ್ಣಿಗೆ ಹಬ್ಬ ಎನ್ನಿಸಿತ್ತು. ಆದರೆ ಇದು ತನಗೆ ಬೇಕು ಎಂದು ಹೆಣ್ಣುಆಸೆ ಆತನಲ್ಲಿ ಹುಟ್ಟಿಸಲಿಲ್ಲ. ಗಂಗಾ! ತನ್ನ ರೂಪ ಅವಸ್ಥೆಗಳನ್ನು ನಿಂದಿಸಿಕೊಂಡಿದ್ದಳು. ಅಸಹಾಯಕತೆಯನ್ನು ಶಪಿಸಿಕೊಂಡಿದ್ದಳು.

ಒಂದು ದಿನ ವಿಕ್ಟೋರಿಯ ನಿಲ್ದಾಣದಲ್ಲಿ ಇಬ್ಬರು ಶ್ವೇತ ದಂಪತಿಗಳು ಒಬ್ಬರನ್ನೊಬ್ಬರು ಮುತ್ತಿಕ್ಕಿದ ದೃಶ್ಯನೋಡಿ ಗಂಗಾ ಬಹು ಚಕಿತಳಾದಳು.

ತನ್ನ ಧರ್ಮ ತನ್ನನ್ನು ಎಷ್ಟು ಉಕ್ಕಿನ ಜೈಲಿನಲ್ಲಿ ಬಂದಿಯಾಗಿರಿಸಿದೆ ಎಂದುಕೊಂಡಳು.

ಹೋಟೆಲಿಗೆ ಬಂದಾಗ ಕೋಣೆಯಲ್ಲಿ ಶೀನ ಗಂಗಾ ಇಬ್ಬರೆ! ಹೀಗೆ ಅವರು ಇಬ್ಬರೇ ಇದ್ದದ್ದು ಇಂದೇ ಅಲ್ಲ. ಗಂಗಾ ಕೇಳಿದಳು,

"ಶೀನ, ಇಂದು ರೈಲು ನಿಲ್ದಾಣದಲ್ಲಿ ನೀನು ಏನು ನೋಡಿದೆ?"

"ನೀನು ಏನೇನು ನೋಡಿದ್ದೀಯೋ ಅದನ್ನೆಲ್ಲ ನಾನೂ ನೋಡಿದ್ದೇನೆ..."

ಗಂಗಾ ಉಗುಳು ನುಂಗಿದಳು. ಮತ್ತೆ ಸುತ್ತುವರಿದು ಕೇಳಿದಳು,

"ಮತ್ತೆ ವಿಶೇಷ ಏನು ನೋಡಿದಿ."

"ಗಂಗಾ ಮುಂಬೈಯಲ್ಲಿ ಎಲ್ಲವೂ ನಮಗೆ ವಿಶೇಷ."

"ನಿನಗೆ ಏನು ಬೇಕಾಗಿದೆ ಹೇಳು..."

"ಆ ಬಿಳಿ ಗಂಡ ಹೆಂಡಂದಿರನ್ನು ನೋಡಿದೆಯಾ?"

"ನೋಡಿದೆ..."

"ನಾವೆಂದಾದದರೂ ಹಾಗೆ ಮಾಡಿದ್ದೇವೆಯೆ? ಇಂತಹ ಏಕಾಂತದಲ್ಲಿ..."

"ಗಂಗಾ, ಮುಂಬೈಗೆ ಬಂದೂ ಶೀನನ ಜತೆಗೆ ಇದ್ದರೂ, ನಿನಗೆ ಹುಚ್ಚು ಬುದ್ಧಿ ಹೋ[illegible]"

Sri Vidyabharathi Book Centre, Sringeri

CC-O. In Public Domain. Digitized by eGangotri

"ಗಂಗಾ ಬದುಕನ್ನು ನಾವು ಇನ್ನೊಬ್ಬರಿಂದ ಕಲಿಯಬೇಕಿಲ್ಲ. ಹಾಗೆ ಮಾಡಬೇಕು ಎನ್ನಿಸಿದ್ದರೆ ನಿನಗೆ ಯಾರು ಬೇಡವೆಂದು ಆಣೆ ಹಾಕಿದ್ದರು...

"ಈ ಹುಚ್ಚು..."

ಶೀನ ತನ್ನನ್ನು ಗಾಯಗೊಳಿಸುವನೆಂದು ಅವಳು ತಿಳಿದಿದ್ದಿಲ್ಲ.

"ಗಂಗಾ, ನಿನಗೆ ಹಲವು ಸಲ ಹೇಳಿದ್ದೇನೆ. ನಮ್ಮ ಬದುಕಿನಲ್ಲಿ ಏಕಾಂತವೊಂದೇ ದೊಡ್ಡ ವ್ಯವಹಾರವಲ್ಲ."

ಗಂಗಾ ಮತ್ತೆ ಮೂಕಿಯಾದಳು. ಅವಳ ಹುಚ್ಚಿಗೆ ಶೀನ ಬೆಂಬಲ ಕೊಡದ್ದಕ್ಕೆ ಬೇವಿನಕಾಯಿ ತಿಂದ ಮುಖಮಾಡಿ ಮಂಚದಲ್ಲಿ ಹೊರಳಿದಳು.

ಮುಂಬೈಯಲ್ಲಿ ಮತ್ತೊಂದು ರಾತ್ರಿ ಕಳೆದು ಬೆಳಗಾಯಿತು.

ಈ ದಿನ ಒಂದು ಬ್ಯಾಂಕ್ ನೋಡಿದರು. ನೂರಾರು ಜನ ಕೆಲಸ ಮಾಡುವವರು. ಬ್ಯಾಂಕಿನ ಹಣದ ಕೋಣೆ...ಸಾಲಾಗಿರಿಸಿದ ನೋಟುಗಳ ಕಟ್ಟುಗಳನ್ನು ಗಂಗಾ ಕಣ್ಣಿನಿಂದ ನೋಡಿ ಗಾಬರಿಯಾದಳು. ದಾರಿಯಲ್ಲಿ ಶೀನನನ್ನು ಕೇಳಿದಳು,

"ಶೀನ ಇದೀಗ ಹೋಗಿದ್ದೆವಲ್ಲ ಅಲ್ಲಿ ಅಷ್ಟು ಶ್ರೀಮಂತಿಕೆ ಇದೆಯೆ ? ಒಬ್ಬ ಮನುಷ್ಯನಿಗೆ ಇಷ್ಟು ಶ್ರೀಮಂತಿಕೆ ಬರಲು ಸಾಧ್ಯವೆ—?"

"ಗಂಗಾ ! ನಾವು ಬಡವರಾದಮೇಲೆ ಅದನ್ನು ಯೋಚಿಸೋಣ..."

ಎಲ್ಲೆಲ್ಲೊ ಹಾದು ಬರುವಾಗ ಒಂದು ಗುಜರಾತಿಗಳ ವಸತಿ ಇರಬೇಕು. ತಲೆಯ ಮೇಲೆ ಹಸಿಯ ಹುಲ್ಲನ್ನು ಹೊತ್ತು ಮಾರಲು ನಿಂತ ಕೆಲವರು. ಹುಲ್ಲನ್ನು ಪಲ್ಲೆಯ ಕಟ್ಟಿನ ಹಾಗೆ ಕಟ್ಟಿದ್ದಾರೆ.

"ತಾಯಿ ಗೋಮಾತೆಯ ಸೇವೆ ಮಾಡಿರಿ. ಪುಣ್ಯ ಕಟ್ಟಿಕೊಳ್ಳಿರಿ !" ಎಂದು ಕೂಗುತ್ತಿದ್ದಾರೆ.

ಸಮೀಪದಲ್ಲಿಯೆ ಒಬ್ಬ ಆಕಳಿನವ. ಅವನದೂ ಅದೇ ಕೂಗು !

"ಆಕಳು ನಿಮ್ಮೆಲ್ಲರ ತಾಯಿ ! ಕಾಮಧೇನು ಗೋಮಾತೆಯನ್ನು ರಕ್ಷಿಸಿರಿ ! ! ಪುಣ್ಯ ಪಡೆಯಿರಿ..."

ಅಲ್ಲಿ ಹಾಯುವ ಗಂಡಸರು ಹೆಂಗಸರು ಆಕಳಿಗೆ ಒಂದು ಕಟ್ಟು ಹುಲ್ಲು ಹಾಕಿ ಕೈಮುಗಿದು ಹೋಗುವರು. ಗಂಗಾನಿಗೆ ಆ ದೃಶ್ಯ ಮನಸ್ಸಿಗೆ ನಾಟಿತು. ಮುಂಬೈಯಲ್ಲಿ ಅವಳು ನೋಡಿದ ಎಲ್ಲ ದೃಶ್ಯಗಳಿಗಿಂತ ಇದು ಅವಳನ್ನು ಅಲುಗಾಡಿಸಿಬಿಟ್ಟಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

"ಶೀನ ಸ್ವಲ್ಪ ನಿಲ್ಲು."

ಮುಂದೆ ನಡೆದ ಶೀನ ನಿಂತ.

"ನೋಡು ಹಳ್ಳಿಯಲ್ಲಿ ದಿನಾಲು ಗೋಗ್ರಾಸ ಇಲ್ಲದೆ ನಾನು ಊಟ ಮಾಡಿದವಳಲ್ಲ. ಇದು ಮುಂಬೈ ಆದರೂ ಆಕಳಿಗೆ ಹುಲ್ಲು ಹಾಕುವ ಜನ ಎಷ್ಟು ಇದ್ದಾರೆ ನೋಡು ! ದೊಡ್ಡ ಊರಿನವರಾದರೂ ಪುಣ್ಯದ ಕೆಲಸ ಬಿಟ್ಟಿಲ್ಲ...ನನಗೆ ಒಂದಾಣೆ ಕೊಡು."

ಶೀನ ಕಿಡಿಕಿಡಿಯಾಗಿಯೇ ಆಣೆ ತೆಗೆದು ಗಂಗಾನ ಕೈಗೆ ಕೊಟ್ಟ.

ಗಂಗಾ ಹುಲ್ಲು ತೆಗೆದುಕೊಂಡಳು. ಆಕಳಿಗೆ ಹಾಕಹೋದಳು. ಆಕಳಿನವ ತಡೆದ. ಗಂಗಾನಿಗೆ ತಿಳಿಯುದ ಭಾಷೆಯಲ್ಲಿ ಆತ ಹೇಳಿದ,

"ಗ್ರಾಸದಾನಕ್ಕೆ ದಕ್ಷಿಣೆ ಬೇಕು! ದಕ್ಷಿಣೆ ಕೊಟ್ಟರೆ ಗೋವು ಹುಲ್ಲು ತಿನ್ನುತ್ತದೆ."

ಮುಂಬೈ ಆಕಳುಗಳ ಬಗ್ಗೆ ಅವಳಿಗಿನ್ನೂ ಭಕ್ತಿ ಹುಟ್ಟಿತು.

'ತಾನೆಂತಹ ಮರೆವಿನ ಸ್ವಭಾವದವಳು...' ಗಲ್ಲಗಲ್ಲ ಬಡಿದುಕೊಂಡಳು,

"ಶೀನ ಇನ್ನೊಂದಾಣೆ ಕೊಡು..."

ಶೀನ ಆ ದಂಡವನ್ನೂ ತೆತ್ತ.

ಗಂಗಾ ಗೋಪಾಲಕನ ಕೈಯಲ್ಲಿ ಆಣೆ ಹಾಕಿ ಹಸುವಿಗೆ ಹುಲ್ಲು ತಿನ್ನಿಸಿ ತನ್ನ ಕೆಂಪು ಸೆರಗಿನಲ್ಲಿ ಪುಣ್ಯ ಕಟ್ಟಿಕೊಂಡು ಮುಂದೆ ಸಾಗಿದಳು.

ಆ ದಿನ ಇಡೀ ಗಂಗಾ ತುಂಬ ಹಿಗ್ಗಿನಲ್ಲಿದ್ದಳು.

ಮರುದಿನ ಸಂಜೆ ಮಾತುಂಗದತ್ತ ತಿರುಗಾಡಲು ಹೋಗಿದ್ದರು.

ಒಂದು ಹರಿಕತೆ.

ಗಂಗಾನಿಗೆ ದೊಡ್ಡ ಆಕರ್ಷಣೆ.

ಅದೂ ಕನ್ನಡದವಲ್ಲಿ ನಡೆದಿರಬೇಕೆ !

ಮುಂಬೈಯಲ್ಲಿ ಇಷ್ಟು ದಿನ ಅವಳಿಗೆ ಕಣ್ಣಿಗೆ ಮಾತ್ರ ಕೆಲಸವಿತ್ತು. ಈ ದಿನ ಕಿವಿಗೂ...

ಒಳಗೆ ಹೊಕ್ಕವಳು ಪೂರ್ತಿ ಹರಿಕತೆ ಮುಗಿಯುವವರೆಗೆ ಹೊರ ಬಂದಾಳೆಯೆ ?

ಶೀನ ನಾಲ್ಕು ಸಲ ಮಗ್ಗುಲಲ್ಲಿದ್ದ ಇರಾಣಿ ಹೋಟೆಲಿನಲ್ಲಿ ಟೀ ಕುಡಿದು, ಸಿಗರೇಟು ಸೇದಿ ಬೇಸತ್ತು ಹೋಗಿದ್ದ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲ್ಲಿ ಅವಳೊಡನೆ ಹಲವರು ಕನ್ನಡ ಮಾತನಾಡಿದರು.

ಗಂಗಾ ಏನೇನೋ ಹಲವಾರನ್ನು ಕೇಳಿದಳು. ಮುಂಬೈಯ ಹೊಸ ಸ್ನೇಹಿತ ಮಹಿಳೆಯರಿಗೂ ಇವಳ ಬಗ್ಗೆ ಕುತೂಹಲ.

ಹೊರಗೆ ಶೀನ ಕಾಯುತ್ತಿದ್ದ.

ಗಂಗಾ ಬಂದೊಡನೆ "ಇನ್ನಾದರೂ ಹೊರಡೋಣವೇ ?'

"ತಡವಾಯಿತು. ಚಂದ್ರಹಾಸನ ಕತೆ ನಡೆದಿತ್ತು. ಅರ್ಥಕ್ಕೆ ಬಿಡುವುದು ಹೇಗೆ ? "ಹರಿಕತೆಯನ್ನು ಎಷ್ಟು ಚೆನ್ನಾಗಿ ಹೇಳಿದರು ಗೊತ್ತೆ ಶೀನ. ನಮ್ಮ ಹಳ್ಳಿಗೆ ಇಂತಹ ಜನರು ಏಕೆ ಬಂದಾರು..."

ಶೀನ ಟ್ಯಾಕ್ಸಿಯವನು ಬರುವ ಕಡೆಗೆ ಕಣ್ಣು ಮನಸ್ಸು ತೆತ್ತವ. ಇದರ ಕಡೆಗೆ ಅಷ್ಟು ಗಮನವಿದ್ದಿಲ್ಲ.

ಗಂಗಾನಿಗೆ ಶೀನನೂ ಹರಿಕತೆಗೆ ಬಂದಿದ್ದರೆ ನಾಳೆ ಮತ್ತೆ ತನ್ನನ್ನು ಇಲ್ಲಿಗೇ ಕರೆತರಲು ತಪ್ಪುತ್ತಿದ್ದಿಲ್ಲ ಎನ್ನಿಸಿತ್ತು.

ಆದರೆ ಶೀನನ ನಿಶ್ಚಯ ಇದಕ್ಕೆ ವಿಪರೀತ.

ಈ ಹೆಂಗಸಿಗೆ ಹರಿಕತೆಯ ಚಟ ಕಲಿಸಿದರೆ......? ಪರಿಣಾಮ ಏನು ತಿಳಿದಿದ್ದ.

ಹೋಟೆಲಿಗೆ ಬಂದರು.

"ಶೀನ ನಿನಗೆ ಇಂದು ತುಂಬ ಬೇಜಾರಾಯಿತೇ ?"

"ಆಯಿತು ಅಲ್ಪಸ್ವಲ್ಪ. ಗಂಗಾ ನಿನಗೆ ಸಂತೋಷವಾಗಿದ್ದರೆ ನನ್ನ ಬೇಜಾರೂ ಸ್ವಲ್ಪ ಕಡಿಮೆ ಅಷ್ಟೆ."

"ಶೀನ ಇಷ್ಟು ದೊಡ್ಡ ಊರಿನಲ್ಲಿಯೂ ಧರ್ಮ ಕರ್ಮ ನಡೆಯುವುವು.

ಒಂದಲ್ಲ ಒಂದು ಕಡೆಗೆ ಧರ್ಮ ನಡೆಯುವುದು ಎಂದೆ ಈ ಊರಿಗೆ ಇಷ್ಟು ಮಹತ್ವ ಬೆಳೆದಿರಬೇಕು.

ಒಂದು ಮನೆ ಬೆಳೆದು ದೊಡ್ಡದಾಗಬೇಕಾದರೆ ಸಾಕಷ್ಟು ಧರ್ಮ ನಡೆಯಬೇಕು. ನಾವು ಕಂಡ ಮಾತು.

ಒಂದು ನಗರ ಇಷ್ಟು ಶ್ರೀಮಂತವಾಗಿ ಬೆಳೆದು ನಂದನವನವಾಗಬೇಕಾದರೆ ಅಷ್ಟೇ ಧರ್ಮವೂ ನಡೆಯಬೇಕು. ಇಲ್ಲಿ ನಡೆಯುತ್ತಿದೆ, ಸಂತೋಷ ಅಲ್ಲವೆ ?"

ಶೀನ ಗಂಗಾಳ ಮಾತಿಗೆ ಎದುರು ಹೇಳಲೇ ಇಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

"ಶೀನ ನಾಳೆಯೂ ಅಲ್ಲಿಗೆ ಹೋಗೋಣವೆ? ಇವರದೇ ಹರಿಕತೆಯಂತೆ."

ಎತ್ತಲೋ ಲಕ್ಷವಿದ್ದ ಶೀನ, ತೀರ ಯಾಂತ್ರಿಕವಾಗಿ,

"ಏನಂತೆ?"

"ಅಹಲ್ಯೋದ್ಧಾರ."

ಅವನಿಗೆ ಫಕ್ಕನೆ ಏನೋ ನೆನಪಾಯಿತು.

"ಒಂದು ಕೆಲಸ ಮಾಡೋಣ ಗಂಗಾ. ನಾಳೆ ನಾಲ್ಕು ಗಂಟೆಗೆ ನಿನಗೆ ಮುಂಬೈಯಲ್ಲಿ ಇನ್ನೊಂದು ನೋಡಲೇಬೇಕಾದ ಮಹತ್ವದ ಜಾಗೆ ಇದೆ ತೋರಿಸುತ್ತೇನೆ. ಅದನ್ನು ನೋಡಿಕೊಂಡು, ನಿನ್ನನ್ನು ಹರಿಕತೆಯ ಜಾಗೆಗೆ ಬಿಟ್ಟು ಒಂದೆರಡು ಗಂಟೆ ಅತ್ತಿತ್ತ ತಿರುಗಿ ಬರುತ್ತೇನೆ. ಈಗ ನಾಲ್ಕು ದಿನ ದಿಂದ ಅಬ್ದುಲ್ ಭೆಟ್ಟಿಯಾಗಿಲ್ಲ. ಸಿಗುತ್ತಾನೇನೋ ನೋಡುತ್ತೇನೆ."

"ಮತ್ತೆ ನಾವು ಅದಿದನ್ನು ನೋಡುತ್ತ ಹೊತ್ತುಗಳೆದು ಹರಿಕತೆ ತಪ್ಪಿಸಿ ಕೊಂಡೇವು."

ಮುಂಬೈಗೆ ಬಂದು ಹದಿನೈದೇ ದಿನಗಳಲ್ಲಿ ಗಂಗಾನ ಗತಿ ಮತ್ತೆ ಸಮುದ್ರಪಾಲು ಎಂಬುದು ಶೀನನಿಗೆ ನಿರಾಶೆಯುಂಟುಮಾಡಿತ್ತು.

ಮುಂಬೈಯಲ್ಲಿ ಇವಳಿಗೆ ಹಿಡಿದದ್ದೆ ಆತನಿಗೆ ವಿಚಿತ್ರ.

ಹಸುವಿಗೆ ಹುಲ್ಲು ತಿನ್ನಿಸುವ ಕೆಲಸವೆ ಬಹು ಆಕರ್ಷಕವಾಗಿ ತೋರಿತು.

ಹರಿಕತೆ—ಇವಳಿಗೆ ಗೈಡಾಗಿದೆ. ಶೀನ ತನ್ನಷ್ಟಕ್ಕೆ ತಾನೇ ಅಂದು ಕೊಂಡ.

ಎಂತಹ ಜೀವನವೋ ಅಂತಹ ಗೈಡ್. ಅವಳ ಬಗ್ಗೆ ತಾನೇಕೆ ಇಷ್ಟು ಆಸೆ ಇಟ್ಟುಕೊಳ್ಳಬೇಕು ?

ಅವಳೇನು ನನಗಾಗಿಯೇ ಬೆಳೆದವಳೇ ?

ಬದುಕಿದವಳೇ ?

ಎಲ್ಲೋ ಪ್ರವಾಹದಲ್ಲಿ ನಾನು ಕೊಚ್ಚಿದಾಗ ಅವಳು ಒಂದು ಮರದ ತುಂಡು. ಇನ್ನೊಮ್ಮೆ ಪ್ರವಾಹ ನುಗ್ಗಿದಾಗ ನನ್ನ ಕೈಯಿಂದ ತಪ್ಪಿ ಹೋಗಲೂ ಬಹುದು.

ಈ ಹೋಟೆಲಿನಲ್ಲಿ ನಾವು ತಂಗಿದ್ದೇವೆ. ಇದರ ಬಗ್ಗೆ ನಮಗೇನು ಮಮತೆ ? ಏಕೆ ವಿರೋಧ ?

ಶೀನನ ತಲೆಯಲ್ಲಿ ತರತರದ ಸೀನ್

Sri Vidyabharathi Book Centre, Sringeri

CC-O. In Public Domain. Digitized by eGangotri

ಗಂಗಾನ ಬಗ್ಗೆ ಬಹಳ ಯೋಚನೆ ಬೇಡವೆಂದರೂ ನಾಯಿ ಮನಸ್ಸು ಕೇಳಬೇಕಲ್ಲ. ಮತ್ತೆ ಬಾಲ ಅಲ್ಲಾಡಿಸುತ್ತಲೇ ಇರುತ್ತಿತ್ತು.

ಗಂಗಾ......

ಮುಂಬೈಗೆ ರಾತ್ರಿ ನಿದ್ದೆಯೆ ಇಲ್ಲ. ಮಲಗಿದವರು ಮಾತ್ರ ಎದ್ದರು.

ರಾತ್ರಿಯೇ ಏಳುವವರೂ ಮುಂಬೈಯಲ್ಲಿ ಒಂದು ಭಾಗ ಇದ್ದಾರೆ.

ಶೀನ ಹಳ್ಳಿಯನ್ನು ನೆನೆದುಕೊಂಡ. ಬಹು ಚಿಕ್ಕದಾದ ಬದುಕು. ಕಾಲಕ್ಕೆ ಕಿಮ್ಮತ್ತೆ ಕಮ್ಮಿ. ಇಲ್ಲಿ ಎಲ್ಲವೂ ಕಾಲವಶ.

ಈ ದಿನ ಗಂಗಾನಿಗೆ ಬಹಳ ಅವಸರ.

ಅವಳ ತಲೆಯಲ್ಲಿ ಹರಿಕತೆ ತಪ್ಪಬಾರದು ಎಂದು ಕುಣಿಯುತ್ತಿದೆ.

ಸಂಜೆ ನಾಲ್ಕಕ್ಕೆ ತಿರುಗಾಡಲು ಹೋಗುವುದಾಗಿ ಗೊತ್ತಿದ್ದರೂ ಗಂಗಾ ಶೀನನಿಗೆ ಮೂರಕ್ಕೇ ಅವಸರ ಮಾಡಹತ್ತಿದಳು. ಎಷ್ಟೇ ಆದರೂ ಹೊರಡು ವಾಗ ಆಗಲೆ ನಾಲ್ಕೂವರೆ.

ಶೀನ–ಗಂಗಾ ಜತೆಯಾಗಿ ಹೊರಟರು.

ಟ್ಯಾಕ್ಸಿ ಹೋಟೆಲಿನಿಂದ ಹೊರಟು ಎಲ್ಲೋ ನಿಂತಿತು. ಶೀನ ದುಡ್ಡು ತೆಗೆದುಕೊಟ್ಟ.

ಹೋಟೆಲಿನ ಟ್ಯಾಕ್ಸಿಯಾದ್ದರಿಂದ ಕೇಳಿದ,

"ಎಲ್ಲಿಗೆ ಎಷ್ಟು ಹೊತ್ತಿಗೆ ಬರಬೇಕು ?"

ಶೀನ ಹೇಳಿದ : "ನೀನು ಬರುವುದು ಬೇಡ."

ಟ್ಯಾಕ್ಸಿಯಾತ ಶೀನನಿಗೊಂದು ಸೆಲ್ಯೂಟ್ ಹೊಡೆದು ಹೊರಟು ಹೋದ.

ರಸ್ತೆಯ ಒಂದು ಪಕ್ಕದಿಂದ ಶೀನ ಗಂಗಾ ಸಾಗಿದ್ದಾರೆ.

ಕೆಲ ಆಫೀಸು ಬಿಟ್ಟಿದ್ದರಿಂದ ಬೀದಿಯಲ್ಲಿ ಗಜಿಬಿಜಿ.

ಗಂಗಾ ಕೇಳಿದಳು "ಬೊಂಬಾಯಿಯಲ್ಲಿ ಯಾವಾಗ ಗಲಾಟೆ ಕಡಿಮೆ ?"

"ನೋಡೋಣವೆನ್ನುವವರದೇ ಒಂದು ಗಲಾಟೆಯಾಗುತ್ತದೆ..."

"ಗಂಗಾ ಆಚೆಗೆ ನೋಡು."

ಗಂಗಾ ಕಣ್ಣೆತ್ತಿ ನೋಡಿದಳು. ಒಂದು ಕ್ಷಣ ಕಣ್ಣರಳಿಸಿದಳು. ಅವಳಿಗೆ ತಾನು ನೋಡುತ್ತಿರುವುದು ಏನು ಎಂದು ತಿಳಿದಾಗ ನಾಚಿಕೆಯಿಂದ ತಲೆ ಕೆಳಗೆ ಹಾಕಿದಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರೆ ಕುತೂಹಲ ಹೆಚ್ಚಿತು, ಮತ್ತೆ ಕತ್ತು ಎತ್ತಿ ನೋಡಿದಳು. ಎದೆಯೊಳಗೇ ಅಯ್ಯೋ ಎಂದಳು.

"ಶೀನ ನನ್ನನ್ನು ಇಲ್ಲಿಗೇಕೆ ಕರೆದು ತಂದಿ ?"

ಶೀನ ಹೇಳಿದ, ಶಾಂತನಾಗಿ ಅಷ್ಟೇ ಗಂಭೀರನಾಗಿ,

"ಗಂಗಾ ನೀನು ಹೆಂಗಸಲ್ಲವೇ ? ಹೆಂಗಸರು ಹೇಗೆ ಬದುಕುತ್ತಾರೆ ಎಂದು ತೋರಿಸಲು ನಿನ್ನನ್ನು ಕರೆತಂದಿದ್ದೇನೆ, ನೋಡು. ಹೊಲಸು ಎಂದು ಕಣ್ಣು ಮುಚ್ಚಬೇಡ. ನೆಟ್ಟಗೆ ಕಣ್ಣು ತೆರೆದು ನೋಡು. ಆಂದರೆ ನಿನ್ನ ಹೊಲಸು ಹೋದೀತು.

ಗಂಗಾ, ಅಹಲ್ಯೆಯ ಹರಿಕತೆ ಕೇಳಲು ಹೊರಟಿದ್ದೀ ಹೋಗು, ನಾನು ಬೇಡವೆನ್ನುವುದಿಲ್ಲ."

ಹರಿಕತೆ ಧರ್ಮವನ್ನು ಉಳಿಸಿದ್ದರೆ...

ಇವರೆಲ್ಲ ಹೀಗಿರುತ್ತಿದ್ದರೆ......?

ಗಂಗಾ ಮತ್ತೆ ಕತ್ತೆತ್ತಿ ನೋಡಬೇಕು. ಆದರೆ ಅವಳಿಗೆ ಕಣ್ಣೆದುರಿನ ಅಸಹ್ಯತೆ ತಾಳಲಾರದೆ ಮತ್ತೆ ಕೆಳಮುಖ ಹಾಕಬೇಕು.

ಗಂಗಾ ಉದ್ವಿಗ್ನಳಾಗಿದ್ದಳು. ಅವಳ ಮನಸ್ಸಿಗೆ ನೂರು ಚೇಳು ಕಡಿದವು.

"ಗಂಗಾ ! ಇವರೆಲ್ಲರೂ ಯಾರು ?"

"ನಮ್ಮ ರಾಜ್ಯದವರೆ ಹೆಚ್ಚು ಜನ ಇಲ್ಲಿ ಇದ್ದಾರೆ."

"ನಿನ್ನೆ ಹರಿಕತೆಯಲ್ಲಿ ಯಾರನ್ನೊ ಮಾತನಾಡಿಸಿದಿ. ನಮ್ಮ ಜಿಲ್ಲೆಯುವರೆಂದಿ. ಇಲ್ಲಿ ನಮ್ಮ ಜಿಲ್ಲೆಯವರೆಷ್ಟು ಜನ ಇದ್ದಾರೆ ಗೊತ್ತೆ ? 'ನಮ್ಮೂರಿನವರೆ ಹಲವಾರು ಇದ್ದಾರೆ. ನಡೆ ಮಾತನಾಡಿಸಿ ಬರೋಣ !"

ಶೀನ ಏನು ಭಯಂಕರ ಪ್ರಾಣಿ ಎನ್ನಿಸಿತು ಗಂಗಾನಿಗೆ.

"ಶೀನ, ಗಂಗಾನನ್ನು ಕೊಂದುಬಿಡು. ಈ ರೀತಿ ತಿವಿದು ಗಾಯಗೊಳಿಸಿ ಬದುಕಿಸಬೇಡ...."

ಮತ್ತೊಮ್ಮೆ ಗಂಗಾನ ಕಣ್ಣುಗಳು ನೆಲ ಮಾಡದಿಂದ ಮೇಲಿನ ಉಪ್ಪರಿಗೆಯವರೆಗೆ ಬಾಗಿಲಲ್ಲಿ ನಿಂತವರನ್ನೂ ಕಿಡಿಕೆಯಲ್ಲಿ ಕುಳಿತವರನ್ನೂ ನೋಡಿದವು.

"ಶೀನ ನಾನು ಇನ್ನು ಮುಂದೆ ಹೆಜ್ಜೆ ಇಡಲಾರೆ. ಹಿಂತಿರುಗಿ ಹೋಗೋಣ !"

ಮುಂದೆ ನಡೆದವಳು ಒಮ್ಮೆಲೆ ತಿರುಗಿಬಿಟ್ಟಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶೀನನಿಗೆ ಸ್ತ್ರೀದಾಕ್ಷಿಣ್ಯವೊಂದು ಟಿ. ಬಿ. ಯಂತೆ ಅಂಟಿಕೊಂಡ ರೋಗ. ತಾನೂ ತಿರುಗಿದ.

ಆದರೆ ಗಂಗಾನನ್ನು ತಿವಿಯುವುದನ್ನು ನಿಲ್ಲಿಸಲಿಲ್ಲ.

"ಇದನ್ನು ನೀನು ನೋಡಲಾರೆಯಲ್ಲವೆ? ಯಾಕೆ ಇವರೆಲ್ಲಾ ಪಾಪಿಗಳು ಎಂದೆ?"

"ಶೀನ ಒಟ್ಟಿನಲ್ಲಿ ನಿನ್ನ ತಲೆ ಕೆಟ್ಟಿದೆ. ನೀತಿಯನ್ನು ನೀನೆಷ್ಟೊ ಇತ್ತೀಚೆ ಸೇರಲಾರಿ!

ನಿನಗೆ ಅಸಹ್ಯವಾದದ್ದು, ಹೊಲಸಾದದ್ದು ರುಚಿಸುತ್ತದೆ. ಧರ್ಮ, ಒಳ್ಳೆಯದು, ನಿನಗೆ ಹಿಡಿಸಲೊಲ್ಲದು."

ನನ್ನ ದುರ್ದೈವ! ನೀನಾದರೂ ಏನು ಮಾಡೀಯೇ? ನಾನು ಇದನ್ನೇ ಬೇಡಿದ್ದರೆ..." ಹೆಂಗಸಿನ ಚರಮಾಸ್ತ್ರ ಪ್ರಯೋಗಿಸಿದಳು.

"ಇದು ದಾರಿ. ಹೋಟಿಲಿನ ರೂಮೂ ಅಲ್ಲ. ನಮ್ಮೂರಿನಲ್ಲಿಯ ನಿನ್ನ ಮನೆಯೂ ಅಲ್ಲ" ಮತ್ತೆ ಮುಂದೆ ನಡೆದರು.

ಹಲವು ಹೆಜ್ಜೆ!

ಈಗ ಫರಾಸ್ ರೋಡ್ ಪೂರ್ತಿ ಹಿಂದೆ ಉಳಿಯಿತು. ಕೆಳಗೆ ಹಾಕಿದ ಮುಖದಿಂದಲೆ ಹಿಂದೆ ನೋಡಿದಳು. ಆ ಬೀಭತ್ಸ ದೃಶ್ಯ ದೂರ ಉಳಿದುದು ನೋಡಿ ಮೆಲ್ಲನೆ ಮುಖ ಮೇಲೆ ಎತ್ತಿದಳು.

"ಗಂಗಾ ಸ್ವಲ್ಪ ಟೀ ಕುಡಿಯೋಣವೇ?"

"ಇಷ್ಟು ಹೊತ್ತಿನವರೆಗೆ ವಿಷ ಕುಡಿಸಿದ್ದು ಸಾಲಲಿಲ್ಲವೇ?"

"ಇದು ನೋಡು ಗಂಗಾ, ಹೀಗೆ ಹೇಳುವವರು ಸಾವಿರ ಜನ. ನನಗೆ ಏನಾಗಿದೆ ಅದನ್ನು ನೋಡಿ..."

"ಏನೂ ಆಗಿಲ್ಲ... ಆಯಿತಲ್ಲೊ?"

"ಈಗ ನಿಜವನ್ನು ಹೇಳಿದಿ."

"ಶೀನ ನಾವು ಮುಂಬೈಗೆ ಬರಬಾರದಿತ್ತು."

"ನನಗೆ ಊರಲ್ಲಿಯೇ ತಿಳಿದಿದ್ದರೆ ಚೆನ್ನಾಗಿತ್ತು."

"ಏನು—"

"ನಿನ್ನ ಮನಸ್ಸು."

"ಶೀನ ಈ ಊ[illegible] ಬಿಡುವವರೆಗೆ ಆ ಮಾತು [illegible]ಡಬಾರದು..."

Sri Vidyabharathi Book Centre, Sringeri

CC-O. In Public Domain. Digitized by eGangotri

"ನಡೆ, ಟೀ ಕುಡಿದು ಹರಿಕತೆಗೆ ಹೋಗು..."

ಉದ್ವೇಗ ತಪ್ಪಿಸಲು ಹೊಸಹಾದಿ ಹುಡುಕಿದ.

ಪಕ್ಕದಲ್ಲಿಯ ಹೋಟೆಲಿನಲ್ಲಿ ಇಬ್ಬರೂ ಟೀ ಕುಡಿದರು.

ಟ್ಯಾಕ್ಸಿ ಹತ್ತಿ ನೇರ ಮಾತುಂಗಾಕ್ಕೆ ಬಂದರು.

ಗಂಗಾನಿಗೆ ತಾನೇನೋ ಈಗ ಶುದ್ಧಿಯ ಮೇಲೆ ಬಂದ ಹಾಗೆ ಅನ್ನಿಸಿತು. ಹರಿಕತೆಯ ಜಾಗೆಗೆ ಗಂಗಾ ಹೋದಳು.

ಶೀನನಿಗೆ ತಾನು ಒಂಟಿಗನಾಗಿ ಬಿದ್ದುಕೊಳ್ಳುವುದು ಬೇಕಿತ್ತು.

ಗಂಗಾನನ್ನು ಸ್ವಲ್ಪ ಹೊರಗೆ ಕರೆದ.

"ನಾನು ಬರುವುದು ಸ್ವಲ್ಪ ತಡವಾದರೂ ನೀನು ದಾರಿಕಾಯಿ, ಬರುತ್ತೇನೆ."

"ತಡಮಾಡಬೇಡ ಹರಿಕತೆ ಬಿಡುವ ಹೊತ್ತಿಗೆ ಬಂದುಬಿಡು..."

ಮಾತುಂಗದಿಂದ ದಾದರಕ್ಕೆ ಬಂದ ಶೀನ ಬೀಚ್‌ಗುಂಟ ನಡೆದಿದ್ದ.

ಹತ್ತು ಜನ ನೆರೆದಲ್ಲಿ ಕುತೂಹಲದಿಂದ ಹಣಿಕೆ ಹಾಕಿದ.

ಮಳಲು ರಾಶಿಯ ಮೇಲೆ ಒಂದು ಶುಭ್ರ ಬಟ್ಟೆಹಾಸಿತ್ತು. ಅದರ ಮೇಲೆ ರಾಶಿರಾಶಿಯಾಗಿ ಚಿಲ್ಲರೆ ನಾಣ್ಯಗಳು.

ಶೀನ ಇನ್ನೂ ತಲೆ ಹಾಕಿ ನೋಡಿದ.

ಮಳಲು ರಾಶಿಯಲ್ಲಿ ತನ್ನ ಪೂರ್ತಿ ಕತ್ತನ್ನು ಹುಗಿದುಕೊಂಡು ಕಾಲುಗಳನ್ನು ಮೇಲೆ ಮಾಡಿ ಶೀರ್ಷಾಸನದಲ್ಲಿ ನಿಂತಿದ್ದಾನೆ.

ತಲೆ, ಬಾಯಿ, ಮೂಗು ಒಂದೂ ಹೊರಗಿಲ್ಲ, ಮಣ್ಣಿನೊಳಗೆ ಹೂತಿವೆ.

ಜನ ಹುಚ್ಚಿದ್ದು ದುಡ್ಡು ಕಾಸು ಚೆಲ್ಲಿ ಹೋದರು.

ಇನ್ನು ಕೆಲವರು ಊದುಬತ್ತಿ ಹಚ್ಚಿ, ಹೂವು ಏರಿಸಿ ಹೋಗಿದ್ದಾರೆ.

ಶೀನ ನಿಂತು ನೋಡಿದ.

ಮುಂಬೈಯಲ್ಲಿ ಮಾರಾಟವಾಗದೆ ಇರುವ ವಸ್ತು ಯಾವುದು ?

ಹೆಂಗಸರ ಮಾನ.

ಧರ್ಮ.

ರಾಜಕೀಯ.

ಯಂತ್ರ.

ಮಂತ್ರ ವಿದ್ಯೆ, ಅವಿದ್ಯೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಯೋಗ-ಭೋಗ—ಎಲ್ಲವೂ ಮಾರಾಟಕ್ಕಿದೆ. ಆದರೆ ತನ್ನ ಹಳ್ಳಿಗೆ ಹಾಗು ಮುಂಬೈಗೆ ಆತ ಕಂಡ ದೊಡ್ಡ ಅಂತರ ಎಂದರೆ—

ಹಳ್ಳಿಯಲ್ಲಿ ತಲೆ ಇಲ್ಲದೇನೆ ಸುಖವಾಗಿ ಬದುಕು. ತಲೆ ಇದ್ದರೆ ತೊಂದರೆ. ಮುಂಬೈಯಲ್ಲೊ ತಲೆ ಒಂದಿದ್ದರೆ ಎಲ್ಲ ಇದೆ.

ಕತ್ತಲಾದ ಬಳಿಕ ಬೀಚಿನಿಂದ ಗಂಗಾ ಇದ್ದಲ್ಲಿಗೆ ಹೋಗಿ ಮರಳಿ ಹೋಟೆಲಿಗೆ ಬಂದ.

ಮರುದಿನ ದೊಡ್ಡ ಹೋಟೆಲಿನಿಂದ ಶೀನ ತನ್ನ ಬಿಡಾರ ಮಾತುಂಗಕ್ಕೆ ಬದಲಿಸಬೇಕಾಗಿ ಬಂತು.

ರಾತ್ರಿ ಗಂಗಾನ ನಿರಶನ, ಸತ್ಯಾಗ್ರಹ. ಶೀನ ಬೇಕಾದಷ್ಟು ಹೇಳಿದ, ಕೇಳಲಿಲ್ಲ. ಆಶ್ವಾಸನೆ ಕೊಟ್ಟರೆ ಸರಿ!

"ಶೀನ ನೋಡು ಮಾತುಂಗದಲ್ಲಿ ನಾಳೆಯಿಂದ ನಿತ್ಯ ಬೆಳಿಗ್ಗೆ ಸ್ವಾಮಿಗಳ ಪುರಾಣವಿದೆ. ನೋಡು, ನಾವು ಮುಂಬೈಯಲ್ಲಿ ಇರುವಷ್ಟು ದಿನ ಯಾಕೆ ಕೇಳಬಾರದು. ಶೀನ ನಾನು ಪುರಾಣ ಕೇಳುವುದು ನಿನಗೆ ಸೇರುವುದಿಲ್ಲ ನನಗೆ ಗೊತ್ತು.

ಶೀನ ನನ್ನ ಮನಸ್ಸಿಗೆ ಅದರಿಂದ ನೆಮ್ಮದಿ ಎನ್ನಿಸುತ್ತದೆ. ನನಗೆ ಹೋಗಲು ಅನುವು ಮಾಡಿಕೊಡು. ನಾವು ಮಾತುಂಗದಲ್ಲಿಯೇ ಹೋಟೆಲೊಂದರಲ್ಲಿ ಬಿಡಾರ ಮಾಡುವ. ನೀನೂ ಬೆಳಿಗ್ಗೆ ಎಲ್ಲಿಯಾದರೂ ಓಡಾಡಿಕೊಂಡಿರು. ನಾನು ಪುರಾಣ ಕೇಳುತ್ತೇನೆ.

ಸಂಜೆ ಇಬ್ಬರೂ ಸೇರಿ ಎಲ್ಲಾದರೂ ಅಲೆಯುವಾ."

'ಗಂಗಾ ಮುಂಬೈಗೆ ಬಂದು ಕೆಟ್ಟಳು...' ಶೀನ ತನ್ನ ಈ ಅಭಿಪ್ರಾಯವನ್ನು ತಾನೇ ತಿದ್ದಿಕೊಂಡ. ಹಾಗೆ ನಾನೇಕೆ ಹೇಳಬೇಕು.

ಗಂಗಾ ಯಾರು?

ನನ್ನ ಮನಸ್ಸಿಗೆ ಬಂದುದನ್ನು ನಾನು ಮಾಡಲು ಸಮರ್ಥ ಸ್ವತಂತ್ರ. ಈ ಸ್ವಾತಂತ್ರ್ಯ ಗಂಗಾನಿಗೇಕೆ ಇರಬಾರದು? ಅವಳು ನನ್ನಿಂದ ಅದನ್ನು ಅಪೇಕ್ಷೆ ಮಾಡುತ್ತಾಳೆ. ಅವಳಿಗೆ ಸ್ವಾತಂತ್ರ್ಯವನ್ನು ನಾನು ಕೊಡುವ ಕಾರಣವೂ ಇಲ್ಲ. ಅವಳು ಸ್ವತಂತ್ರಳೇ ಇರುವಳು.

ಆದರೆ ಹುಲ್ಲು ಮನಸ್ಸಿನ ಹೆಂಗಸು ಸ್ವಾತಂತ್ರ್ಯ ಬೇಡುತ್ತಾಳೆ...

Sri Vidyabharathi Book Centre, Sringeri

CC-O. In Public Domain. Digitized by eGangotri

ಈಗ ಮಾತುಂಗಕ್ಕೆ ಬಂದು ಹದಿನೈದು ದಿನಗಳಾದವು. ಒಂದು ದಿನ ಬೆಳಿಗ್ಗೆ ಶೀನ ಅಬ್ದುಲ್‌ನ ಕಡೆಗೆ ಹೋದವ ಸಂಜೆಯೇ ಬಂದ.

ಮುಂಬಯಿಯಲ್ಲಿ ಗಂಗಾ ಇಲ್ಲ!

ರೂಮಿನಲ್ಲಿ ಗಂಗಾ ಇರಲಿಲ್ಲ.

ಈಗ ಅವಳಿಗೆ ಸ್ನೇಹಿತರಾಗಿದ್ದರು;ಹೋಗಿರಬಹುದು ಎಂದುಕೊಂಡಿದ್ದ.

ಸಂಜೆಯಾಯಿತು. ಹರಿಕತೆಯ ಜಾಗೆಗೆ ಹೋಗಿ ಹರಕೆ ಹಾಕಿ ಕಾಯ್ದು ಮುಗಿಯುವವರೆಗೂ ಕುಳಿತು ಬಂದ ಗಂಗಾ ಇಲ್ಲ.

ಮರಳಿ ಕೋಣೆಗೆ ಬಂದು, ರಾತ್ರಿಯ ಗಂಟೆಗಳನ್ನು ಎಣಿಸುತ್ತ ಕುಳಿತ.

ಗಂಗಾ ಇಲ್ಲ.

ಮರುದಿನ ಇಲ್ಲ.

ಅದರ ಮರುದಿನ ಹೀಗೆ ಎಷ್ಟೋ ದಿನ ಇಲ್ಲ. ಒಂದು ದಿನ ಅಬ್ದುಲ್ ಬಂದಾಗ ಕೇಳಿದ,

"ಭಾಬಿ ಎಲ್ಲಿ?"

ಶಿನ ಶಾಂತವಾಗಿಯೆ ಹೇಳಿದ.

"ಅವಳೆಲ್ಲೋ ಹೋಗಿ ಆಗಲೇ 6-8 ದಿನ ಆಯಿತು!"

ಈಗ ಗಂಗಾ ಗುಪ್ತಗಾಮಿನಿ.

ಶೀನ ಗಂಗಾನ ಬಗ್ಗೆ ಒಂದು ಕ್ಷಣ ಯೋಚಿಸಿದ. ಅವನ ಹಸಿಮನಸ್ಸಿನಲ್ಲಿ ಅವಳು ಆಡಿಯಾಡಿದ ಗುರುತುಗಳು.

ಅದನ್ನು ಅಳಿಸಬೇಕೆಂದರೆ —

ಇವನ ಕಾಲಿಗೆ ಹಳೆಯ ಹೊಲಸು ಅಂಟಿಕೊಳ್ಳುವುದು.

ಇದ್ದರೆ ಇರಲಿ ಎಂದರೆ—

ಹೆಜ್ಜೆಗೊಮ್ಮೆ ಆ ಗುರುತು ಕಣ್ಣು ತಿವಿಯುತ್ತದೆ.

ಹೋಟೆಲಿನ ರೂಮಿನಲ್ಲಿ ಕುಳಿತರೂ ಶೀನ ನದಿ ತೀರದ ತಪಸ್ವಿಯಂತೆ ಮನಸ್ಸಿನ ಹೊಲಸಿನ ಮೇಲೆ ವಿಚಾರದ ನೀರನ್ನು ಎರಚಿದ.

ಗಂಗಾ ಯಾರು?

Sri Vidyabharathi Book Centre, Sringeri

ಒಬ್ಬ ಹೆಂಗಸು. ಶಾನುಭೋಗರ ಮನೆಯ ಅಡುಗೆಯವಳು.

CC-O. In Public Domain. Digitized by eGangotri

ಎಂದೋ ಒಂದು ದಿನ ಸಂಬಂಧ ಬಂತು.

ಕೆಲದಿನ ಮುಂದುವರಿಯಿತು.

ಇಬ್ಬರೂ ಕೂಡಿದ್ದೆವು.

ಇನ್ನೊಂದು ದಿನ ಈ ಮುಂಬೈಗೆ ಬಂದೆವು ಹಲವು ದಿನ ಓಡಾಡಿದೆವು.

ಇಂದು ಇಲ್ಲ ನಿನ್ನೆ. ಕಾಲ ನಿರ್ಣಯಕ್ಕಾಗಿ ಇತಿಹಾಸ ಸಂಶೋಧಕರು ಬಡಿದಾಡಲಿ

ಅದೂ ಒಂದು ದಿನ.

ಬಂದ ಹಾಗೆಯೆ ಹೊರಟು ಹೋದಳು. ಹೋಗುತ್ತೇನೆ ಎಂದು ಅವಳು ಹೇಳಲಿಲ್ಲ. ನಿಲ್ಲಬೇಡ ಹೊರಟು ಹೋಗು ಎಂದು ನಾನು ಅವಳಿಗೆ ಆಜ್ಞೆ ಮಾಡಲಿಲ್ಲ.

ಗಂಗಾ ಹೋದಳು ! ಅಲ್ಲ ಬಂದಂತೆಯೆ ಕರಗಿದಳು.

ಹೋಗುವಾಗ ಹೇಗೆ ಹೋದಳು ?

ಶೀನನಿಗೆ ಅರ್ಥಸೂತಕವಿತ್ತು. ಆ ಮೂಲೆಯಲ್ಲಿ ಅನೇಕ ತನ್ನ ಸ್ಮೃತಿಗಳು, ಒಂದಕ್ಕಿಂತ ಇನ್ನೊಂದು ಅಶ್ಲೀಲ ದೃಶ್ಯಗಳು.

ಏನು ಅಶ್ಲೀಲ !

ದುಡ್ಡಿನ ಸಮಾಚಾರ ಶೀನನಿಗೆ ಸೇರಲಾರದ ವಿಷಯ.

ಆ ಬತ್ತಲೆಯ ಸ್ವರೂಪದಲ್ಲಿ ಶೀನನಿಗೆ ಏನು ಕಂಡಿತು ?

ಗಂಗಾನ ಮೈಮೇಲೆ ಐವತ್ತು ತೊಲ ಚಿನ್ನ. ಪೆಟ್ಟಿಗೆಯಲ್ಲಿ ಇನ್ನೂ ಅರವತ್ತು ತೊಲದ ಬೇರೆ ಆಭರಣ. ಅಲ್ಲದೆ ಒಂದೆರಡು ಕಟ್ಟು ಚಿಕ್ಕ ದೊಡ್ಡ ನೋಟುಗಳು.

ಎಲ್ಲದರ ಬೆಲೆ —?

ಗಂಗಾ ! !

ಶೀನ ತನ್ನಷ್ಟಕ್ಕೆ ತಾನೆ ಕೇಳಿಕೊಂಡ, 'ಗಂಗಾನಿಗೆ ತಾನು ಇದೆಲ್ಲವನ್ನು ಏಕೆ ಕೊಟ್ಟೆ ?'

ಹಳ್ಳಿಯಲ್ಲಿರುವಾಗ ಒಂದು ದಿನ ಒಬ್ಬ ಭಿಕ್ಷುಕರಿಗೆ ಒಂದು ಕಾಸು ಎಸೆಯಲಿಲ್ಲ.

ಇವನ ಮನೆಯ ಮುಂದೆ ನಿತ್ಯ ಕಸ ಗುಡಿಸಲು ಬರುತ್ತಿದ್ದ ಮಲ್ಲಿ...?

ಅವಳ ಸೀರೆ —

Sri Vidyabharathi Book Centre, Sringeri

CC-O. In Public Domain. Digitized by eGangotri

ತೋರಿಸಬಾರದ ಪದಾರ್ಥಗಳನ್ನು ಪ್ರಕಟಿಸುತ್ತಿತ್ತು. ಒಮ್ಮೆ ಅವಳು ಅಂಗಲಾಚಿದ್ದಳು,

"ಅಪ್ಪ ಶೀನಪ್ಪ ... ನಿನ್ನದೊಂದು ಹರಕು ದೋತರ ಕೊಡು. ನೋಡಿದಿಯಾ ಈ ಅವಸ್ಥೆಯನ್ನು."

ಶೀನ ಅವಸ್ಥೆ ನೋಡಿದ. ಧೋತರ ಕೊಡಲಿಲ್ಲ.

ಭಿಕ್ಷುಕರು ಎಂಬ ಅಸಡ್ಡೆ.

ಆದರೆ ಒಮ್ಮೆ ಅಬ್ದುಲ್ ಕೊಟ್ಟ ಚಿನ್ನದಿಂದ ಆತ ನೇರ ಗಂಗಾನ ಕೈಯು ಳತೆ ಬಳೆ ಮಾಡಿಸಿದ. ರೇಶಿಮೆಯ ಕೆಂಪು ಸೀರೆ ತಂದ.

ಯಾಕೆ ?

ಶೀನ ಗಂಗಾಳನ್ನು ತನ್ನವಳೆಂದು ತಿಳಿದಿದ್ದ.

ಹಾಗೆ ತಿಳಿಯಬಾರದಿತ್ತೆ ?

ಈಗ ಅವಳನ್ನು ತನ್ನವಳಲ್ಲ ಎಂದೂ ತಿಳಿಯುತ್ತಾನೆ.

ಗಂಗಾನಿಗೆ ನಾನೇನು ಮಾಡಿದೆ. ಅಬ್ದುಲ್ ಚಿನ್ನ ಕೊಟ್ಟ. ಹಣ ಕೊಟ್ಟ.

ಗಂಗಾ ತನಗೆ ಮುಚ್ಚುಮರೆಯಲ್ಲಿ ಏನನ್ನೋ ತೆತ್ತಿದ್ದಳು.

ಶೀನನಿಗೆ ಪೇಟೆಯ ದುಡ್ಡುಕಾಸಿನ ಲೆಕ್ಕಹಾಕಿನೋಡಿದರೆ ವ್ಯಾಪಾರ ತಿಳಿಯುವುದಿಲ್ಲ ಎಂದಾದೀತೆ ಹೊರತು ಇನ್ನೇನ್ನಕಲ್ಲ.

'ಚಿನ್ನವನ್ನು ಎತ್ತಿಹಾಕಿ ಹೋದಳು.'

ಗಂಗಾನ ಮೇಲೆ ನಾನೆಂದಿಗೂ ಬುದ್ಧಿಪುರಸ್ಸರವಾಗಿ ಆರೋಪ ಮಾಡಲಾರೆ.

ಏಕೆಂದರೆ ನಾನು ಚಿನ್ನ ಸಂಪಾದಿಸಿದ ಮಾರ್ಗವು ಅದು ಹೊರಟ ಹೋದಷ್ಟೆ ಅನಾಯಾಸವಾಗಿತ್ತು.

ಆ ದಿನ ಬಹಳ ಹೊತ್ತಿನಮೇಲೆ ಅಬ್ದುಲ್ ಬಂದ. ಅವನಿಗೂ ಮುಗಿಲು ಹರಿದು ಬಿದ್ದಿತ್ತು !

"ಆಚಾರಿ, ಹೆಂಗಸಿನ ನೆಲೆ ಹತ್ತದು ಎಂದು ಬಲ್ಲವರು ಹೇಳುತ್ತಾರೆ. ಭಾರಿ ಹುಶಾರಿಯಾದ ನಿನಗೇ ಆ ಹೆಂಗಸಿನ ನಾಡಿ ಹೇಗೆ ತಿಳಿಯಲಿಲ್ಲ?"

ಅವಳ ರೀತಿ ನೋಡಿದರೆ ಹಾಗೆ ಕಾಣಲಿಲ್ಲ. ಮತ್ತೆ ಇಂತಹ ಹೆಂಗಸು ಹೇಗೆ ಮಾಡಿರಬಹುದು.

"ಸಾಬ... ಇದು ಕುರಿಯು ತಲೆಗೆ ಎಲ್ಲಿ ಹೊಳೆಯುತ್ತದೆ, ಈ ಹೆಣ್ಣಿನ ಹಿಂದೆ ಒಂದು ಗಂಡು ಇದೆ."

Sri Vidyabharathi Book Centre, Sringeri

 CC-O. In Public Domain. Digitized by eGangotri

ಗಂಗಾನನ್ನು ಮೋಸಗೊಳಿಸುವುದು ಯಾವ ದೊಡ್ಡ ಮಾತು ?

ಲೋಕದಲ್ಲಿ ಮೋಸಹೋಗುವ ಗಂಡಸರು ಸಾವಿರಾರು ಜನ ಇರುವ ಹೊತ್ತಿನಲ್ಲಿ, ಹೆಂಗಸು ಮೋಸಬೀಳುವುದರಲ್ಲಿ ಯಾವ ದೊಡ್ಡದು ಇದೆ ?

" ಏ ಆಚಾರಿ, ಅವಳ ಮೈಮೇಲೆ ಚಿನ್ನ ಇಟ್ಟಿದ್ದಿಯಲ್ಲ...."

"ಅಬ್ದುಲ್ ನೀನು ಸುಮ್ಮನೆ ತಲೆ ಒಡೆಯಬೇಡ."

ಗಂಗಾನನ್ನು ನಾನು ಬಹಳ ಕಷ್ಟಪಟ್ಟು ಪಡೆದದ್ದಲ್ಲ. ಹೊದಾಗಲೂ ಅಷ್ಟೆ, ಚಿನ್ನದ ಕತೆಯೂ ಅಷ್ಟೇನೆ !

"ಈಗ ಸುಮ್ಮನೆ ಆ ಬೆಂಕಿ ಕೆದರಾಡಿ ಮುಖ ಸುಟ್ಟುಕೊಳ್ಳುವುದು ಬೇಡ. ನಡೆ ಹೋಗೋಣ. ಗಂಟಲಾರಿದೆ..."

"ಚಹಾನೇ ಸಾಕೊ...ಇನ್ನೇನಾದರೂ...?"

"ಇದು ಬೊಂಬಾಯಿ ನನಗೆ ಚಹ ಸಾಲದು."

"ಆದರೆ...ಎಲ್ಲಾದರೂ ಒಂದು ಹೊಗಿ ಬಂದರಾದೀತು ?

ನಾನು ಭೂಪ ಇರುವವರೆಗೆ ನೀನು ಹೆದರಬೇಡ."

ಇಬ್ಬರೂ ಹೋದರು.

ಎಲ್ಲೋ ಕಂಠಮಟ್ಟ ಕುಡಿದರು.

ಶೀನನಿಗೆ ಪೂರ್ತಿ ಸಮಾಧಿ.

ಅಬ್ದುಲ್‌ನಿಗೆ ಮತ್ತೆ ಅನೇಕ ಕೆಲಸ.

ಗುಪ್ತಬಾರ್‌ದ ಮಾಣಿಗೆ ಅಬ್ದುಲ್ ಹೇಳಿದ್ದ,

"ಶೀನನನ್ನು ಎಚ್ಚರವಾದಮೇಲೆ ಮನೆಗೆ ಕಳಿಸು" ಎಂದು.

ಹೀಗೆ ಒಂದಲ್ಲ ಹಲವು ದಿನ ಕಳೆದವು.

ಒಂದುದಿನ ಇತ್ತ ಶೀನ ಬಾರ್‌ನಲ್ಲಿ ಮಲಗಿದ್ದಾಗ—

ಗಂಗಾನಿಗೆ ಕಾಂಚೀಪುರಂದಲ್ಲಿ ಎಚ್ಚರಾಯಿತು.

ಶಾಮಣ್ಣನ ಸಾನ್ನಿಧ್ಯದಲ್ಲಿ

"ಮನೆಯಲ್ಲಿ ಯಾರೂ ಗಂಡಸರಿಲ್ಲವೆ?"

ಕಟ್ಟೆಯ ತುದಿಗೆ [illegible] ಮಾಡುತ್ತಿದ್ದ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಮಣ್ಣ ಏನೋ ಧ್ವನಿ ಕೇಳಿದಂತಾಗಿ ಗೀತೆಯಲ್ಲಿ ತೊಡಗಿದ್ದ ಕನ್ನಡಕದೊಳಗಿನ ಕಣ್ಣುಗಳಿಗೆ ಮೋಕ್ಷವಿತ್ತ.

ಮೂಗಿನ ಮೇಲಿನ ಕನ್ನಡಕ ಹಣೆಗೆ!

ಕನ್ನಡಕ ಹಾಕಿದರೂ ಅಸ್ಪಷ್ಟ ಕಾಣುವ ಸ್ಥಿತಿ.

ಕನ್ನಡಕ ತೆಗೆದು ನೋಡುವ ಚಪಲ, ಶಾಮಣ್ಣನಿಗೆ ತಲೆ ಬೆಳ್ಳಗಾದರೂ ಹೋಗಿಲ್ಲ.

ಕನ್ನಡಕದ ಸ್ಥಾನಾಂತರ.

ಬದಲಾಯಿಸಿದ ದೃಷ್ಟಿಕೋನ.

ಬಾಗಿಲಲ್ಲಿ ತೂರಿದ ಹಳೆಯ ಕಲ್ಲಿನ ತೂರಾಟ.

"ಮನೆಯಲ್ಲಿ ಯಾರೂ ಗಂಡಸರಿಲ್ಲವೆ?"

ಬಾಗಿಲಿನಿಂದ ಹಾರುತ್ತಿದ್ದ ಪ್ರಶ್ನೆಯ ಫಿರಂಗಿಗೆ ಉತ್ತರ ವಯಸ್ಸಿನಲ್ಲಿದ್ದ ಈಗ ನಿರುತ್ತರನಾಗಿರುವುದು ವಾಸಿ ಎಂದು ಸುಮ್ಮನಿದ್ದ.

ವಯಸ್ಸು ಎಲ್ಲಿಗೆ ಹೋದರೆನು ?

ಮನಸ್ಸು, ಹುಣಿಸೆಯ ಮರ ಅಲ್ಲವೆ ?

ಕಂಬಕ್ಕೆ ಆತುಕೊಂಡು ಕುಳಿತಿದ್ದ ಶಾಮಣ್ಣ ಪುಸ್ತಕ ನೋಡದೆ ಅಭ್ಯಾಸ ಬಲದಿಂದ ಗೀತೆಯನ್ನು ಹಾಗೆಯೇ ಮುಂದುವರಿಸಿದ.

"ಸ್ತ್ರೀಸುದುಷ್ಟಾಸು..."

ಅಷ್ಟರಲ್ಲಿ ಅದೇ ಮೊದಲಿನ ಗಾತ್ರದ ಫಿರಂಗಿ!

"ಗಂಡಸರು ಯಾರೂ ಇಲ್ಲವೆ ?"

ಇಷ್ಟು ಹಣ್ಣಾದ ತಣ್ಣಗಿನ ವಯಸ್ಸಿನಲ್ಲೂ ಭಗವದ್ಗೀತೆ ಕೈಯಲ್ಲಿರುವಾಗಲೂ ಕುದಿತ.

ಈ ಒಂದೆರಡು ಕ್ಷಣಗಳ ಹಿಂದೆಯೇ ಓದಿದ ಗೀತೆಯ ಧ್ವನಿ ಊದುಬತ್ತಿಯಾಗಿ ಅಲ್ಲಿ ಮೊಗಸಾಲೆಯಲ್ಲಿ ಸುತ್ತಾಡುತ್ತಿತ್ತು.

"ಕಾಮಾತ್ ಕ್ರೋಧೋಭಿಜಾಯತೆ..."

"ಕ್ರೋಧಾತ್..."

ಪುಸ್ತಕ ಏನೇ ಹೇಳಲಿ ಎಷ್ಟೆ ಕೂಗಿಕೊಳ್ಳಲಿ.—

ಮನುಷ್ಯನಾದ ಬಳಿಕ

ಮನಸ್ಸು ಇದ್ದ ಬಳಿಕ

Sri Vidyabharathi Book Centre, Sringeri

 CC-O. In Public Domain. Digitized by eGangotri

ಆಗಬೇಕಾದ ಕ್ರಿಯೆ ನಿಲ್ಲುತ್ತವೆಯೆ ?

ತಾನು ಉತ್ತರ ಕೊಟ್ಟರೆ ಪ್ರಶ್ನೆಯ ಬೋಲಿಂಗಿಗೆ ಇದೆ ಕೊನೆಯ ಓವರಿನ ಕೊನೆಯ ಬೋಲ್.

ಶಾಮಣ್ಣ ಉತ್ತರ ಕೊಡಬಾರದು ?

ಕೋಪಗೊಂಡರೆ ಗೀತೆ ಕೈಯಲ್ಲಿ ಹಿಡಿದದ್ದೇನು ಸಾರ್ಥಕ?

ಸುಮ್ಮನಿದ್ದ.

ಬಾಯಿಯಿಂದ ಅವ್ಯಾಹತ ಫಿರಂಗಿ ತೂರುತ್ತ ತೆರೆದ ಬಾಗಿಲಿಂದ ಒಳಗೆ ನುಗ್ಗಿದಳು ಅವಳು !

ಶಾಮಣ್ಣ ಅವಳನ್ನು ಆಪಾದಮೌಳಿಪರಿಯಂತ ನೋಡಿದ.

ತಣ್ಣಗಿನ ಕೆಂಪು ಬಣ್ಣದ ಲೈಫ್ ಸೈಜಿನ ಸ್ತ್ರೀಪ್ರತಿಮೆ.

ಶಾಮಣ್ಣನೂ ಅದೇ ಸೈಜಿನ ಪುರುಷ ವಿಗ್ರಹ! ಒಂದು ಕಾಲದಲ್ಲಿ ಸುಪ್ರಸಿದ್ಧ ಗಂಡಸಾದ ತಾನು ಇಂತಹ ಪ್ರಶ್ನೆಗೆ ಏನು ಉತ್ತರ ಕೊಡು ತ್ತಿದ್ದ ? ಶಾಮಣ್ಣನಿಗೆ ಇತಿಹಾಸದ ಮೇಲೆ ಹೊಸ ಬೆಳಕು.

ತನ್ನ ಪೂರ್ವ ಕಾಲದಲ್ಲಿ ತಾನೇ ಬುದ್ಧಿಪುರಸ್ಸರವಾಗಿ ನಡೆಸಿದ ಗಂಡು ಘಟನೆಗಳೆಲ್ಲವನ್ನೂ ಶಾಮಣ್ಣ ಸ್ಮರಿಸಲಾಗಲಿಲ್ಲ.

ನೆನಪೂ ಒಂದು ಲಿಮಿಟೆಡ್ ಕಂಪನಿಯ ಮೆಮೊರಂಡಮ್ ಅಲ್ಲವೆ ?

ಬಾಗಿಲಲ್ಲೇ ಜಗುಲಿಯ ಮೇಲೆ ಕಂಬಕ್ಕೆ ಆತು ಗೀತೆ ಓದುತ್ತ ಕುಳಿತ ಶಾಮಣ್ಣನನ್ನು ಅವಳು ಲೆಕ್ಕಿಸಲೇ ಇಲ್ಲ.

ಮೊಗಸಾಲೆಯ ನಡುವೆ ಹೋದಳು.

ನಡುಮನೆಯ ಬಾಗಿಲು ಮಾತ್ರ ಕಾಣುತ್ತಿತ್ತು.

ಅಲ್ಲಿಯೂ ಅದೇ ಪ್ರಶ್ನೆಯ ಗುಂಡು. ಮತ್ತೆ ಒಳಗಿನಿಂದ ಹೆಣ್ಣು ಜೀವ ಬಂತು.

ಅದರ ಕಿವಿಯ ಮುತ್ತಿನ ಓಲೆಯ ಮೇಲೆ ಇವಳ ಮಾತಿನ ಅಪ್ಪಳಿಕೆ,

"ಬರ್ರಿ ಇದ್ದಾರೆ, ಬರ್ರಿ"

ಆಗಂತುಕ ಜೀವಕ್ಕೆ ದೊಡ್ಡ ಆಶ್ವಾಸನೆ ದೊರೆಯಿತು. ಸ್ವಜನ ಸಹಾನುಭೂತಿ ದೊಡ್ಡ ಭಾರ ಇಳಿಸುತ್ತದೆ.

"ಇದು ನೋಡಿ ಯಾರೋ ಬಂದಿದ್ದಾರೆ. ನೀವು ಇದ್ದೀರೇನು ಎಂದು ಕೇಳುತ್ತಾರೆ, ಸ್ವಲ್ಪ ನೋಡಿರಿ. ಬೆಳಗಿನಿಂದ ಸಂಜೆಯುವರೆಗೆ ಆ ಹಾಳು ಗೀತಾ..."

Sri Vidyabharathi Book Centre, Sringeri

 CC-O. In Public Domain. Digitized by eGangotri

ಗೀತೆ ಓದಿದರೇನು ? ಹಾಡಿದರೇನು ?

ಪ್ರಾಯದ ಕಾಲದಲ್ಲಿ ಮಾಡ...

"ತಡೆ—ಸ್ವಲ್ಪ ತಡೆ. ವಿರೋಧಿಗಳ ಹಾಗೆ ಒಂದೇ ಸಮನೆ..."

ತಮ್ಮ ಕೈ ಹಿಡಿದವಳ ಪ್ರಚಂಡ ಪ್ರವಾಹವನ್ನು ಅವರು ತಡೆದರು.

"ಇದು ನೋಡಿ, ನೀವಿದ್ದೀರೇನು? ಎಂದು ಕೇಳುತ್ತ ಬಂದಿದ್ದಾರೆ..."

"ಹುಚ್ಚಿ, ಅವರು ನಾನಿಲ್ಲಿದ್ದೀನೇನು ಎಂದು ಕೇಳಲಿಲ್ಲ, ನಾನಿಲ್ಲವೇನು ಎಂದು ಕೇಳಿದರು."

ವಾಕ್ಯಾರ್ಥ ಆರಂಭವಾಯಿತು ಶಾಮಣ್ಣನದು.

"ಇರಲಿ ಬಿಡಿ. ಈಗ ಕೇಳಿ ಪಾಪ ಅವರು ಏನಂತಾರೆ..."

ಗೃಹಮಂತ್ರಿಗಳ ಆಜ್ಞಾನುವರ್ತಿಯಾದ ಶಾಮಣ್ಣ, ಬಂದ ಹೆಣ್ಣು ಮಗಳಿಗೆ ಕೂಡ ಹೇಳಿದ.

ಮುದುಕಿ ದಣಿದೂ ಹೋಗಿತ್ತು. ಯಾರು ಹೇಳದಿದ್ದರೂ ಅಲ್ಲೆ ಕುಕ್ಕರಿಸುವ ಅವಸ್ಥೆಯಲ್ಲಿದ್ದಳು.

"ಎಷ್ಟು ದೂರ ನಿಮ್ಮ ಊರು. ಸುತ್ತಲಿನ ನಾಲ್ಕು ಹಳ್ಳಿಯಲ್ಲಿ ಒಂದಾದರೂ ಬ್ರಾಹ್ಮಣರ ಮನೆ ಇರಬೇಡವೇ ? ಹಾಳಾಯಿತು. ಕಲಿ ಅವತಾರ ! ಬ್ರಾಹ್ಮಣರೇ ಹಾಳಾಗಿ ಹೋಗಹತ್ತಿರುವಾಗ ದೇವರಾದರೂ ಬಂದಾನೇ ಈ ಭೂಮಿಗೆ..."

ಮುದುಕಿಯ ಕಣ್ಣಿನಲ್ಲಿ ನೀರು.

ಮಣ್ಣು ನೆಲದಲ್ಲಿ ಹರಿದ ಹಳ್ಳ.

ತನ್ನ ಜೀವಮಾನದಲ್ಲಿ ಹಲವು ಸಲ ಈ ಕಣ್ಣೀರ ಹಳ್ಳದಿಂದ ಅವುಗಳ ಕಣ್ಣಿನ ಪ್ರದೇಶದಲ್ಲಿ ಕೊರಕಲು ಬಿದ್ದಿರಬೇಕು. ಈಗಲೋ ನಿರಿಗೆ ! ತೊಗಲು ಮುದುಡಿದೆ, ಹಣ್ಣಾಗಿದೆ. ಆದರೆ ಹಣ್ಣಾಗಿದ್ದರಿಂದ ಕಂಬನಿ ಬತ್ತಿಲ್ಲ.

ಬಂದವಳ ಕಣ್ಣಿನೊಳಗಿನ ನೀರು ನೋಡಿದ್ದೇ ಸಾಕು, ಶಾಮಣ್ಣನ ಧರ್ಮಪತ್ನಿಯ ಮೂಗಿನಲ್ಲಿ ಮೊದಲು ಸಿಂಬಳ ತಲೆದೋರಿತು. ಬಳಿಕ ತಡವೇ ಇಲ್ಲ ಕಣ್ಣೊ...

ಕಂಬನಿ ವಿಶೇಷವಾಗಿ ಸ್ತ್ರೀಯರಲ್ಲಿ ಸಾಂಕ್ರಾಮಿಕ. ಶಾಮಣ್ಣನ ಅರ್ಧಾಂಗಿ ಕೇಳಿದಳು,

Sri Vidyabharathi Book Centre, Sringeri

CC-O. In Public Domain. Digitized by eGangotri

"ಈಗ ನೀವು ಎಲ್ಲಿಂದ ಬಂದಿರಿ...?"

"ಒಂದು ಕಡೆಯಿಂದ ಆಗಿ ಬಂದಿದ್ದರೆ ಹೇಳಬೇಕು. ಏನು ಹೇಳಲಿ? ಎಲ್ಲಿಂದ ಬಂದಿದ್ದೇನೆ ಹೇಳಲಾರೆ. ಇಲ್ಲಿಗೆ ಬಂದಿದ್ದೇನೆ. ಇಷ್ಟೇಸಾಕು ತಾಯಿ."

ಮುದುಕಿ ಬಹಳ ನೊಂದಿದ್ದಾಳೆ ಎನ್ನುವುದು ಶಾಮಣ್ಣನಿಗೂ ತಿಳಿಯಿತು. "ನೋಡು ಇವರು ತುಂಬ ದಣಿದಿದ್ದಾರೆ. ಪಾಪ, ಮಡಿ ಹೆಂಗಸರು. ನೋಡು ನೀನೂ ಮೈತೊಳೆದುಕೊಂಡು ಅವರಿಗೂ ವ್ಯವಸ್ಥೆಮಾಡಿ ಊಟ ಮುಗಿಸು."

"ಏಳಿ, ನೀವೂ ಮೈ ತೊಳೆದುಕೊಳ್ಳಿ."

"ನಿಮ್ಮದಾಗಲಿ. ಬಳಿಕ ತೊಳೆದುಕೊಳ್ಳುತ್ತೇನೆ." ಶಾಮಣ್ಣನ ಹೆಂಡತಿ ಆಗಂತುಕ ಹೆಂಗಸಿನ ಮೇಲಿನ ಕನಿಕರದಿಂದ ಬೇಗನೆ ಸ್ನಾನದ ಮನೆಗೆ ಹೋದರು.

ಹುಟ್ಟಿನ ಮೂಲದಿಂದ ನಡೆದು ಬಂದ ಮಾತುಗಾರಿಕೆ ಈ ಇಳಿವಯಸ್ಸಿನಲ್ಲಿ ಇನ್ನೂ ಇಳುಕಲಿಗೆ ಬಿದ್ದ ನೀರು.

ಶಾಮಣ್ಣ ಗೀತೆಯಲ್ಲಿ ತೋರು ಬೆರಳು ಸಿಕ್ಕಿಸಿದಾತ ಇನ್ನೇನು ಈ ಮುದುಕಿಯ ಮಾತು ಮುಗಿಯಿತು ಗೀತೆ ಓದಬಹುದು ಎಂದು ಬೆರಳು ತೆಗೆದು ಗೀತೆಯನ್ನೊಮ್ಮೆ ನೋಡಿದ.

ಈತ ಪುಸ್ತಕದೊಳಗೆ ಸಿಕ್ಕರೆ ತನ್ನ ಪಾಡು ಸರಿಯಲ್ಲವೆಂದು ಬಗೆದ ಅವಳು,

"ಹಳ್ಳಿಯೊಳಗೆ ಈಗ ಬ್ರಾಹ್ಮಣರ ವಸತಿ ಕಡಿಮೆ ಆಗಿದೆ. ನೀವು ಬಹಳ ಪುಣ್ಯವಂತರೆಂದೇ ಇನ್ನೂ ಹಳ್ಳಿಯೊಳಗಿದ್ದೀರಿ..."

ಶಾಮಣ್ಣ ವಾಸ್ತವಿಕವಾಗಿ ಇದರ ವಿರುದ್ಧ ಅಭಿಪ್ರಾಯದವ.

ತಾನು ಹಳ್ಳಿ ಬಿಡುವುದು ಸಾಧ್ಯವಿದ್ದಿಲ್ಲ. ಹಳ್ಳಿಯಲ್ಲೆ ವಾರಕ್ಕೆ ತೀರ ಕಮ್ಮಿ ಎಂದರೆ ಒಂದು, ಒಂದೂವರೆ ಏಕಾದಶಿ ಅವನಿಗೆ ಇರುವುದೆಂದರೆ ಹಳೆಯದಾದ ಈ ಮೂರಿಗೆ ಮೂರುದ್ದ ಮನೆಯೊಂದೆ. ಅದು ಹಿಂದಿನ ಸ್ನಾನದ ಮನೆ ಬಿತ್ತು, ಈಗ ಹಿತ್ತಲಾಗಿದೆ.

ಮೊಗಸಾಲೆಯ ಮುಂದಿನ ಭಾಗ ಬಿತ್ತು.

ಅದೆಲ್ಲ ಬಯಲಾಗಿದೆ! ಒಟ್ಟು ಹಂಪೆಯ ಹಾಗೆ ಕಾಣುವ ಈ ಮನೆಯಲ್ಲಿ ಒಂದು ಕಣ್ಣು ಇಲ್ಲದ ಶಾಮಣ್ಣ ವಿರೂಪಾಕ್ಷ.

Sri Vidyabharathi Book Centre, Sringeri

 CC-O. In Public Domain. Digitized by eGangotri

"ಹಳ್ಳಿಯೊಳಗೆ ಬ್ರಾಹ್ಮಣರು ಇರುವುದೇ ಕಷ್ಟ. ಏನೊ ನಾವಿದ್ದೇವೆ ಅಂತ ಇದ್ದೇವೆ. ನಿಮ್ಮದು ಯಾವ ಊರು ತಾಯಿ ?"

ತನ್ನ ಊರು, ಮನೆ, ಸ್ಥಿತಿಯ ಬಗ್ಗೆ ಶಾಮಣ್ಣನಿಗೆ ಎಷ್ಟು ಅಸಹ್ಯತೆ ಇತ್ತು ಅದಕ್ಕಿಂತ ಹತ್ತುಮಡಿ ಈ ಹೆಂಗಸಿಗೆ ಎಂದು ಕಂಡಿತು.

ತನ್ನ ಊರು ತನ್ನದಲ್ಲವೆಂದ ಬಳಿಕ ಅದರ ಹೆಸರು, ದೆಸೆಯಿಂದ ದುಃಖ ಸಂಕಟಗಳ ಹೊರತು ಇನ್ನೇನಾಗುತ್ತದೆ ?

"ನನಗೂ, ಊರು, ಕೇರಿ, ಮನೆ ಮಾರು ಇತ್ತು."

ಶಾಮಣ್ಣನಿಗೆ ಅದನ್ನು ಕೇಳಲು ಆತುರ.

ಜೀವಕ್ಕೆ ತೊಗಲಿನಂತೆ ಅಂಟಿಕೊಂಡ ಸ್ವಭಾವ ಇದು.

ತನ್ನ ದುಃಖ ಕಡಿಮೆ ಮಾಡಿಕೊಳ್ಳಲು ಇನ್ನೊಬ್ಬರ ದುಃಖ ಕೇಳು ವುದು ಕೆದರುವುದು. ಇಲ್ಲವೆ ಬೇರೆಯವರನ್ನು ದುಃಖಕ್ಕೆ ಈಡು ಮಾಡು ವುದು...

ಶಾಮಣ್ಣ ಕಿವಿ ಅರಳಿಸಿ ಬಾಯಿ ತೆರೆದು ಅವಳ ತುಟಿ ಅಲುಗಾಡಿದ್ದನ್ನು ನೋಡುತ್ತಿದ್ದ.

ಆದರೆ ಮುದುಕಿಗೆ ಅಳುವುದರಲ್ಲಿ ಪ್ರಾಯ ಕಾಲದಲ್ಲಿ ತೋರಿದ ಉತ್ಸಾಹ ಈಗ ಉಳಿದಿರಲಿಲ್ಲ.

ಅವಳು ತಾನಾಗಿ ಮುಂದುವರಿಯಲಿಲ್ಲ.

ಶಾಮಣ್ಣನೇ ಕೇಳಿದ, "ನೀವು ನಿಮ್ಮ ಊರನ್ನು ಬಿಟ್ಟಿರಾ—?"

"ಶಾನುಭೋಗರೆ, ಅದನ್ನೆಲ್ಲ ನೀವು ಕೇಳಬೇಡಿರಿ. ನಾನೂ ಬಹಳ ದೊಡ್ಡ ಬದುಕು ಬದುಕಿದ್ದೇನೆ. ಹಲವು ಮುಖದ ಬದುಕು ಬದುಕಿದ್ದೇನೆ. ಕಡೆಗೆ ಯಾರು ದಿಕ್ಕಿಲ್ಲದೆ ಅಂತ್ಯದಲ್ಲಿ......"

ಶಾಮಣ್ಣನದು ಶಾನುಭೋಗನ ಬ್ರೈನ್. ಅದರಲ್ಲಿ ಒಮ್ಮೆಲೆ ಕೆಮ್ಮಿಂಚು ಸಂಚಾರವಾಯಿತು.

ಈಗ ಆತ ಈ ಮುದುಕಿಯ ಕತೆ ಕೇಳಲು ಉತ್ಸುಕನಾಗಿರಲಿಲ್ಲ. ಅವನ ತಲೆಯಲ್ಲಿ ತಿರುಗುತ್ತಿರುವ ಒಂದು ಚಕ್ರಕ್ಕೆ ಗತಿ ಸಿಕ್ಕಿತು, ಗಿರ್ರೆಂದು ತಿರುಗು ತ್ತಿತ್ತು. ಅದಕ್ಕೆ ಇನ್ನೊಂದು ಚಕ್ರ ಜೋಡಿಸಿ ಅದರ ಗತಿ ಹೆಚ್ಚಿಸಿದ, ಅದಕ್ಕೆ ಬೇರೊಂದು, ಬೇರೊಂದಕ್ಕೆ ಮತ್ತೊಂದು ಹೀಗೆ ಚಕ್ರದಿಂದ ಚಕ್ರ !

ಚಕ್ರಾಂಕಿತವಾದ ತಲೆಯ ಚಕ್ರವರ್ತಿ ಶಾಮಣ್ಣ ! ಶಾಮಣ್ಣನ ತಲೆ ಭಾರಿ ಜಂಕಶನ್ ನಿಲ್ದಾಣದ ಪ್ಲಾಟ್‌ಫಾರಂ !

Sri Vidyabharathi Book Centre, Sringeri

 CC-O. In Public Domain. Digitized by eGangotri

ಗಲಾಟೆ ಕಡಿಮೆಯಾದ ಮೇಲೆ ಶಾಂತವಾಗಿ ಕೇಳಿದ,

"ಇಷ್ಟು ಹಣ್ಣು ವಯಸ್ಸಿನಲ್ಲಿ ಕಾಲುನಡಿಗೆಯಿಂದ ಪ್ರವಾಸಮಾಡುತ್ತ ಎಲ್ಲಿಗೆ ಹೊರಟಿದ್ದೀರಿ..."

"ಶಾನುಭೋಗರೆ ನಾನು ಹೊರಟು ಬಹಳ ದಿನವಾಯಿತು. ಎಲ್ಲಿಗೂ ಮುಟ್ಟಿಲ್ಲ, ಮುಟ್ಟುತ್ತೇನೋ ಇಲ್ಲವೋ ಗೊತ್ತೂ ಇಲ್ಲ..."

ಮುದುಕಿ ಬಹಳ ಉದ್ವಿಗ್ನಳಾಗಿದ್ದಳು. ಶಾಮಣ್ಣನಿಗೆ ಅವಳ ಮಾತಿನ ಹರಿ ತಿಳಿದಿದ್ದರೂ ಅದನ್ನು ಗಮನಿಸದೆ ಸಾಮಾನ್ಯವಾಗಿಯೇ ಕೇಳಿದ.

ಅವಳ ಹಳೆಯ ಕಿಚ್ಚನ್ನೆಲ್ಲ ಕೆದರಿ ಆ ಹಣ್ಣು ತೊಗಲಿಗೆ ಏಕೆ ಬಿಸಿ ತಾಗಿಸಬೇಕು ಎಂಬುದಕ್ಕಿಂತ, ಅದನ್ನು ತೆಗೆದುಕೊಂಡು ತನಗೇನಾಗಬೇಕು ಆ ಬೆಂಕಿಯಲ್ಲಿ ತನ್ನ ಬೇಳೆ ಬೇಯಲಾರದು ಎಂದು ಅದರ ಜಾಡು ಬಿಟ್ಟು ಕೇಳಿದ.

"ನೀವು ಎಲ್ಲಿಂದಲೇ ಹೊರಡಿ. ಪಾಪ, ತುಂಬ ನೊಂದಿದ್ದೀರಿ. ಕಷ್ಟ ಮನುಷ್ಯರಿಗೆ ಬರದೆ ಪಶುವಿಗೆ ಬರುತ್ತದೆಯೇ? ನೀವು ಎಲ್ಲಿಗೆ ಮುಟ್ಟಬೇಕು ಹೇಳಿ ನಿಮ್ಮನ್ನು ನಾನು ತಲುಪಿಸುತ್ತೇನೆ.

"ದೇವರು, ಹಳ್ಳಿಯಲ್ಲಿ ಬದುಕುವ ನಮಗೆ ಇನ್ನೂ ಅಷ್ಟು ಧರ್ಮಬುದ್ಧಿ ಉಳಿಸಿದ್ದಾನೆ. ನಮ್ಮ ಮನೆತನಗಳಲ್ಲಿ ಹಿರಿಯರು ಮಾಡಿದ ಪುಣ್ಯ ಸವೆದಿಲ್ಲವೆಂದೇ ಅದು ನಮ್ಮಲ್ಲಿ ಉಳಿದಿದೆ. ನೀವು ಎಲ್ಲಿಗೆ ಹೋಗಬೇಕು ಹೇಳಿ. ನಮ್ಮ ಕೈಲಾದ್ದನ್ನು ನಾನು ಮಾಡುತ್ತೇನೆ."

ಶಾಮಣ್ಣ ಈ ಮುದುಕಿಗೆ ಹೀಗೆ ಮಾತನಾಡಿದ್ದಾನೆ ಎಂದಲ್ಲ, ಅವನದು ಈಗ ಶೂನ್ಯಸಂಪಾದನೆಯಾದರೂ ಸಾಲದ ಭಾರದಿಂದ ಅವನ ಬದುಕಿನ ಬಂಡಿ ಮರಳಲ್ಲಿ ಎಳೆಯಲಾರದೆ ಸಿಕ್ಕು ಬಿದ್ದಿದ್ದರೂ ಇನ್ನೊಬ್ಬರ ವಿಷಯದಲ್ಲಿ ಆತನಿಗೆ ವಚನೇಕಾ ದರಿದ್ರತಾ?

ಮಾತು ಮಾತ್ರ ಹಳೆಯ ಮಹಾರಾಜರ ರೀತಿಯಲ್ಲಿ. ಶಾಮಣ್ಣನ ಮೂರ್ತಿ ಕಾವಿನಿಂದ ಮುದುಕಿಯ ಬೆಣ್ಣೆ ಮನಸ್ಸು ಕರಗಿತು.

"ಶಾನುಭೋಗರೆ ನನ್ನದು ಬಹುದಿನದ ಬಯಕೆ—ಕಾಶಿಗೆ ಹೋಗಬೇಕೆಂದು. ನನ್ನ ಕೈ ನಡೆಯುವ ಕಾಲದಲ್ಲಿ ಬೇಕಾದದ್ದನ್ನು ಮಾಡಿದೆ. ಇನ್ನು ಕೊನೆಗಾಲ ಬಂತು; ಅಲ್ಲಲ್ಲಿ ಬಿದ್ದು ಸತ್ತರೆ ನನ್ನ ಹೆಣ ನಾಯಿ ನರಿ ಪಾಲು. ಕಾಶಿಯಲ್ಲಿ ಸಾಯಬೇಕೆಂದು ಹೊರಟಿದ್ದೇನೆ. ಅಲ್ಲಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಪುಣ್ಯದ ಗಂಟು ಕಟ್ಟಿಕೊಂಡು ಮರಳಿ ಬಂದು ಊರಲ್ಲಿ ಕುಳಿತು ತಿನ್ನಬೇಕೆನ್ನುವವಳಲ್ಲ.

ನನ್ನದೆನ್ನುವುದು ಏನೂ ಇಲ್ಲ.

ನನ್ನವರೂ ಯಾರು ಇಲ್ಲ.

ದೇವರು ನಿಮಗೆ ಧರ್ಮಬುದ್ಧಿ ಕೊಟ್ಟಿದ್ದಾನೆ ಶಾನುಭೋಗರೆ. ನನ್ನನ್ನು ಕಾಶಿಗೆ ಮುಟ್ಟಿಸಿದರೆ ಭಗವಂತ ನಿಮಗೆ ಒಳ್ಳೆಯದನ್ನೇ ಮಾಡುತ್ತಾನೆ..."

ಶಾನುಭೋಗರ ತಲೆಯಲ್ಲಿ ಯಂತ್ರವ ಗಲಭೆ ಇನ್ನೂ ನಡೆದಿತ್ತು. ಯಂತ್ರ ಕ್ರಮಬದ್ಧವಾಗಿ ತಿರುಗುತ್ತಿದೆ, ಅದರ ಸಪ್ಪಳದಿಂದ ಕಿವಿ ತೆರೆ ಹರಿದು ಹೋದರೂ ಯಾಂತ್ರಿಕನಿಗೆ ಹಿಗ್ಗೇ ಹೊರತು ಬೇಜಾರಿಲ್ಲ.

ಶಾನುಭೋಗರು ಯಂತ್ರಾರೂಢರಾಗಿ ಮುಂದುವರಿಯುತ್ತಿದ್ದರು.

"ನಿಮ್ಮನ್ನು ಕಾಶಿಗೆ ಮುಟ್ಟಿಸುವ ಹೊಣೆ ನನ್ನದು. ನೀವು ನಿಶ್ಚಿಂತರಾಗಿ ಎರಡು ದಿನ ಇಲ್ಲಿ ಇರಿ..."

ಮುದುಕಿಯ ಮುಖದ ಮೇಲೆ ಹೊಸ ಹರೆಯ ಉಕ್ಕಿತು.

ಅವಳಿಗೆ ಯಾರು ಹೀಗೆ ಹೇಳಿದ್ದರು ?

ತಾನೂ ಬಯಸಿದ್ದರೂ ಸಾಧ್ಯವಿದ್ದಿಲ್ಲ.

"ಒಂದೆರಡು ದಿನ ಏಕೆ ಎಂಟು ದಿನ ನಿಲ್ಲುತ್ತೇನೆ."

"ನನ್ನನ್ನು ಕಾಶಿಗೆ ಒಗೆದು ಬಿಡು; ದೇವರು ನಿನಗೆ ಅನಂತ ಹಸ್ತದಿಂದ ಕೊಡುತ್ತಾನೆ."

"ಎಲ್ಲವೂ ಭಗವಂತನ ಇಚ್ಛೆ, ನೀವು ಎಲ್ಲಿಯವರೋ ಪಾಪ ! ನಮ್ಮ ಮನೆಗೆ ಬರಬೇಕೆಂದರೇನು, ನನ್ನ ಮನಸ್ಸಿನಲ್ಲೂ ನಿಮ್ಮನ್ನು ಕಾಶಿಗೆ ಕಳಿಸುವ ಪ್ರೇರಣೆ ಆಗಬೇಕೆಂದರೆ ಏನು, ಎಲ್ಲವೂ ಶ್ರೀ ಹರಿಯ ಇಚ್ಛೆ.

"ಕಪಟನಾಟಕ ಸೂತ್ರಧಾರಿಯಾದ ಆ ಪರಮಾತ್ಮನ ಆದೇಶ..."

ಭಾಷಣದ ಮುಂದಿನ ಭಾಗ ಮುದುಕಿಗೆ ಭಾರ ಎನ್ನಿಸಿತು. ಗಮನಿಸಿದ ಶಾಮಣ್ಣ, "ಹೋಗಿರಿ, ನೀವೂ ಸ್ನಾನಮಾಡಿ ಕೊಳ್ಳಿರಿ..."

ಸ್ನಾನ ಊಟ ಮುಗಿದವು.

ಮುದುಕಿಗೆ ತುಂಬ ಆಯಾಸವಾಗಿತ್ತು. ನಡುಮನೆಯಲ್ಲಿ ಚಾಪೆಯ ಮೇಲೆ ಮಲಗಿದವಳೆ ಕಣ್ಣು ಮುಚ್ಚಿದಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕನಸಿನಲ್ಲೂ ಕಾಶಿ ಚಿಂತೆಯೆ ?

ನಿದ್ರೆಯಲ್ಲಿಯೂ ಮುದುಕಿಗೆ ತನ್ನ ಬದುಕಿನ ಭೂತದ ಕಾಟ ತಪ್ಪಲಿಲ್ಲ.

ಮುಂಬೈಯಲ್ಲಿ ತಾನು ಆ ದಿನ ಸ್ವಾಮಿಗಳ ಪುರಾಣ ಕೇಳಲು ಹೋದಾಗಿನಿಂದ ಆರಂಭ. ಪುರಾಣ ಕೇಳುತ್ತಿದ್ದಂತೆಯೇ ಸ್ವಾಮಿಗಳ ಬಗ್ಗೆ ಅವಳಿಗೆ ಅಪಾರವಾದ ಭಕ್ತಿ !

ಅಪರಂಪಾರವಾದ ಜನ ಸಾಮುದಾಯದಲ್ಲಿ ಸ್ವಾಮಿಗಳು ತನ್ನನ್ನೆ ಕರೆದದ್ದು, ಅದೂ ಹೆಸರುಗೊಂಡು ! ತಾನು ಹೋಗಿ ನೆಲ ಮುಟ್ಟಿ ನಮಸ್ಕರಿಸಿದ್ದಳು.

"ಏನಮ್ಮಾ ! ಧರ್ಮವನ್ನು ನೀನು ನಂಬಿದ್ದೀ. ಧರ್ಮವೂ ನಿನ್ನ ಹತ್ತಿರ ಬರಬೇಕು ಎಂದೂ ತವಕಿಸುತ್ತದೆ. ಆದರೆ—ನಡುವೆ ತೊಂದರೆ ಇದೆ. ಅದು ದೂರಾಗಬೇಕು.

ನೀನು ಪರಮ ಧಾರ್ಮಿಕಳಾಗಬೇಕೆಂಬುವುದೂ ಭಗವಂತನ ಇಚ್ಛೆ ಇದೆ. ಅಮ್ಮಾ ಈ ಲೋಕದಲ್ಲಿ ಭಗವಂತನ ಇಚ್ಛೆಯೆ ಗೆಲ್ಲುತ್ತದೆ. ನಡುವೆ ಬಂದಿರುವ ಮಾಯೆಗಳೆಲ್ಲ ತೊಲಗುತ್ತವೆ."

ತಾನಿಳಿದುಕೊಂಡ ಜಾಗೆಗೆ ಬಂದ ಅವಳು ಸ್ವಾಮಿಗಳ ತ್ರಿಕಾಲಜ್ಞಾನದ ಬಗ್ಗೆ ಮುಗ್ಧಳಾಗಿ ಹೋದಳು. ಜೀವನದಲ್ಲಿ ಹೊಸ ಅಧ್ಯಾಯ ಪ್ರಾರಂಭ ವಾಗುವ ಲಕ್ಷಣ ತೋರಹತ್ತಿದವು.

ಆ ದಿನದಿಂದ ನಿತ್ಯವೂ ಬೇಗನೆ ಸ್ವಾಮಿಗಳ ಸನ್ನಿಧಿಗೆ ಹೋಗುತ್ತಾಳೆ.

ಇನ್ನೊಂದು ದಿನ ಸ್ವಾಮಿಗಳು ಅವಳನ್ನು ಮುಂದೆ ಕರೆದು,

"ತಾಯಿ ನಿನ್ನ ಮನಸ್ಸಿನಲ್ಲಿದ್ದದು ನಡೆಯಲೇಬೇಕು. ದೇವರೆ ನಮಗೆ ಧರ್ಮದ ಅಭಿಲಾಷೆ ಕೊಟ್ಟಿರುತ್ತಾನೆ.

ತೀರ್ಥಗಳಲ್ಲಿ ಭಗವಂತ ಜಾಗೃತನಿರುತ್ತಾನೆ. ಕ್ಷೇತ್ರಗಳಲ್ಲಿ ಪರಮಾತ್ಮನ ನಿವಾಸ ವ್ಯಕ್ತವಾಗಿ ಇರುತ್ತದೆ. ನಿನ್ನ ಮನಸ್ಸಿನಲ್ಲಿರುವ ತೀರ್ಥಯಾತ್ರೆಯನ್ನು ನೀನು ನಡೆಸಲೇಬೇಕು.

ಅಮ್ಮಾ ಭಗವಂತನನ್ನು ನೀನು ಕಾಣಲು ಎಷ್ಟು ಕಾತರಳಾಗಿದ್ದೀಯೋ ಭಗವಂತನೂ ನಿನ್ನನ್ನು ನೋಡಲು ಅಷ್ಟೇ ಉತ್ಸುಕನಿದ್ದಾನೆ..."

Sri Vidyabharathi Book Centre, Sringeri

CC-O. In Public Domain. Digitized by eGangotri

"ಮಹಾಸ್ವಾಮಿ, ನನ್ನ ಅಭಿಲಾಷೆ ಕೈಗೂಡುವ ಲಕ್ಷಣವಿಲ್ಲ. ನಾನು ಬಹು ತೊಂದರೆಯಲ್ಲಿದ್ದೇನೆ. ಆ ಪುಣ್ಯ ನನ್ನದಾಗಿಲ್ಲವೆಂದೇ ನನಗೆ ಅನ್ನಿಸುತ್ತದೆ."

"ಇದು ದುರ್ಬಲತೆ. ದುರ್ಬಲತೆ ಪಾಪಿಗಳ ಸೋಂಕು ರೋಗ ! ಅದನ್ನು ನೀನು ನೀಗಲೇಬೇಕು.

ದೇವರಿಗಾಗಿ ಮನೆಮಾರು, ಧನಕನಕ, ಎಲ್ಲವನ್ನೂ ಈಡಾಡಬೇಕು. ಏಕೆಂದರೆ ಇದೆಲ್ಲವನ್ನು ಪರಮಾತ್ಮನೇ ಕೊಟ್ಟಿರುವನಲ್ಲವೆ. ಅವನಿಗಾಗಿ ಯಾವ ತ್ಯಾಗಕ್ಕೂ ನಾವು ಸಿದ್ಧರಾದರೇನೇ ಸರ್ವ ಭೋಗಗಳನ್ನೂ ಆತ ನಮಗಾಗಿ ಕರುಣಿಸುತ್ತಾನೆ.

ಪರಮಾತ್ಮನಿಗಾಗಿ ಧನಕನಕ ತೊರೆಯಬೇಕು. ಪರಮಾತ್ಮನಿಗಾಗಿ ಲೌಕಿಕ ಬಂಧನಗಳನ್ನು ಹರಿದೊಗೆದು ಸಾಗಬೇಕು."

"ಪೂಜ್ಯರೆ ಎಲ್ಲದಕ್ಕೂ ಧೈರ್ಯವನ್ನು ನೀವು ಕರುಣಿಸಬೇಕು. ದಾರಿ ತೋರಿಸಬೇಕು. ಮುಂದೆ ನಡೆಸಬೇಕು."

"ಏನಮ್ಮಾ ಲೋಕದಲ್ಲಿ, ಭಗವಂತನು ಗುರುಗಳೆಂಬುವರನ್ನು ಯಾಕೆ ಕಳಿಸಿದ್ದಾನೆ. ಲೋಕದಲ್ಲಿ ದಾರಿ ತಪ್ಪಿ ಅಲೆದಾಡುವ ಕುರುಡು ಜೀವಿಗಳಿಗೆ ದಾರಿ ತೋರಿಸಲು, ಕಣ್ಣು ಕೊಡಲು, ನೀವು ದೇವರನ್ನು ನಂಬುವುದಾದರೆ ಗುರುಗಳ ಮೇಲೆಯೂ ವಿಶ್ವಾಸ ಬೇಕು."

"ಎಂತಹ ಮಾತು ಪೂಜ್ಯರೆ ! ತಾವು ದೇವ ಸಮಾನರೆ. ತಾವೇ ನನಗೆ ಗತಿ, ಮತಿ......"

ಮರುದಿನವೆ ತಾನು ಸ್ವಾಮಿಗಳ ಜತೆಗೆ ಬೆನ್ನು ಹತ್ತಿ ಹೊರಟದ್ದು.

ಸ್ವಾಮಿಗಳು ಗುರುಗಳು. ದೇವರ ಪ್ರತಿನಿಧಿಗಳು. ಭಗವಂತನು ಲೋಕದಲ್ಲಿ ದಾರಿತಪ್ಪಿ ಅಲೆದಾಡುವ ಜೀವಿಗಳಿಗೆ ಕಣ್ಣು ಕೊಡಲು ಮಾತ್ರವಲ್ಲ ದಾರಿ ತೋರಿಸಲು, ಗುರಿಗೆ ಮುಟ್ಟಿಸಲು ಕೈಹಿಡಿದು ನಡೆಸುವುದೇ ಗುರುಗಳ ಕೆಲಸ...

ಸ್ವಾಮಿಗಳು ನನ್ನ ಕೈಹಿಡಿದರು.

ಆದರೆ ನಡೆಸಲಿಲ್ಲ. ನಿಲ್ಲಿಸಿದರು.

ಕೈಯೊಳಗಿನಿಂದ ಕಿತ್ತುಕೊಂಡರು. ಬರಿಗೈ ಮಾಡಿದರು.

ಇನ್ನೂ ಏನೋ ಮಾಡಿದರು. ಅದೆಲ್ಲ ಅವಳ ಕಣ್ಣೆದುರು ಬಂದಾಗ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಸಹ್ಯವೆನ್ನಿಸಿ ಮಗ್ಗುಲಾದಳು. ಶಾನುಗಭೋಗರ ಹೆಂಡತಿ ಬಹಳ ದಣಿದವಳೆಂದು ಕನಿಕರಪಟ್ಟು ತನ್ನ ಕೆಲಸದಲ್ಲಿ ತೊಡಗಿದಳು.

ಸ್ವಾಮಿಗಳು ದೇವರ ದೂತರು, ಅಲ್ಲ, ತಾನು ದೇವಸದೃಶರೇ ಎಂದು ತಿಳಿದವಳು. ಅವರು ತೋರಿಸಿದ ದಾರಿ ಯಾವುದು ?

ಸಮುದ್ರದ್ದು......

ಗಂಗಾಗೆ ಸಮುದ್ರವೇ ಕೊನೆಯ ಆಸರೆ ಅಲ್ಲದೆ ಮತ್ತೆಲ್ಲಿ...

ಸ್ವಾಮಿಗಳದೇನು ತಪ್ಪು ?

ಅವರು ಆಗಾಗ ಹೇಳುತ್ತಿದ್ದರು :

"ಭಗವಂತ ತನ್ನ ಪ್ರೀತಿಯ ಜನರ ಸರ್ವಸ್ವವನ್ನೂ ಅಪಹರಿಸುತ್ತಾನೆ. ಅವರಿಗೆ ಪರಿಪರಿಯ ಪೀಡೆ ಕೊಡುತ್ತಾನೆ. ಬಿಕ್ಕೆ ಬೇಡಲು ಹಚ್ಚುತ್ತಾನೆ..."

ಇಂದು ನನ್ನ ಅವಸ್ಥೆ ಸರಿಯಾಗಿ ಅವರು ಹೇಳುವಂತೆ ಇದೆ. ಇದು ಭಗವಂತನ ಪ್ರೀತಿಯಿಂದಲೇ ಆದದ್ದೇ ?

ಹಾಗಾದರೆ ನನಗೇಕೆ ಸಮಾಧಾನವಿಲ್ಲ ?

ಶೀನ ಸಾವಿರ ಸಲ ಹೇಳಿದ್ದ :

"ಗಂಗಾ, ತಲೆ ಇಲ್ಲದಿದ್ದರೆ ಸುಖ ಸಿಕ್ಕುವುದಿಲ್ಲ. ಸುಖವನ್ನು ಹುಡುಕುವವರಿಗೆ ತಮ್ಮ ಹೆಗಲಮೇಲೆ ತಲೆ ಇದ್ದದ್ದು ಖಾತ್ರಿ ಇದ್ದರೆ ಸಿಕ್ಕೇಸಿಕ್ಕುತ್ತದೆ. ಆಗ ಹುಡುಕುವುದೂ ಅಗತ್ಯವಿಲ್ಲ; ಅದು ಕೈಯಲ್ಲಿಯೇ ಇದೆ."

ಶೀನ ಇಂತಹ ಮಾತನ್ನು ಒಂದಲ್ಲ; ಸಾವಿರ ಸಲ ಹೇಳಿದ್ದ. ಶೀನನ ಮಾತನ್ನು ತಲೆತಿರುಕತನ ಎಂದಿದ್ದೆ.

ಅದು ನಿಜವೆ ? ಯಾಕಿರಬಾರದು ?

ಸ್ವಾಮಿಗಳು ನನ್ನ ಚಿನ್ನ ದೋಚಿ, ಪ್ರಾಯ ಹೀರಿಕೊಂಡರು ಎಂದು ದ್ವೇಷದಿಂದ ಅನ್ನಲೆ ? ನಾನು ಕೆಟ್ಟೆ ಎಂದು. ದೇವರನ್ನು, ಸ್ವಾಮಿಗಳನ್ನು ಈಗಾದರೂ ತಪ್ಪು ತಿಳಿದುಕೊಳ್ಳಬಾರದು.

ಭಗವಂತನು ಸ್ವಾಮಿಗಳ ರೂಪದಿಂದ ಬಂದು ನನ್ನನ್ನು ಪರೀಕ್ಷಿಸಿರಬಹುದೆ ?

ಅನೇಕ ಪುರಾಣಗಳಲ್ಲಿ ಹಾಗೆ ಆತ ಪರೀಕ್ಷಿಸುತ್ತಾನೆ ಎಂದು ಹೇಳಿದೆ. ತಾನು ತಪ್ಪು ಮಾಡಿದ್ದೇನೆ. ಸ್ವಾಮಿಗಳನ್ನು ಇನ್ನೆಂದೂ ನಿಂದಿಸುವುದಿಲ್ಲ. ಅವರು ನನ್ನನ್ನು ವಂಚಿಸಿರಬೇಕೇ ? ನಾನು ಮುಂಬೈಯಲ್ಲಿ ದೂರ ಕುಳಿತಾಗ ನನ್ನ ಹೆಸರಿನಿಂದಲೇ ಕರೆಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ನನ್ನ ಹೆಸರು ! ನನ್ನ ಮನದಲ್ಲಿದ್ದ ಬಯಕೆ, ಆಶೆ, ಗುರಿ ಎಲ್ಲವೂ ಅವರಿಗೆ ಪಾರದರ್ಶಕವಿತ್ತು.

ಅವರದು ತ್ರಿಕಾಲಜ್ಞಾನ ನಿಜ. ಶಾಂತಂ ! ಪಾಪಂ !! ಶೀನ ಎಂದಿನಂತೆ ನಾಸ್ತಿಕನಾಗಿ ನನಗೆ ಏನೋ ಹೇಳುತ್ತಿದ್ದ. ಅವನದು ಬರಿ ಬಯಲು ಬುದ್ಧಿ. ಯಾವಾಗಲು ಕೊರಡು ಅನಿಸುವವನೆ. ಸ್ವಾಮಿಗಳಲ್ಲಿ ನಾನು ಭಕ್ತಿ ಮಾಡಿದ್ದು ಸರಿಯೆ.

"ಗಂಗಾ, ಈ ಸ್ವಾಮಿಗಳದೆಲ್ಲ ಒಂದು ಮೋಸ. ನೀನು ಹೆಂಗಸು, ಮುಂಬೈಯಲ್ಲಿ ನಿನ್ನ ಪುರಾಣದ ಸ್ನೇಹಿತರ ಮುಂದೆ ನೀನು ನಿನ್ನ ಬಗ್ಗೆ ಹೇಳಿದ್ದೆಲ್ಲ ತಿರುಗಿ ನಿನಗೆ ತಲುಪುತ್ತದೆ. ಸ್ವಾಮಿಗಳ ಜ್ಞಾನವೆಲ್ಲ ಬುರುಡೆ... ನಂಬಬೇಡ..."

ಶೀನನ ಮಾತು ನನಗೊಂದು ಬೆಂಕಿಯ ಕಂಬ. ಅದು ನಿಗಿ ನಿಗಿ ಸುಡುತ್ತಿತ್ತು. ಅಂತೆಯೆ ನಾನು ಅದರಿಂದ ದೂರವಿದ್ದೆ.

ಸ್ವಾಮಿಗಳದೊ ! ನನಗೆ ಕಾದ ಮೈಗೆ ತಂಪು ; ಸೋತ ಮೈಗೆ ಕಾವು ! ಹಿತಕರ.

ನಾನು ಶೀನನನ್ನು ಬಿಟ್ಟೆ ! ಸ್ವಾಮಿಗಳ ಬೆನ್ನು ಹತ್ತಿದೆ.

ಶೀನ—ಸ್ವಾಮಿಗಳು.

ಶೀನ ನನ್ನನ್ನು ಬೈಯ್ಯುತ್ತಿದ್ದ. ಹರಿದು ತಿನ್ನುತ್ತಿದ್ದ, ನನಗಾಗಿ ಜೀವವನ್ನೂ ಕೊಡುತ್ತಿದ್ದ. ಸ್ವಾಮಿ ನನ್ನನ್ನು ಹೊಗಳಿದರು; ಹರಿದು ತಿಂದರು.

ಆದರೆ ನನ್ನ ಮನಸ್ಸಿನಲ್ಲಿ ಇವರಿಬ್ಬರ ತೂಕ ಮಾಡಿದೆ. ನಾನು ಹುಚ್ಚಿಯಾಗಿದ್ದೇನೆ; ಎಂದೆ, ಶೀನನನ್ನು ವಂಚಿಸಿ ಸ್ವಾಮಿಯನ್ನು ನಂಬಿ ಬಂದೆ ಅಲ್ಲವೆ ?

ಆಯಿತು ಶೀನನಲ್ಲಿಗೆ ನಾನೇಕೆ ಹೋಗಬಾರದು ? ಆತನ ಔದಾರ್ಯ ದೊಡ್ಡದು ! ಅವನ ತ್ಯಾಗಕ್ಕೆ ಸಮ ಇಲ್ಲ.

ಇಂದು ಶೀನ ನನ್ನನ್ನು ಕರೆದುಕೊಂಡಾನೆಯೆ ? ಅವನು ಗಂಡಸು ! ತೊಗಲು ಮುದ್ದೆಯಾದ ಹೆಂಗಸನ್ನು ಕರೆದು ಆದರಿಸುವನೆ ?

ಗಂಗಾಗೆ ಹುಚ್ಚು ವಿಚಾರಗಳ ನೆರೆ ಬಂತು.

ಬಹಳ ದೂರ ತೇಲಿಹೋಗಿದ್ದಳು.

ಆ ದಿನ ಶೀನ ಹೇಳಿದ ಮಾತ...

Sri Vidyabharathi Book Centre, Sringeri

CC-O. In Public Domain. Digitized by eGangotri

"ಗಂಗಾ, ಜೀವನದಲ್ಲಿ ಲೈಂಗಿಕತೆ ಎಂಬುದು ಬಹಳ ವ್ಯಾಪಕವಾದ ಶಕ್ತಿಯಲ್ಲ, ಅದಲ್ಲದೆ ಇರುವ ಜೀವನವೇ ಬಹಳ ದೊಡ್ಡದಿದೆ. ಅದೂ ಸಾಮಾನ್ಯ ಜೀವನದ ಅಗತ್ಯವಾದ ಭಾಗವೊಂದು..."

ನನಗೇನೂ ತಿಳಿಯಲಿಲ್ಲ. ಶೀನ, ನಿಷ್ಠುರ ಒರಟು ಎನ್ನುವುದೊಂದೇ ತಿಳಿಯಿತು.

ಶೀನ ಖಂಡಿತ ನನ್ನನ್ನು ಒಪ್ಪುತ್ತಾನೆ.

ಹೋಗಲೆ...?

ಮನಸ್ಸು ಸಿದ್ಧವಿಲ್ಲ.

ಯಾಕಾದೀತು ?

ಇದಕ್ಕೆ ಶೀನ ಪದೇ ಪದೇ ಕಾರಣ ಹೇಳುತ್ತಿದ್ದ.

"ಗಂಗಾ, ಹೆಂಗಸಿನ ಎದೆ ಪುಕ್ಕಲು, ಅದಿರಬಾರದು. ಎದೆಯಿಂದ ನೀನು ಏನನ್ನಾದರೂ ಹೊರನೂಕುತ್ತಿದ್ದರೆ ಮೊದಲು ಈ ಪುಕ್ಕಲುತನ ಹೊರ ನೂಕು. ನಾನು ಭಕ್ತಿ ಇರಬಾರದೆನ್ನುವುದಿಲ್ಲ. ನೀತಿ ಕೆಟ್ಟುದೂ ಎನ್ನುವುದಿಲ್ಲ. ಎಲ್ಲದರ ಹಿಂದೆ ನಿನಗಿದ್ದ ಅಂಜಿಕೆಹೋಗಬೇಕು...?

ಅಂಜಿಕೆ ಹೋಗಬಹುದೆ ?

ಸಾಧ್ಯವಿಲ್ಲ ! ದೇವರ ಅಂಜಿಕೆ ಇರಬೇಕು. ಧರ್ಮದ ಅಂಜಿಕೆ ಅಗತ್ಯ. ಶೀನ ಏನು ತಲೆ ಹೇಳುತ್ತಾನೆ. ಶೀನನಿಗೇನಿದೆ ? ಲಗಾಮಿಲ್ಲದ ಅವಿಚಾರಿ.

ಅಂದು ನನಗೆ ಚಿನ್ನ ತಂದುಕೊಟ್ಟ.

ಕಳವಿನ ಚಿನ್ನ ಅದು, ಪಾಪಿಯ ವಸ್ತು ನನ್ನನ್ನೂ ಪಾಪಿಯನ್ನಾಗಿ ಮಾಡಿತು.

ಕಳವಿನ ವಸ್ತು ಇಟ್ಟುಕೊಳ್ಳುವುದೂ ಒಂದು ಬಗೆಯ ಕಳ್ಳತನವೇ ಅಲ್ಲವೇ ? ಅವನು ಕೊಟ್ಟ ಚಿನ್ನ ಬರಿ ತಾನು ಕಳೆದು ಹೋಗಲಿಲ್ಲ. ನನ್ನ ಮೊದಲಿನ ವಸ್ತುವನ್ನೂ ತೆಗೆದುಕೊಂಡು ಹಾಳಾಯಿತು.

ಬರಿ ಚಿನ್ನ ಹೋಗಲಿಲ್ಲ; ಮನಸ್ಸಿಗೆ ಬರೆ ಎಳೆಯಿತು. ಸೆರಗಿನಲ್ಲಿ ಪಾಪದ ಬೆಂಕಿ ಕಟ್ಟಿಹೋಯಿತು.

ಭಯ ಹೋಗಬೇಕೆಂದರೇನು ?

ಕಳ್ಳತನ, ಅನೀತಿಗೆ ಭಯಪಡದಿದ್ದರೆ ಪಾಪದ ಹೊರತು ಇನ್ನೇನು ಸಂಪಾದನೆಯಾದೀತು ? ಶೀನನ ಸೆರಗು ಹರಿದುಕೊಂಡದ್ದು ಸುಖವೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಆಯಿತು. ಇಲ್ಲದಿದ್ದರೆ ಹೀಗೆ ಸತ್ತು ಪಿಶಾಚಿಯಾಗಿ ಹುಟ್ಟಬಹುದಿತ್ತು. ಗಂಗಾ ಹಲವು ವಿಧದಿಂದ ವಿಚಾರಿಸಿದಳು.

ಆದರೆ ಮತ್ತೆ ಶೀನ ಹೇಗೋ ಬಂದ ಮನಸ್ಸಿನಲ್ಲಿ. ತನ್ನನ್ನು ಕಂಡೊಡನೆಯೇ ಸುಟ್ಟು ಹಾಕುವನೆಂದು ಹೆದರಿದ್ದ ಗಂಗಾ ಕೆಳಗೆ ಮುಖ ಹಾಕಿದ್ದಳು.

"ಮತ್ತೆ ಬಂದೆಯಾ?"

"ಇಲ್ಲ; ಹೋಗುವೆ."

"ಇಲ್ಲ ಹೋಗುವೆ."

ಎಂದಾಗಲೆ ಗಂಗಾನಿಗೆ ಎಚ್ಚರ. ಮಗ್ಗುಲದಲ್ಲಿ ಏನೋ ಸ್ವಚ್ಛ ಮಾಡುತ್ತ ಕುಳಿತ ಶಾನುಭೋಗರ ಹೆಂಡತಿಗೆ ಆ ಮಾತು ಕೇಳಿಸಿತು.

"ಪಾಪ! ನಿಮಗೆ ಕನಸಿನಲ್ಲೂ ಕಾಶಿಯದೇ ನೆನಪು ಕಾಣಿಸುತ್ತದೆ..."

ಕಣ್ಣರಳಿಸಿ ನೋಡಿದಳು ಗಂಗಾ. ಹಗಲಿನ ತನ್ನ ಕನಸಿಗೆ ತನಗೇ ನಾಚಿಕೆಯಾಯಿತು.

ಶಾನುಭೋಗರ ಮನೆಯಲ್ಲಿ ನಾಲ್ಕು ದಿನ ಕಳೆದವು. ಒಂದು ದಿನ ಶಾಮಣ್ಣ ಗಂಗಾನ ಬಳಿಗೆ ಬಂದು—

"ನೀವು ಕಾಶೀಯಾತ್ರೆಗೆ ಹೊರಟವರು, ನಿಮ್ಮನ್ನು ಕಳಿಸುವ ಕೆಲಸ ನನ್ನದು.

ಅಷ್ಟು ಪುಣ್ಯದ ಕೆಲಸ ಮಾಡುವವರು ನನ್ನ ಮೇಲೆ ಉಪಕಾರ ಮಾಡುತ್ತೀರಾ?"

"ಈ ಪಾಪಿಯಿಂದ ಏನಾಗಬೇಕು ಶಾನುಭೋಗರೆ. ನಗೆಯಾಡಬೇಡಿರಿ."

"ಇಲ್ಲಮ್ಮ ನಿಮ್ಮಿಂದ ಉಪಕಾರವಾಗಲು ಸಾಧ್ಯ ಇದೆ. ನೀವು ಮನಸ್ಸು ಮಾಡಬೇಕು ಅಷ್ಟೆ!"

"ನಿಮ್ಮಂತಹ ಧರ್ಮವಂತರಿಗೆ ನಾನು ಮಾಡದೆ ಉಂಟೆ? ಎಲ್ಲಿಂದಲೋ ಬಂದು ಒಂದು ಮಾತು ಕೇಳಿದ್ದಕ್ಕೆ ಕಾಶಿಗೆ ಕಳಿಸಲು ಒಪ್ಪಿದಿರಿ. ನನ್ನ ಜನ್ಮಾಂತರದ ಬಯಕೆ ಕೈಗೂಡಿಸಿದ್ದ ನಿಮ್ಮ ಮಾತನ್ನು..."

"ಅಮ್ಮಾ ಒಂದು ಬೇಡಿಕೆ ನನ್ನ ಮಗ—ಈ ವಸಂತ ಇಲ್ಲವೆ ಇವನನ್ನು ನೀವು ದತ್ತು ತೆಗೆದುಕೊಳ್ಳಬೇಕು..."

ಗಂಗಾಗೆ ತನ್ನ ಕಿವಿಯನ್ನು ತಾನೇ ನಂಬದಾದಳು.

ಹಲವು ಪುರಾಣಗಳಲ್ಲಿ [illegible] ಕೇಳಿಯೂ ಇದ್ದಳು: 'ಮಕ್ಕಳಿಲ್ಲದೆ ಹೋದರೆ ಸದ್ಗತಿ ಇಲ್ಲ.'

Sri Vidyabharathi Book Centre, Sringeri

CC-O. In Public Domain. Digitized by eGangotri

ತನಗೆ ಮಕ್ಕಳೆಲ್ಲಿ ಬರಬೇಕು ? ಅಂತೆಯೆ ಸದ್ಗತಿಯೂ ಸಾಧ್ಯವಿಲ್ಲ ಎನ್ನುತ್ತಿದ್ದಳು.

'ಇದೇನು ತಾನು ಮತ್ತೆ ಕನಸಿನಲ್ಲಿದ್ದೇನೆಯೆ ?' ಗಂಗಾ ಮೌನವಾಗಿದ್ದಕ್ಕೆ ಶಾನುಭೋಗರು ಸ್ವಲ್ಪ ತಡೆದು ಹೇಳಿದರು,

"ಯಾಕಮ್ಮ ಸುಮ್ಮನಾದಿರಿ ? ಅಪೇಕ್ಷೆ ಇಲ್ಲವೆ ?"

"ಕಾಶಿಗೆ ಹೋಗುವ ನೀವು ಈತನನ್ನು ದತ್ತು ತೆಗೆದುಕೊಳ್ಳಿ. ಅಂದರೆ ನಿಮಗೂ ಸದ್ಗತಿ ನನಗೂ ಲಾಭ."

ಗಂಗಾನ ಕಣ್ಣಿಗೆ ಬೆಳಕು. ಎಲ್ಲಿತ್ತೋ ಏನೋ ! ಅವಳು ಶಕ್ತಿ ಸಾವರಿಸಿಕೊಂಡು ಮಾತನಾಡಿದಳು.

"ನನ್ನಂತಹ ಪಾಪಿಗೆ, ಅನಾಥಳಿಗೆ ನಿರಾಧಾರಳಿಗೆ ನಿಮ್ಮ ಮಗನನ್ನು ದತ್ತು ಕೊಡುತ್ತೇನೆ ಎನ್ನುತ್ತೀರಿ.

ಈ ಸಾಹಸ ಯಾಕೆ ಶಾನುಭೋಗರೆ ನನ್ನ ಉದ್ಧಾರಕ್ಕಾಗಿ ದೇವರು ನಿಮಗೆ ಈ ಬುದ್ಧಿ ಕೊಟ್ಟಿದ್ದಾನೆಯೆ. ನನಗೆ ನಿಮ್ಮ ಉಪಕಾರ ಬಹಳ ಭಾರವಾಗಿದೆ.

ನನಗೇಕೆ ದತ್ತು."

"ನಿಮ್ಮಂತಹ ಸಾಧು ಜೀವಗಳಿಗೆ ಸದ್ಗತಿ ಬೇಕು. ನಿಮ್ಮ ಕೈಹಿಡಿದಾತ, ನಾಳೆ ನೀವು, ಪಿಂಡೋದಕ ಇಲ್ಲದೆ ಪಿಶಾಚ ಯೋನಿಯಲ್ಲಿ ತೊಳೆಯಬಾರದು. ಅದಕ್ಕಾಗಿ ನೀವು ದತ್ತಕ್ಕೆ ಒಪ್ಪಲೇಬೇಕು."

"ನಿಮ್ಮ ಇಚ್ಛೆ. ದೇವರೆ ನಿಮ್ಮ ಹೊಟ್ಟೆಯೊಳಗೆ ಹೊಕ್ಕು ಮಾಡಿಸಹತ್ತಿದ್ದರೆ ನಾನೆಷ್ಟರವಳು ?"

ಗಂಗಾ ಶಾನುಭೋಗ ಶಾಮಣ್ಣನ ಮಗ ವಸಂತನನ್ನು ದತ್ತುಕೊಳ್ಳುವುದು ಗೊತ್ತಾಯಿತು.

ಗಂಗಾನ ಜೀವನದಲ್ಲಿ ಹೊಸ ವರುಷ.

ಒಮ್ಮೊಮ್ಮೆ ತನಗೆ ಬುದ್ಧಿ ಇದ್ದಷ್ಟನ್ನು ಯೋಚಿಸಿದಾಗ ಹೊಸ ಸಮಸ್ಯೆಗಳೂ ಬಂದು ಹೋಗಬೇಕು.

ಮದುವೆಯಾದ ಗಂಡನಿಂದ ಸುಖ ಬೇಡಲಿಲ್ಲ. ಹಳ್ಳಿಯಲ್ಲಿ ಮಕ್ಕಳನೆತ್ತಿ ಆಡ್ಡಾಡುವ ಹೆಂಗಳೆಯರನ್ನು ಕಂಡಾಗ ಯಾವಾಗಲಾದರೊಮ್ಮೆ ಸಂಕಟವಾಗುತ್ತಿತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಗಂಗಾ ಇದು ದೈಹಿಕ, ಇಲ್ಲವೆ ಸೆಂಟಿಮೆಂಟಲ್ ಎಂದು ತಿಳಿದು ಕೊಳ್ಳುವಷ್ಟು ಉದಾರಳೂ ಅಲ್ಲ.

ಮುಂದೆ ತನ್ನ ಜೀವನದಲ್ಲಿ ಶೀನ ಕಾಲಿರಿಸಿದಾಗ ಆಗಬಹುದಾದ ಮಕ್ಕಳ ಬಗ್ಗೆ ಮೈತುಂಬ ಎಚ್ಚರ ವಹಿಸಬೇಕಿತ್ತು. ಹಾಗೆ ಅವಳೆಂದಿಗೂ ಮೈ ಮರೆತು ನಡೆಯಲೂ ಇಲ್ಲ. ಮುಂಬೈಗೆ ಬಂದಳು. ಆಗ ನಗರ ಜೀವನದ ಕುಲುಮೆಯಲ್ಲೂ ನಗುನಗುತ್ತ ಮುಂಗೈಯ ಮೇಲೆ ಪುಟಾಣಿಗಳನ್ನು ಕೂರಿಸಿಕೊಂಡು ಅಡ್ಡಾಡುವ ಮಹಿಳೆಯರನ್ನು ನೋಡಿದ್ದಳು.

ಗಂಗಾನಿಗೆ ಮುಂಬೈಯಲ್ಲಿ ಹಳ್ಳಿಯಲ್ಲಿ ಇರುವಷ್ಟು ಭಯ, ಬಂಧನ ಇರಲಿಲ್ಲ. ಆದರೆ ಅವಳಿಗೆ ಅಷ್ಟು ಸ್ವಾತಂತ್ರ್ಯದ ಆಸಕ್ತಿಯೂ ಇರಲಿಲ್ಲ.

ಹಳ್ಳಿಯಿಂದ ಏನೋ ಕನಸು ಕಟ್ಟಿ ಮುಂಬೈಗೆ ಬಂದಿದ್ದಳು. ಮುಂಬೈಯಲ್ಲಿ ನಡೆದುದೇ ಬೇರೆ.

ಗಂಗಾ ಒಂದು ಕ್ಷಣ ಯೋಚಿಸಿದಳು.

ನಾಲ್ಕು ದಿನದಿಂದ ಮನೆಯಲ್ಲಿ ಓಡಾಡುವ ವಸಂತನನ್ನು ನೋಡಿದ್ದಳು. ಚನ್ನಾದ ಹುಡುಗ ಬಾಯಿಯಲ್ಲಿ ಚುರುಕು—ಸವಿ ಮಾತುಗಾರ.

ಇಂತಹ ಹುಡುಗ ತನಗೆ ಮಗನಾಗಿ ದೊರೆತ. ಮುಂದೆ ಪರಲೋಕದಲ್ಲಿ ನನಗೆ ಸದ್ಗತಿ ದೊರೆಯಲಿ ಬಿಡಲಿ, ಬಿಡಲಿ ಏಕೆ?

ಮಕ್ಕಳಿಲ್ಲದಿದ್ದರಂತೂ ಸದ್ಗತಿ ಇಲ್ಲ ಎನ್ನುವುದು ಮುಖ್ಯ.

ಮಗ ತನ್ನ ಶಕ್ತಿ ನಿಂತಾಗ ಒಂದು ಚೊಂಬು ನೀರು ತಂದುಕೊಟ್ಟರೂ ಸಾಕು. ಈ ಆನಂದಕ್ಕೆ ಪಾರವಿದೆಯೇ?

ಓಣಿಯವರು

ಹಾದಿಯ ಹೋಕರು

ತನಗೆ ಮಾಡುವುದು ದೊಡ್ಡ ಹೊರೆ.

ಮಾಡದಿದ್ದರೆ...ಅವರ ಮೇಲೆ ಒತ್ತಾಯವೆ?

ಆದರೆ ತನ್ನ ಮಗ ತನಗೆ ಮಾಡದೆ ಹೋಗುವನೆ? ಗಂಗಾನ ಹೃದಯ ಭಾರವಾಗಿತ್ತು.

ಮಕ್ಕಳ ಸುಖದ ಕನಸು ಕಂಡು ಜಗಿಯುತ್ತಿದ್ದಳು.

ತನ್ನ ವಿಚಿತ್ರ ಜೀವನ ದೈವದ ಆಟ ಆಗಿರಬೇಕೆಂದು ಹೋಗಲಿಲ್ಲ.

ಮದುವೆಯಾಗದೆ ಪತ್ನಿಯ ಸ್ಥಾನ [illegible] ಇಲ್ಲದ ಮಕ್ಕಳ ಲಾಭ.

Sri Vidyabharathi Book Centre, Sringeri

CC-O. In Public Domain. Digitized by eGangotri

ಲೋಕದಲ್ಲಿ ದೇವತೆಗಳೆಂದು ಹೆಸರಾದವರ ಲಿಸ್ಟಿನಲ್ಲಿಯೂ ಇಲ್ಲ.

ದೇವತೆಗಳ ವರ ಪಡೆದು ಮೆರದವರಲ್ಲೂ ಕಾಣದು.

ಶಾನುಭೋಗರ ಮನೆಗೆ ಇದಕ್ಕಿದ್ದಂತೆಯೆ ಅತಿಥಿಗಳು ಬರಹತ್ತಿದರು.

ಹಳ್ಳಿಯ ಶಾನುಭೋಗರು ಅವರ ಸಂಬಂಧದ ಬೇರುಗಳು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ

ಹತ್ತಿಪ್ಪತ್ತು ಜನ ಬಂದರು.

ವಿಧಿಯ ಮೇರೆಗೆ ಹೋಮ ಹವನಗಳು.

ಭಾವಚಿತ್ರ ತೆಗೆಯುವ ಸಮಾರಂಭ.

ಶಾಮಣ್ಣ ಅವನ ಹೆಂಡತಿ ಕೂಡಿ ತಮ್ಮ ಮಗನನ್ನು ಗಂಗಾನ ಉಡಿಯಲ್ಲಿ ಹಾಕುವ ದೃಶ್ಯ ಹೃದಯಸ್ಪರ್ಶಿಯಾಗಿತ್ತು.

ಶಾನುಭೋಗರ ಕಣ್ಣಲ್ಲಿ ನೀರು !

ಅವರ ಧರ್ಮಪತ್ನಿಯು ಬಿಕ್ಕಿ ಬಿಕ್ಕಿ ಅತ್ತರು. ನಮ್ಮ ವಂಶವೊಂದನ್ನೇ ಬೆಳಗುವ ವಸಂತ ಇಂದು ಎರಡು ಮನೆತನ ಬೆಳಗುವ ದೀಪ. ಭಗವಂತನು ಅವನಿಗೆ ಕಲ್ಲುಖಣಿಯಾಗಿ ಬಾಳುವ ಆಯುಸ್ಸು ಕೊಡಲಿ !

ಆಚಾರ್ಯರು ಆಶೀರ್ವಚನ ಹೇಳಿ ಸ್ವಸ್ತಿವಾಚನ ಮಾಡಿದರು.

ಗಂಗಾ ತಾಯಿ ಹಿಗ್ಗಿನಿಂದ, ವಸಂತ ದೊಡ್ಡವನಾದರೂ ತೊಡೆಯ ಮೇಲೆ ಕೂರಿಸಿಕೊಳ್ಳುವ ಶಾಸ್ತ್ರ ಮಾಡಿದಳು.

ಚಿತ್ರಗ್ರಾಹಕರು ಈ ಸಮಾರಂಭದ ಹತ್ತಾರು ಚಿತ್ರ ತೆಗೆದುಕೊಂಡರು.

'ಕೊನೆಯ ಕ್ರಮವಾಗಿ ದತ್ತುಪತ್ರದ ರಿಜಿಸ್ಟ್ರಿ. ನಗರದ ವಕೀಲರ ಆದೇಶಕ್ಕೆ ಅನುಗುಣವಾಗಿ ಏನಾಗಬೇಕೂ ಅದೆಲ್ಲ ಆಯಿತು.

ಕಾಗದದ ಸಂಬಂಧ ಬಂದುದು ಗಂಗಾ ಜೀವನದ ಈ ಹಂತದಲ್ಲಿಯೆ ?

ಗಂಗಾ ತನ್ನ ಹೆಬ್ಬೆರಳನ್ನು ಅವರು ಹೇಳಿದಲ್ಲಿ ಊರಿದಳು.

ಬಂದವರಿಗೆಲ್ಲ ಇವರು ವಸಂತನ ತಾಯಿ ಎಂದು ಗಂಗಾನ ಪರಿಚಯ ಮಾಡಿಕೊಟ್ಟರು.

ಬಂದಜನ ಕರಗಿತು, ದತ್ತುಸಮಾರಂಭದ ಗಲಾಟೆಗಳು ಕಡಿಮೆಯಾದವು.

ಒಂದು ದಿನ ಶಾಮಣ್ಣ ಗಂಗಾ ಕುಳಿತ ಅಡುಗೆಯ ಮನೆಗೇ ಬಂದ !

"ಇನ್ನು ಕಾಶಿಗೆ ಹೋಗಲು ನೀವು ಮುಕ್ತರು. ಆದರೆ ಇದು ಬಹಳ ಕಠಿನಕಾಲ ನಾಳೆ ನಮ್ಮ ಮಾತು ಹೀಗೇ ಇರುತ್ತದೆಂದು ಹೇಳಲು ಬರುವುದಿಲ್ಲ. ನಿಮ್ಮ ಮನಸ್ಸಿನ್ನ ಹಿಡಿದಂತೆ ಇದ್ದೀತೆಂದು ಹೇಳಲು ಆಗದು."

Sri Vidyabharathi Book Centre, Sringeri

CC-O. In Public Domain. Digitized by eGangotri

"ವಕೀಲರ ಅಭಿಪ್ರಾಯದ ಮೇರೆಗೆ ನಗರಕ್ಕೆ ಹೋಗಿ ನ್ಯಾಯಾಲಯದಲ್ಲಿ ನಾನು ದತ್ತು ತೆಗೆದುಕೊಂಡಿದ್ದೇನೆ ಎಂದು ಹೇಳಬೇಕು, ಅಂದರೆ ಅಲ್ಲಿಗೆ ವಿಧಿ ಮುಗಿಯಿತು."

"ಅದಕ್ಕೆ ಏನು ಮಾಡಬೇಕೋ ಅದನ್ನು ಮಾಡಬೇಕು, ಮಾಡಿಬಿಡಿರಿ. ಹೆಣ್ಣು ಹೆಂಗಸಾದ ನನಗೆ ಏನು ತಿಳಿಯುತ್ತದೆ."

"ಇಂದು ನಗರಕ್ಕೆ ಹೋಗಿ ವಕೀಲರನ್ನು ಕೇಳಿ ಬರುತ್ತೇನೆ, ಅವರು ಏನು ಹೇಳುತ್ತಾರೊ ಹಾಗೆ ಮಾಡೋಣ."

"ಅದು ಸರಿ, ನಿಮಗಿಂತ ವಕೀಲರು ಜಾಣರೇನು ? ನಿವೇನು ಯಾವ ವಕೀಲರಿಗೆ ಕಮ್ಮಿ ?" ಗಂಗಾ ಶಾಮಣ್ಣನನ್ನು ಸ್ತುತಿಸಿದಳು.

"ಎಷ್ಟಾದರೂ ನಮ್ಮದು ಕಳ್ಳಭಟ್ಟ ಕಾಯಿದೆ. ವಕೀಲರದು ಸನದು ಪಡೆದದ್ದು, ಅವರನ್ನು ಕೇಳಿದರೆ ಮುಗಿದೇಹೋಯಿತು. ಮುಂದೆ ಯಾವ ತೊಂದರೇನೂ ಇಲ್ಲ..."

"ನಿಮ್ಮ ಇಷ್ಟ ಬಂದ ಹಾಗೆ." ಗಂಗಾನಿಗೆ ಒಂದು ಚಿಕ್ಕ ವ್ಯಸನ ಎಂದರೆ ತಾನು ಕಾಶಿಗೆ ಹೋಗುವುದು ಮುಂದೆ ಬಿತ್ತು ಎಂದು. ಇದೊಂದು ಚಡಪಡಿಕೆ ಬಿಟ್ಟರೆ ಅವಳು ಸುಖಿ.

ಕಾಶಿಗೆ ಹೋಗುವುದು ದೊಡ್ಡ ಲಾಭ.

ಮಗನನ್ನು ಸಂಪಾದಿಸಿದ್ದೇನು ಕಡಿಮೆಯದಲ್ಲ.

ಆಗಲಿ ವಿಶ್ವೇಶ್ವರ ಯಾವಾಗ ಕರೆಸಿಕೊಳ್ಳುತ್ತಾನೊ ಆಗ ಆಗಲಿ.

ದತ್ತುಮಗ ವಸಂತ

ಈಗ ಊರುಬಿಟ್ಟು ಕಾಶಿಗೆಂದು ಹೊರಟೇ ಹನ್ನೆರಡು ವರುಷಗಳಾದವು. ಇನ್ನೂ ಮರಳಿ ಮಣ್ಣಿಗೇ, ಅಂದ ಹಾಗೆ ಊರಸನಿಹದಲ್ಲಿಯೇ !

ಮರುದಿನ ಶಾನುಭೋಗರು ಸಂಜೆ ಊರಿಗೆ ಹೋಗಿ ಬಂದರು.

ರಾತ್ರಿ ಗಂಗಾನ ಫಲಾಹಾರವಾದ ಬಳಿಕ ಶಾಮಣ್ಣ ಹೇಳಿದರು,

"ಗಂಗಾಬಾಯವರೆ, ನಾಳೆ ನೀವು ಹಾಗು ನಿಮ್ಮ ಮಗ ಇಬ್ಬರೂ ತಾಲ್ಲೂಕಿಗೆ ಹೋಗಿ ನ್ಯಾ[illegible] ದತ್ತು ತೆಗೆದುಕೊಂಡ ಸಂಗತಿ ತಿಳಿಸಿ ಬರಬೇಕು."

Sri Vidyabharathi Book Centre, Sringeri

CC-O. In Public Domain. Digitized by eGangotri

"ಆದರೆ ಕಾಯಿದೆ ಇತ್ತೀಚೆ ಬಹಳ ತೊಡಕಾಗಿವೆ. ನಮಗೂ ಒಬ್ಬನೇ ಮಗ. ದತ್ತು ಕೊಡಲು ಬರುವುದಿಲ್ಲ. ನೀವು ತಪ್ಪುಮಾಡಿದಿರಿ ಎಂದು ವಕೀಲರೆಂದರು."

"ಆತ ನಿಮ್ಮ ಮನೆಯಲ್ಲಿಯೇ ಇರುತ್ತಾನೆ, ತಪ್ಪೇನು? ವಕೀಲರಿಗೇನು ತಿಳಿಯುತ್ತದೆ, ಪಾಪ. ದೊಡ್ಡ ಮನಸ್ಸು ಮಾಡಿ ನನ್ನ ಮನೆಗೆ ದೀಪ ಹಚ್ಚಿದಿರಿ."

ಶಾಮಣ್ಣ ನಕ್ಕು "ಗಂಗಾಬಾಯಿಯವರೆ, ಕಾಯಿದೆ ಒಂದು ಕತ್ತೆ ಇದ್ದಂತೆ— ಬಲ್ಲವರು ಹೇಳುತ್ತಾರೆ. ಅದಕ್ಕೆ ನಾವು ತಲೆಬಾಗಬೇಕು. ಒಬ್ಬನೇ ಮಗ ಇದ್ದರೆ ದತ್ತು ಕೊಡುವುದು ಜೈಲಿಗೆ ಹೋಗುವ ಅಪರಾಧವಂತೆ, ಈಗ ನನ್ನ ಜೀವದ ಸುತ್ತು ಬಂದಿದೆ."

ಗಂಗಾಗೆ ಗಾಬರಿಯಾಯಿತು.

ಕಾಯಿದೆ ಅಜಂ ಎಂದರೆ ಅವಳಿಗೆ ಹಳ್ಳಿಯ ಶಾನುಭೋಗ. ಕಾಯಿದೆ ಎನ್ನುವುದು ಇದೆ ಎಂಬುದೂ ಅವಳಿಗೆ ಗೊತ್ತಿಲ್ಲದಷ್ಟು ದೂರದ ಜೀವನ.

ಈಗ ಶಾಮಣ್ಣನ ಮಾತು ಕೇಳಿ ಸಂಕಟಕ್ಕೊಳಗಾದಳು. ಆತ ತನಗಾಗಿ ಒಳ್ಳೆಯದನ್ನು ಮಾಡಿದ.

ತನ್ನ ಮಗನನ್ನು ದತ್ತು ಕೊಡಬೇಕು, ಇದು ತಪ್ಪು, ಅಲ್ಲದೆ ಜೈಲಿಗೆ ಹೋಗಬೇಕು. ನನ್ನಿಂದ ಇನ್ನೊಬ್ಬರಿಗೆ ಎಷ್ಟು ತೊಂದರೆ ?

"ಈಗ ಏನು ಮಾಡಬೇಕು ಶಾಮಣ್ಣ ? ನಿಮಗೆ ತೊಂದರೆಯಾಗ ಬಾರದು. ನಾನು, ನನ್ನ ಗಂಡ ಪಿಂಡ ಇಲ್ಲದೆ ಪಿಶಾಚಿಗಳಾದರೂ ಆಗಲಿ ನಿಮ್ಮಂತ ಧರ್ಮವಂತರನ್ನು ಜೈಲಿಗೆ ಕಳಿಸಿದರೆ ನಮಗೆ ನರಕ ತಪ್ಪೀತೆ ? ಈಗ ಏನು ಮಾಡಬೇಕು ಹೇಳಿ, ದತ್ತಕವನ್ನೇ ರದ್ದುಮಾಡಿರಿ..."

"ಅಯ್ಯೋ ಹಾಗೆ ಬರುತ್ತಿದ್ದರೆ ನಿಮಗೆ ಕಾಲುಬಿದ್ದಾದರೂ ಬಿಡಿಸಿ ಕೊಳ್ಳುತ್ತಿದ್ದೆ. ಕಾಗದ ಒಮ್ಮೆ ರಿಜಿಸ್ಟ್ರಿ ಆದರೆ ವಜ್ರಲೇಪ ರದ್ದಾಗುವುದೇ ಇಲ್ಲ."

"ಅದಕ್ಕೇನು ಮಾಡಬೇಕು ಎಂದು ವಕೀಲರು ಹೇಳಿದರು!" ಆತುರ ಳಾಗಿ ಗಂಗಾ ಕೇಳಿದಳು.

"ಒಂದು ಉಪಾಯ ವಕೀಲರು ಹೇಳಿದ್ದಾರೆ, ನನಗೇಕೋ ಸಂಕೋಚ ವಾಗುತ್ತದೆ..."

Sri Vidyabharathi Book Centre, Sringeri

CC-O. In Public Domain. Digitized by eGangotri

"ಅಯ್ಯೋ ಏನಿದ್ದರೂ ಹೇಳಿರಿ. ನಿಮ್ಮ ಮೇಲೆ ಆಪತ್ತು ಬರಲು ಬಿಟ್ಟೇನೇಯೆ..."

"ನೋಡಿ ದತ್ತಕವನ್ನು ಒಬ್ಬನೇ ಮಗನಿದ್ದರೆ ಬೇರೆ ಮನೆತನಕ್ಕೆ ಕೊಡಲು ಬರುವುದಿಲ್ಲ. ಆದ್ದರಿಂದ ಅದೆಷ್ಟೋ ದಿನಗಳ ಹಿಂದೆ ನಮ್ಮ ಅಣ್ಣ ತೀರಿ ಹೋದ. ಈಗ ಗಂಗಾಬಾಯಿ ನಿಮ್ಮಣ್ಣನ ಹೆಂಡತಿ. ಈಗ ದತ್ತಕ ನಿಮ್ಮಣ್ಣನಿಗೆ, ಅಂದರೆ ನಿಮ್ಮ ವಂಶಕ್ಕೇ ಮಗ ಉಳಿಯುತ್ತಾನೆ. ನೀನೂ ಬದುಕುತ್ತೀ; ಗಂಗಾಬಾಯಿಗೂ ಮಗ ಆಗುತ್ತಾನೆ. ಈ ಮಾತು ಏನು ದೊಡ್ಡದು; ಗಂಗಾಬಾಯಿಗೆ ತಿಳಿಸಿ ಒಪ್ಪಿಸಿರಿ ಎಂದು ಹೇಳಿದ್ದಾರೆ...."

ಗಂಗಾಬಾಯಿಗೆ ಬಹಳ ಚಮತ್ಕಾರವೆನ್ನಿಸಲಿಲ್ಲ.

"ಇಷ್ಟೇ ಹೌದಲ್ಲವೊ. ನಾನು ನಿಮ್ಮ ಅಣ್ಣನ ಹೆಂಡತಿ ಎಂದರಾಯಿತಲ್ಲ ಅಲ್ಲಿ..."

ಗಂಗಾಬಾಯಿ ಇಷ್ಟು ಸಲೀಸಾಗಿ ಇದಕ್ಕೆ ಒಪ್ಪಿಯಾಳು ಎಂದು ಶಾಮಣ್ಣ ಎಣಿಸಿದ್ದಿಲ್ಲ.

"ಹಾಗಾದರೆ ನಾಳೆ ತಾಲ್ಲೂಕಿಗೆ ಹೋಗೋಣವೆ?"

"ಆಗಲಿ" ಗಂಗಾನ ಉತ್ತರ.

ರಾತ್ರಿ ಶಾಮಣ್ಣ ತನ್ನ ಕೋಣೆಯಲ್ಲಿ ನಿದ್ದೆ ಬರಲಾರದೆ ಹೊರಳಾಡುತ್ತಿದ್ದ —

ಗಂಗಾಬಾಯಿ ಎಲ್ಲಿಂದಲೊ ಮನೆಗೆ ಭಿಕ್ಷೆಗೆ ಬಂದ ಪರದೇಶಿ ಹೆಂಗಸು,
ತಾನು ಅವಳನ್ನು ಉಪಯೋಗಿಸಿಕೊಂಡ ರೀತಿ !

ತನ್ನ ಅಣ್ಣ ರಾಮರಾಯ ಚಿಕ್ಕಂದಿನಲ್ಲಿ ಸತ್ತು ಹೋದ. ಆಗ ಅವನ ಮದುವೆಯಾಗಿತ್ತು.

ಅಣ್ಣನ ಹೆಂಡತಿಗೆ ಪರಕಾರ ಉಡುವ ವಯಸ್ಸು. ಈಗ ಆ ಉತ್ಪನ್ನವನ್ನೆಲ್ಲ ನಾನೆ ಎತ್ತಿಹಾಕಬೇಕೆಂದು ಯತ್ನಿಸಿದೆ. ನನ್ನ ತಮ್ಮನೊಬ್ಬ ರಾಜಕೀಯ ಮುಂದಾಳಾಗಿ ಪ್ರಬಲನಾಗಿದ್ದರಿಂದ ಎಲ್ಲ ತಾನೆ ಒಕ್ಕರಿಸಿದ.

ನಾನು ಅನಾಥನಾಗಿ ಊರು ಬಿಟ್ಟೆ. ರಾಜಕೀಯದಲ್ಲಿ ಓಡಾಡಿದರೂ ಎಂದಾದರೊಂದು ದಿನ ಪ್ರಸಂಗ ಬಂದಾಗ ನನ್ನ ಕೈ ತೋರಿಸಿಬಿಡಬೇಕೆಂದು ಹವಣಿಸಿದ್ದೆ.

ಮೊನ್ನೆ ಗಂಗಾಬಾಯಿ ಬಂದಳು. ಅವಳ ಇತಿಹಾಸ ನನ್ನ ಅಣ್ಣನ
Sri Vidyabharathi Book Centre, Sringeri

 CC-O. In Public Domain. Digitized by eGangotri

ಹೆಂಡತಿಗೆ ಹೋಲುತ್ತದೆನ್ನಿಸಿ ಈ ಆಟ ಹೂಡಿದೆ. ಇದರಲ್ಲಿ ಗಂಗಾಬಾಯಿಗೆ ನಾನು ಹೇಳಿದ್ದೇ ಕಾಯಿದೆ. ಅಲ್ಲದೆ ನಾನು ಕಾಶಿಗೆ ಕಳಿಸುವೆನೆಂದಾಗ ಹೇಳಿದ್ದಕ್ಕೆ ಒಪ್ಪಿದಳು.

ಆಗಲೇ ಅವಳಿಗೆ ಹೇಳಿದ್ದೇನೆ: "ಗಂಗಾಬಾಯಿ, ನಾವು ಹೇಳಿದಂತೆ ಕೇಳಿದರೆ ನಿಮಗೂ ಪುಣ್ಯ ನಮಗೂ ಲಾಭ" ಅಂದಾಗ ಅವಳು ಏನೆನ್ನಬೇಕು. ವಸಂತನನ್ನು ಮುಟ್ಟಿ ಹೇಳಿದಳು,

"ಶಾಮಣ್ಣ, ನಾನು ಸತ್ತರೂ ನೀನು ಹೇಳಿದ ಮಾತು ಮೀರುವುದಿಲ್ಲ. ನನ್ನ ಮಗ ವಸಂತನ ಆಣೆಗೂ ನೀನು ಹೇಳಿದ್ದು ತಪ್ಪುವುದಿಲ್ಲ."

ತನ್ನ ಮಗ ವಸಂತ ಎನ್ನುವ ಹುಚ್ಚಿನಲ್ಲಿ ಅವಳು ನಮ್ಮ ಕೈಗೊಂಬೆ. ಅವಳನ್ನು ಉಪಯೋಗಿಸಿ ತಮ್ಮನ ಮಗ್ಗಲು ಮುರಿದು ಆಸ್ತಿಯನ್ನು ಸ್ವಾಹಾ ಎಂದರಾಯಿತು.

ಇನ್ನು ಪ್ರಶ್ನೆ ಬಹಳ ಬಿಗಿ ಇಲ್ಲ. ಶಾಮಣ್ಣ ಬೆಳಗಾಗುವವರೆಗೆ ನಿದ್ದೆ ಇಲ್ಲದೆ ಕಳೆದನು.

ಮರುದಿನ ಕೋರ್ಟಿಗೆ ಹೋಗುವ ಪೂರ್ವದಲ್ಲಿ 'ವಕೀಲರಲ್ಲಿ ಕರೆದು ಕೊಂಡು ಹೋದರು.

ವಕೀಲರು ಕೇಳಿದರು: 'ಈಗ ನೀವು ಕೋರ್ಟಿನಲ್ಲಿ ಏನು ಹೇಳುವವರು?"

"ನೀವು ಏನು ಹೇಳಂತೀರೊ ಅದನ್ನು!"

"ನೋಡಿ, ನೀವು ಇಷ್ಟು ಹೇಳಲೇಬೇಕು 'ನನ್ನ ಲಗ್ನವಾದಾಗ ನನಗೆ-ಎಂಟು ವರುಷ. ಕೊಲ್ಲಾಪುರದಲ್ಲಿ ಆಯಿತು, ಎಂದು ನಮ್ಮ ತಂದೆ ಹೇಳುತ್ತಿದ್ದರು. ಲಗ್ನವಾದ ವರುಷವೇ ನನ್ನ ಗಂಡ ರಾಮರಾಯ ಸತ್ತರು.

ನಾನು ನನ್ನ ತಾಯಿ ತಂದೆಯ ಮನೆಯಲ್ಲಿಯೇ ಉಳಿದೆ. ತಂದೆ ತಾಯಿ ಇಬ್ಬರೂ ಹತ್ತುವರುಷದ ಹಿಂದೆ ಸತ್ತರು. ತೌರುಮನೆಯಲ್ಲಿ ನಾನು ಅನಾಥಳಾದೆ. ಈ ನಡುವೆ ನನ್ನ ತಮ್ಮ ಒಬ್ಬ ಇವರಲ್ಲಿಗೆ ಬಂದು ನನ್ನ ಹೊಟ್ಟೆಗೆ ಏನಾದರೂ ಕೊಡಿರಿ ಎಂದು ಕೇಳಿದ. ಇವರಾರೂ ಹಚ್ಚಿಕೊಳ್ಳಲಿಲ್ಲ. ಶಾಮಣ್ಣ ಕೊಡಬೇಕೆಂದರೆ ಅವರ ತಮ್ಮ ಅದೆಲ್ಲ ಆಗದು ಎಂದಿದ್ದ.

ಈಗ ನನಗೆ ಮುಪ್ಪಿನ ಕಾಲ ಬಂತು. ಭಿಕ್ಷಬೇಡಿ ಜೀವನ ಸಾಗಿಸುವುದು ಯಾಕೆ. ಅಲ್ಲದೆ ನನ್ನ ಪತಿಯ ವಂಶ ನಡೆಯುವುದಕ್ಕಾಗಿ ನಾನು ನಮ್ಮ ವಂಶದವನೇ ಆದ ಶಾಮಣ್ಣನವರ ಮಗನನ್ನು ದತ್ತು ತೆಗೆದುಕೊಂಡಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ದೇನೆ. ನನ್ನ ದತ್ತಕದ ಉದ್ದೇಶ ಕೇವಲ ನನ್ನ ಪತಿ ನಾಳೆ ನಾನು ಸತ್ತು ಹೋದರೆ ನಮ್ಮ ಶ್ರಾದ್ಧ ಕರ್ಮಾದಿಗಳನ್ನು ಮಾಡುವುದು ವಂಶ ನಡೆಯುವುದು ಆಗಿದೆ.

ಇನ್ನೂ ಹಲವು ಮಾತುಗಳನ್ನು ಹೇಳಿದರು. ಗಂಗಾಬಾಯಿ ಎಲ್ಲವನ್ನೂ ಕೇಳಿದಳು. ಜ್ಞಾಪಕದಲ್ಲಿ ಇಟ್ಟುಕೊಂಡಳು. ಅವಳ ಜೀವನದಲ್ಲಿ ಕಾನೂನು ಮೂಡಿದ್ದು ಇದುವೇ ಮಾತ್ರ. ಆದ್ದರಿಂದ ಮೂಡಿದ್ದು ಸ್ಪಷ್ಟವಾಗಿ ಅಳಿಸಲಾರದಂತಿತ್ತು.

ನ್ಯಾಯಾದೀಶರೆದುರು ಗಂಗಾ ವಕೀಲರು ಕಲಿಸಿದಂತೆ ಹೇಳಿದಳು.

ವಕೀಲರು ಹೊರಗೆ ಬಂದಾಗ —

"ಅಜ್ಜಿಯ ಜ್ಞಾಪಕಶಕ್ತಿ ದೊಡ್ಡದು..."

ಅಜ್ಜಿ ಎಂಬ ಮಾತು ಗಂಗಾನ ಕಿವಿಗೆ ಬಿತ್ತು. ಕೂಡಲೇ ಮನಸ್ಸಿನ ಹಿಂದೆ ನೋಡಿಕೊಂಡಳು.

ಬದುಕಿನ ವೇಗ ಬಹಳ ದೊಡ್ಡದು. ಮೈಕೈ ನೋಡಿಕೊಂಡಳು, ಗಂಗಾ.

ಈ ತೊಗಲು ಮಿರುಗುವ ಸೇಬಾಗಿದ್ದ ಕಾಲ, ಬಹಳ ಹಿಂದಿನ ಕತೆ ಎಂದು ಅವಳಿಗೆ ಅನ್ನಿಸಲಿಲ್ಲ. ನಿನ್ನೆ ಮೊನ್ನೆಯ ನೆನಪು.

ಗಂಗಾ ತನ್ನ ಮಗ ವಸಂತನ ಜತೆಗೆ ತಾಲ್ಲೂಕಿನಿಂದ ಮನೆಗೆ ಬಂದಳು.

ನಾಲ್ಕು ದಿನದಲ್ಲಿ ಕಾಶಿಗೆ ಹೋಗುತ್ತಿದ್ದ ಕನಸು ಕಾಣುವ ಅವಳಿಗೆ ನಾಲ್ಕು ತಿಂಗಳು ಬೇಕಾಯಿತು.

ಅದೇನೋ ಕೋರ್ಟು ವ್ಯವಹಾರಗಳು.

ಒಂದು ದಿನ ಮತ್ತೆ ಒಂದು ಸಲ ತಾಲ್ಲೂಕಿಗೆ ಹೋಗಿ ಕೋರ್ಟಿನ ಮುಂದೆ ನಿಂತು ಬಂದಳು. ಆ ದಿನ ಗಂಗಾನಿಗೆ ತುಂಬ ಮನಸ್ಸಿಗೆ ವ್ಯಥೆಯಾಯಿತು.

ನ್ಯಾಯಾಧೀಶರು ಕೆದರಿ ಕೇಳಿದ ಪ್ರಶ್ನೆಗಳಿಗೆ ಅವಳು ಉತ್ತರ ಹೇಳಲು ತತ್ತರಿಸಿದಳು.

ಆದರೆ ಎಲ್ಲೂ ತಪ್ಪಲಿಲ್ಲ. ತಪ್ಪು ಉತ್ತರ ಹೇಳಲೂ ಇಲ್ಲ ಎಂದು ವಕೀಲರಿಂದ ಪ್ರಶಸ್ತಿ.

ಮನೆಗೆ ಬಂದಾಗ ಗಂಗಾನಿಗೆ ತಂಬ ಸುಸ್ತಾಗಿತ್ತು. ನ್ಯಾಯಾಲಯದ ಚಿತ್ರ ಅವಳ ತಲೆ[illegible]ಲರ ತಿರುಗು ಪ್ರಶ್ನೆ:

Sri Vidyabharathi Book Centre, Sringeri

 CC-O. In Public Domain. Digitized by eGangotri

"ನಿಮ್ಮ ಗಂಡ ರಾಮರಾಯನನ್ನು ನೀವು ನೋಡಿದ್ದಿರಿ, ಅಲ್ಲವೆ?"

ಗಂಗಾನಿಗೆ ಲೋಕಾನುಭವ ಕಮ್ಮಿ ಇದ್ದಿಲ್ಲ. ಸ್ತ್ರೀ ಸಹಜವಾದ ಭಾವದಲ್ಲಿ ಹೇಳಿದಳು,

"ಸ್ವಾಮಿ, ನೋಡಿದ್ದೇನೆ. ಮದುವೆಯ ದಿನವೇ ನೋಡಿದ್ದು."

"ನಿಮ್ಮ ಗಂಡ ಸತ್ತಾಗ ನಿಮಗೇನನ್ನಿಸಿತು."

"ಸ್ವಾಮಿ ತಾವು ಇಂತಹ ಪ್ರಶ್ನೆ ಕೇಳಬಾರದು. ಹೆಂಗಸಿಗೆ ಗಂಡ ಸತ್ತಾಗ ಏನನ್ನಿಸುತ್ತದೆ—ಗಂಡಸರಾದ ನಿಮಗೆ ಹೇಗೆ ತಿಳಿದೀತು,

ನನ್ನ ವಯಸ್ಸು ಚಿಕ್ಕದು. ಆಗ ಅಷ್ಟು ಅನ್ನಿಸಲಿಲ್ಲ. ತಾಯಿ ತಂದೆ ಸ್ಮೃತಿ ತಪ್ಪಿಬಿದ್ದರು. ನಾನೂ ಅತ್ತೆ...

ಆದರ ಮುಂದೆ ನನಗೆ ತಿಳಿದಂತೆಲ್ಲ ಗಂಡ ಸತ್ತ ಬಗ್ಗೆ ನಿತ್ಯ ಕಣ್ಣೀರೂ ಕೂಳೂ ತಿಂದು ಬೆಳೆದಿದ್ದೇನೆ."

ಮತ್ತೆ ವಕೀಲರು ತನಗೆ ಹಲವು ಪ್ರಶ್ನೆ ಕೇಳಿದರು. ತಾನು ಎಂತಹ ಉತ್ತರ ಹೇಳಿದೆ ಎಂಬುದನ್ನು ಗಂಗಾ ನೆನಪು ಮಾಡಿಕೊಂಡು ಉದ್ವಿಗ್ನಳಾದಳು. ಗಂಗಾನಿಗೆ ತಲೆಯಲ್ಲಿ ಸಿಡಿಲು ಮಿಂಚುಗಳು ಕುಣಿದಾಡಹತ್ತಿದ್ದವು.

ಹಾದಿ ಹೋಗುವ ಯಾವನನ್ನೋ ಗಂಡ ಎಂದು ಏಕೆ ಹೇಳಬೇಕು? ತಪ್ಪಲ್ಲವೆ? ಅಧರ್ಮ ಅಲ್ಲವೆ?

ಆ ದಿನ ಶಾನುಭೋಗರ ಮನೆಯಲ್ಲಿ ಧರ್ಮವಂತನಾದ ಆಚಾರ್ಯ-ಶೀನನ ಮಂತ್ರ ಕೇಳಿ ನಾನು ಮುಗ್ಧಳಾಗಿ ದಾರಿ ತಪ್ಪಿದೆ. ಅದು ಪಾಪವಲ್ಲವೆ?

ನನ್ನ ವಯಸ್ಸು, ಮನಸ್ಸು ಶೀನನನ್ನು ಒಪ್ಪುವಂತೆ ಪ್ರೇರಿಸಿತು. ಒಪ್ಪಿದೆ.

ಗಂಗಾನ ಹಣ್ಣಾದ ಎದೆ ಹೊಡೆದುಕೊಳ್ಳುತ್ತಿತ್ತು.

ವಯಸ್ಸು ಮನಸ್ಸು ಕೇಳಲಿಲ್ಲ, ಎರಡರ ಸೆಳೆತ ಪ್ರಬಲವಿತ್ತು.

ಅಸಹಾಯಳಾಗಿ ಅಂದು ಜಾರಿದ್ದು...

ದೊಡ್ಡದೇನು ಅದರಲ್ಲಿ? ನನ್ನ ಕೈಹಿಡಿದ ಒಬ್ಬ ಗಂಡನಿದ್ದದ್ದು ನನಗೇ ಗೊತ್ತಿಲ್ಲದ ಪರಿಸ್ಥಿತಿ.

ಶೀನನನ್ನು ತಾನು ಒಪ್ಪಿದ್ದು ಅಧರ್ಮ, ಮಾಡಬಾರದ ಕೆಲಸ ಎಂದು ಯಾರೋ ಹೇಳಿದರು. ಆದರೆ ತನಗೆ ಅದು ಮಾಡಬೇಕಾಗಿತ್ತು.

ಗಂಗಾನಿಗೆ ಶೀನನೊಡನೆ ಕಳೆದ ಕ್ಷಣಗಳ ಬಗ್ಗೆ ಇಂದಿಗೂ ವ್ಯಸನವಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಾರ್ಧಕ್ಯದಲ್ಲಿ ತಾನು ತಿಳಿದೂ ತಿಳಿದು ಯಾರನ್ನೋ ಗಂಡ ಎಂದು ಏಕೆ ಹೇಳಬೇಕು ?

ಹೇಳಿದರೆ ಯಾವ ದೊಡ್ಡ ತಪ್ಪು ?

ಈಗ ಹಾಗೆಂದು ಯಾಕೆ ಹೇಳಿದೆ ?

ನಾನು ಬಹಳ ಅಧರ್ಮ ಮಾಡಿದೆ.

ಪ್ರಾಯದಲ್ಲಿ ದೇವರ ಹೆಸರಿನಲ್ಲಿಯೆ ಧರ್ಮ ತಪ್ಪಿದೆ. ಈ ಹಾಳು ಶೀನನ ಸೆಳವಿಗೆ ಬಿದ್ದು ಪತಿತಳಾದೆ. ಶೀನ ನನ್ನನ್ನು ದಾರಿತಪ್ಪಿಸಿದನೆ ?

ಇಲ್ಲ ನಾನು ಅವನನ್ನು ನನಗೆ ತಿಳಿದ ದಾರಿಗೆ ಕರೆದೆ. ಶೀನ ಎಲ್ಲಿಂದಲೋ ಚಿನ್ನ ತಂದಿದ್ದ.

ಎಲ್ಲಿಂದಲೇ ತರಲಿ ? ಅದೆಲ್ಲ ಶೀನನ ಸೊತ್ತು. ನಾನು ಈ ಚಿನ್ನ ಸಹಿತವಾಗಿ ಸ್ವಾಮಿಗಳಿಗೆ ಅರ್ಪಿತಳಾದೆ.

ಸ್ವಾಮಿಗಳು ಧರ್ಮದ ಅಧ್ಯಕ್ಷರು! ಸಮಾಜದ, ವ್ಯಕ್ತಿಯ ತನುಮನ...

ನಾನೂ ಸ್ವಾಮಿಗಳಿಗೆ ಮೂರನ್ನೂ ಅರ್ಪಿಸಿದೆ. ಆದರೆ ಅವರು ಅವುಗಳನ್ನು ಸ್ವೀಕರಿಸಿದರು. ನನ್ನನ್ನು ಎಸೆದರು. ನಾನು, ಶೀನ ಒರಟು ಎಂದು ಸ್ವಾಮಿಗಳ ಬೆನ್ನುಹತ್ತಿದೆ.

ಸ್ವಾಮಿಗಳು ಧರ್ಮ ಹೇಳಿದರು; ಆದರೆ ನರಕಕ್ಕೆ ನೂಕಿದರು.

ನನ್ನ ಚಿನ್ನ ಎತ್ತಿ ಹಾಕಿದರು.

ನನ್ನ ಹೆಣ್ತನ ಕಿತ್ತುಕೊಂಡರು.

ನನ್ನ ಶ್ರದ್ಧೆಗೆ ಬೆಂಕಿ ಇಟ್ಟರು !

ಶೀನನೇ ವಾಸಿ. ನಾನು ತಪ್ಪಿದ್ದನ್ನು ತಪ್ಪು ಎಂದ. ಶೀನನನ್ನು ತಿಳಿಯಲು ಆಗಲಿಲ್ಲ.

ಆತ ಮೇಲಿಂದ ಮೇಲೆ ಹೇಳುತ್ತಲೇ ಇದ್ದ. ಅದನ್ನೆಲ್ಲ ಮರೆತೆ—

"ಗಂಗಾ ಬದುಕಲು ಉಸಿರು ಸಾಲದು; ಉಸಿರಾಡುತ್ತಲೂ ಸಾವಿಗಿಂತ ಭೀಕರ ಅವಸ್ಥೆ ಅನುಭವಿಸಬಹುದು.

ಗಂಗಾ ಬದುಕಲು ಮುಖ್ಯವಾಗಿ ತಲೆಬೇಕು, ನಿರ್ಭಯತೆ ಬೇಕು. ನಿನ್ನಲ್ಲಿ ಎರಡೂ ಇಲ್ಲ..."

ಶೀನ ಹೀಗೆ ಹೇಳಹತ್ತಿದರೆ ಅವನ ಕೊಲೆಗಡಕತನ ಆರಂಭವಾಯಿತೆಂದು ಬೇಜಾರು ಪಡುತ್ತಿದ್ದ, [illegible]

Sri Vidyabharathi Book Centre, Sringeri

 CC-O. In Public Domain. Digitized by eGangotri

ಪ್ರಾಯದಲ್ಲಿ ಗಂಗಾನಿಗೆ ಭಾವನೆಯ ಆವೇಗವಿತ್ತು, ಶರೀರದ ಬೇಕು ಬೇಡಗಳಿದ್ದವು, ಮಾನಸಿಕ ಅಪಕ್ವತೆ ಇತ್ತು.

ಈ ಕಾಲದಲ್ಲಿ, ವಾರ್ಧಕ್ಯದ ಈ ಅವಸ್ಥೆಯಲ್ಲಿ –

ನನ್ನ ಮೈ ಹಣ್ಣಾಯಿತೆ ಹೊರತು ಮನಸ್ಸು ಪಕ್ವವಾಗಲಿಲ್ಲ.

ಶೀನ ನಿಜವಾಗಿ ದೊಡ್ಡವ, ಹೇಳುತ್ತಿದ್ದ :

"ಗಂಗಾ ಪ್ರಾಯದ ಕಸುವು, ಒಗರಿನಲ್ಲಿಯೂ ಮನಸ್ಸು ಪಾಡಾಗಿರಬಹುದು ಮಾಗಿರಬಹುದು. ವೃದ್ಧಾಪ್ಯದಲ್ಲಿ ಇನ್ನೂ ಮನ ಹೋಗಿರಲೂ ಇಲ್ಲ."

ನನಗೆ ಬುದ್ಧಿ ಕೊನೆಯುವರೆಗೂ ಭೆಟ್ಟಿಯಾಗದ ವ್ಯಕ್ತಿ.

ನಾನೇಕೆ ಈಗ ಈ ಹೊಸ ಹೊಲಸಿನಲ್ಲಿ ಬಿದ್ದೆ ?

ಆಶೆ—!

ನನಗೆ ಈಗ ಏನು ಆಶೆಯಿತ್ತು ?

ಭಿಕ್ಷೆಯಿಂದ ಹೊಟ್ಟೆ ತುಂಬುತ್ತಿತ್ತು.

ನನಗೆ ಪ್ರಾಯದ ಕಾಲದಲ್ಲಿದ್ದ ಯಾವ ದೈಹಿಕ ಅಭಿಲಾಷೆಗಳೂ ಈಗ ಉಳಿದಿಲ್ಲ.

ಎಲ್ಲಿಯೋ ತಿರುಗಾಡಿ ಬದುಕಿಕೊಂಡು ನನಗೆ ತಿಳಿದಂತೆ ಹಾಯಾಗಿರಬಹುದಿತ್ತು ?

ನನಗೆ ತಿಳಿದಂತೆ...?

ಎಂದು ಏನು ತಿಳಿದಿತ್ತು ?

ಅಂದು ಶೀನ ಹೇಳಿದ್ದು ನಿಜ.

ಬಳಿಕ ಸ್ವಾಮಿಗಳು ನುಡಿದದ್ದು ಸತ್ಯ. ಇಂದು ಈ ಕಾಲದಲ್ಲಿ ಶಾಮಣ್ಣನ ಮಾತು ನಂಬದೆ ಮೆಚ್ಚಿದೆ!

ಎಂದೂ ಯಾವ ದಿನವೂ ಗಂಗಾನಿಗೆ ಸ್ವಂತ, ತನಗೆ ತಿಳಿದದ್ದೇನು ?

ನನಗೆ ಏನೂ ತಿಳಿಯಲಿಲ್ಲವೆಂದೇ ನನ್ನ ಗತಿ ಹೀಗಾಯಿತು.

ಆಗಲಿ, ಪಾಪ ! ಶಾಮಣ್ಣ ಈಗ ನನ್ನನ್ನು ವಂಚಿಸಿದ್ದಾದರೂ ಏನು ? ಅವನಾಗಿ ನನ್ನನ್ನು ಮನೆಗೆ ಕರೆಯಲಿಲ್ಲ. ನಾನೇ ಹೋದೆ. ನನ್ನನ್ನು ಕಾಶಿಗೆ ಕಳಿಸಲಾರೆ ಎಂದಿಲ್ಲ ಅವನು.

ನಾನು ಶಾಮಣ್ಣನ ಅಣ್ಣನ ಹೆಂಡತಿ ಎಂದು ಹೇಳುವುದರಿಂದ ಅವನಿಗೆ ಲಾಭವಾಯಿತು. ನನಗೆ ಹಾನಿಯಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಗಂಗಾ ಏನೇನೋ ವಿಚಿತ್ರ ವಿಚಾರಗಳ ಗೊಂದಲದಲ್ಲಿ ನಿತ್ಯವೂ ತೊಳಲಾಡುತ್ತಿದ್ದಳು.

ಶಾಮಣ್ಣನ ಕತೆಯೂ ಒಂದು ವಿಚಿತ್ರ !

ತನ್ನ ಪ್ರಾಯದ ಕಾಲದಲ್ಲಿ ಲೆಕ್ಕಣಿಕೆಯಿಂದ ಆತ ಮಾಡಿದ ಪರಾಕ್ರಮಕ್ಕೆ ಲೆಕ್ಕವಿಲ್ಲ. ಕೊನೆಗೆ ಇವನ ಚಿಕ್ಕ ತಮ್ಮ ಇವನನ್ನು ಇರುಕಿನಲ್ಲಿ ಸಿಕ್ಕಿಸಿ ಮನೆಮಾರು ದೋಚಿದ್ದ, ಆದರೆ ಈ—

ಗೊಬ್ಬರದ ಬೆಂಕಿ ಸಮಯಕ್ಕಾಗಿ ಕಾದಿತ್ತು. ಗಂಗಾ ಅವನ ಮನೆ ಬಾಗಿಲಿಗೆ ಬಂದು ಕೇಳಿದ ಮಾತು...?

"ಗಂಡಸರು ಯಾರೂ ಈ ಮನೆಯಲ್ಲಿ ಇಲ್ಲವೆ ?" ಶಾಮಣ್ಣನ ಗಂಡಸು ತನ ವೃದ್ಧಾಪ್ಯದಲ್ಲಿ ಕೆರಳಿತು. ಪ್ರಾಯದಲ್ಲಿ ನಿಂತುಹೋದ ಕಸುವಿಗೆ ಈಗ ಹೊಸ ರಭಸ.

ತಲೆ ಓಡಿತು, ಗಂಗಾನನ್ನು ತನ್ನ ಸದ್ಯ ಅಣ್ಣನ ಹೆಂಡತಿಯಾಗಿ ಸಿದ್ಧಪಡಿಸಿ ಅವನಿಗೆ ನ್ಯಾಯವಾಗಿ ಬರುವ ಆಸ್ತಿ ತನ್ನ ರಾಜಕೀಯ ತಮ್ಮ ರಾಜಕಾರಣದ ಪದ್ಧತಿಯಂತೆ ದುಡಿಯದೆ ತಿನ್ನುತ್ತಾನಲ್ಲ ಅದನ್ನು ತಾನು ಹೊತ್ತೊಹಾಕಬೇಕು ಎಂದು ಹೊಸ ಯೋಜನೆ ಹಾಕಿದ.

ಅನೇಕ ದಿನಗಳ ಜಾಣತನದ ಹೋರಾಟದ ನಂತರ ನಿನ್ನೆಯೆ ಕೋರ್ಟು ತೀರ್ಮಾನ ಬಂತು !

ಶಾಮಣ್ಣ ಹಿಗ್ಗಿ ಹೋದ !

ವಸಂತ ಬಂದು ಗಂಗಾನಿಗೆ ನಮಸ್ಕಾರ ಮಾಡಿದ. ಮನೆಯ ಊರ ದೇವರು ಹೊಟ್ಟೆಯಲ್ಲಿ ಜಂತುಗಳಾಗುವಷ್ಟು ಸಿಹಿ ತಿಂದರು.

ದಕ್ಷಿಣಾ ಪಥ

ಗಂಗಾನಿಗೂ ಹಿಗ್ಗೇ ಅಲ್ಲವೆ ?

"ಧರ್ಮಕ್ಕೆ ಜಯ" ಎಂದಳು.

ದೇವರು ಲೋಕದಲ್ಲಿ ಸಜ್ಜನರ ಬೆನ್ನಹಿಂದಿರುತ್ತಾನೆ. ಧರ್ಮವನ್ನೆ ಯಾವಾಗಲೂ ಕಾಯುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮನೆ ಹಿಗ್ಗಿನಲ್ಲಿ ತುಳುಕಾಡಿತು. ಎಲ್ಲರೂ ಗಂಗಾಬಾಯಿಯನ್ನು ಅಂಗೈಯಲ್ಲಿ ಹಿಡಿದರು.

ಶಾಮಣ್ಣನಿಗೇನಾಯಿತು ?

ಐವತ್ತು ಕೂರಿಗೆ—ಇನ್ನೂರು ಎಕರೆ—ಜಮೀನು ಬಂತು. ಮೇಲಾಗಿ ನ್ಯಾಯಾಲಯದಲ್ಲಿ ಇಷ್ಟು ದಿನ ಕೋರ್ಟು ತನ್ನ ವಶದಲ್ಲಿಟ್ಟುಕೊಂಡ ಹಣ ಬೇರೆ !

ಸಂತೋಷದ ಉಕ್ಕಿನಲ್ಲಿ ಮನೆಯಲ್ಲಿ ನಾಲ್ಕಾರು ದಿನ ಸಮಾರಂಭಗಳು.

ಗಂಗಾನಿಗೆ ಕಾಶಿಯ ಕಡೆಗೆ ಎಳೆತ ! ನಾಳೆ-ನಾಡಿದ್ದು ಶಾಮಣ್ಣನನ್ನು ಕೇಳಿ ಹೊರಟರಾಯಿತು. ಈಗೇನು ಆತ ತುಂಬ ಖುಶಿಯಲ್ಲಿಯೇ ಇದ್ದಾನೆ.

ಶಾಮಣ್ಣ ನ್ಯಾಯಾಲಯದ ತೀರ್ಪು ತಂದು ಮನೆಯಲ್ಲಿ ಕಾಣಬಂದ ವರಿಗೆ ಮತ್ತೆ ಮತ್ತೆ ಓದಿ ಹೇಳುತ್ತಾನೆ.

"ನ್ಯಾಯಾಧೀಶರು ಎಂತಹ ಮಾತು ಬರೆದಿದ್ದಾರೆ ಗೊತ್ತೆ ! ಮುತ್ತಿ ನಂತಹುದು."

'ಹಿಂದೂ ಮಹಿಳೆಯರು ತಮ್ಮ ಗಂಡನನ್ನು ದೇವರೆಂದು ತಿಳಿಯು ತ್ತಾರೆ. ಗಂಡನ ಹೊರತು ಇನ್ನೊಬ್ಬರನ್ನು ಕಣ್ಣೆತ್ತಿ ಅವರು ನೋಡಲಾರರು!

ಪಾಪಭೀರುವೆಂದು ವಿರೋಧಪಕ್ಷದವರೇ ಒಪ್ಪಿಕೊಳ್ಳುವ ಈ ಮಹಿಳೆ ತನ್ನವನಲ್ಲದವನನ್ನು ಗಂಡ ಎಂದು ಒಪ್ಪುವುದು ಸಾಧ್ಯವಿಲ್ಲ.

'ಈಗ ಕೋರ್ಟಿನ ಮುಂದೆ ಹಾಜರಾಗಿ ನಿಂತಿರುವ ಈ ಮಹಿಳೆ ರಾಮ ರಾಯನ ಲಗ್ನದ ಹೆಂಡತಿ ಎನ್ನುವುದರಲ್ಲಿ ಶಂಕೆ ಇಲ್ಲ. ಅವಳಿಗೆ ದತ್ತು ಪಡೆದುಕೊಳ್ಳಲು ಅಧಿಕಾರ ಇದೆ.

ಅವಳು, ಅವನ ದತ್ತುಮಗ ಆಸ್ತಿಯ ಈ ಹಕ್ಕಿಗೆ ಬಾಧ್ಯರು. ಕೋರ್ಟು ವಿವಾದದಲ್ಲಿದ್ದ ರಾಮರಾಯನ ಆಸ್ತಿಯನ್ನು ಈ ಅವನ ವಿಧವೆ ಹಾಗು ದತ್ತುಪುತ್ರನಿಗೆ ಕೊಡಲು ತೀರ್ಮಾನಿಸುತ್ತದೆ.'

ಗಂಗಾನಿಗೆ ಈ ತೀರ್ಮಾನ ಹಲವು ಬಾರಿ ಕಿವಿಯ ಮೇಲೆ ಬಿದ್ದಿತ್ತು !

ಶಾಮಣ್ಣ ಹೇಳುವ ಧರ್ಮವಿಜಯ, ತಾನು ನಂಬಿದ ಧರ್ಮವಿಜಯ ಅವಳನ್ನು ತಿವಿಯಿತು.

ಒಂದು ದಿನ ಶಾಮಣ್ಣನ ಮನೆಯಲ್ಲಿ ಅವರ ಹಳೆಯ ಆಳು ಮನುಷ್ಯ ನಿಂಗ ಕುಳಿತುಕೊಂಡಿದ್ದ. ನಿಂಗ ಶಾಮಣ್ಣನ ಒಳ್ಳೆಯ ದಿನಗಳಲ್ಲಿ ಆಳಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸೇವೆ ಸಲ್ಲಿಸಿದಾತ. ಅಲ್ಲದೆ ಶಾಮಣ್ಣನ ಒಡನಾಡಿ. ಆ ದಿನಗಳಲ್ಲಿ ಶಾಮಣ್ಣನ ಹಡಗಿಗೆ ಬಿದ್ದ ತೂತಿಗೆ ತನ್ನ ದುಡಿಮೆಯ ಕೆಸರು ಮೆತ್ತಿ ಮುಳುಗದಂತೆ ತಡೆಯಲು ಹೆಣಗಿದಾತ. ಆದರೆ ಸಾಧ್ಯವಿಲ್ಲದ್ದಕ್ಕೆ ಈಗ ಸ್ವಂತ ಮನೆಮಾರು ಮಾಡಿಕೊಂಡು ಇದ್ದಾತ !

ಧರ್ಮ ಎಂದರೆ ಆತನಿಗೊಂದು ಒಣ ಕುಂಬಳಕಾಯಿ, ಆದನ್ನು ನಂಬಿ ನಡೆದಾತ. ಶಾಮಣ್ಣನಿಗೆ ನಿಂಗನಲ್ಲಿ ಅಪಾರ ಕೃತಜ್ಞತೆ, ಪ್ರೇಮ.

ಶಾಮಣ್ಣ ಹೇಳಿದ "ನಿಂಗ, ದೇವರು ಕಾಯುತ್ತಾನೆ ಎನ್ನುವ ವಿಶ್ವಾಸ ದೊಡ್ಡದು ! ನಾನು ಅದನ್ನು ಕಾಯಂ ಇಟ್ಟುಕೊಂಡು ಬಂದೆ ; ಅಂತೇನೆ ಒಂದು ದಿನ ಕಣ್ಣು ತೆರೆದ.

"ನೀನು ಕೂಡ ತಿಳಿದುಕೊಂಡಿದ್ದೀ, ನಮ್ಮಣ್ಣ ರಾಮಣ್ಣನ ಹೆಂಡತಿ, ಸೀತಾಬಾಯಿ ಸತ್ತೇಹೋದಳು ಎಂದು. ನಾವೂ ಹುಚ್ಚರು ಹಾಗೇ ಅಂದು ಕೊಂಡೆವು.

ಒಂದು ತಂತಿ ಬಂತು. ಆ ದಿನ ನೀನೂ ಇದ್ದಿ ಮನೆಯಲ್ಲಿ. ಎಲ್ಲರೂ ಅತ್ತೆವು. ಮುಂದೆ ನಾನು ಮಾತನಾಡಿಸಲು ಹೋದೆ..."

ನಿಂಗ ಸುಮ್ಮನೆ ಕುಳಿತು ಕೇಳುತ್ತಿದ್ದ. ಈಗ "ಅಲ್ಲ ಶಾಮಣ್ಣ ನೀವು ಆವರ ತಂದೆಯ ಹತ್ತಿರ ಹೋಗಿ ಬಂದು ಸೀತಮ್ಮ ಸತ್ತೇಹೋಗಿದ್ದಾಳೆ ಎನ್ನುವ ಹಾಗೆ ಆಗ ಸುದ್ದಿ ಹೇಳಿದ್ದಿರಿ.

ಮೈಲಿಗೆ, ನಿಮ್ಮ ಬ್ರಾಂಬ್ರು ಏನೆಲ್ಲ ಮಾಡಬೇಕು ಅವನ್ನು ಮಾಡಿದ್ದಿರಿ. ಈಗ ಏನು ದೈವದ ಚಮತ್ಕಾರ..."

"ದೈವ ಅಂದರೇನೇ ಹೀಗೆ! ನಮ್ಮಣ್ಣ ಎಷ್ಟು ಸಭ್ಯ ಅನ್ನೋದು ನಿನಗೂ ಗೊತ್ತು. ಅವನ ವಂಶ ಮುಳುಗಬಾರದು ಎನ್ನುವುದಕ್ಕೆ ದೇವರಿಗೂ ಚಿಂತೆ ಕೊನೆಗೊಂದು ದಿನ ರಾಮಣ್ಣನ ಹೆಂಡತಿ ತಾನೇ ಮನೆಗೆ ಬರಬೇಕೆ ?

ದೇವರು ಕಪಟನಾಟಕ ಸೂತ್ರಧಾರ ಅನ್ನೋದು ನಿಜ ನಿಂಗ !"

ನಿಂಗ ತಬ್ಬಿಬ್ಬಾಗಿ ಹೋದ. ಶಾಮಣ್ಣ ಎಲ್ಲ ವಿಧದಿಂದಲೂ ಧರ್ಮ ವನ್ನು ಜಯಸಿದ.

'ದಕ್ಷಿಣಾಪಥ'

ಕಾಶೀಕ್ಷೇತ್ರದಲ್ಲಿ ದೊಡ್ಡ ತೂಗು ಹಲಗೆ.

ದೊಡ್ಡ ದೊಡ್ಡ ... ಕಟ್ಟಡ ... ಹೊರಗೆ ಯಾವಾಗಲೂ ನಾಲ್ಕಾರು ಕಾರುಗಳು, ಹತ್ತಾರು ರಿಕ್ಷಾಗಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ದಕ್ಷಿಣಾಪಥ !!

ದಕ್ಷಿಣ ದೇಶದ ಯಾತ್ರಿಕರು ಕಾಶಿಗೆ ಬಂದಾಗ ಅವರಿಗೆ ಸಕಲ ಸೌಕರ್ಯಗಳನ್ನು ಕಲ್ಪಿಸಿಕೊಡುವ ಏಕೈಕ ಸ್ಥಳ.

ದಕ್ಷಿಣದಿಂದ ಕಾಶಿಗೆ ಬಂದು ಇಲ್ಲಿ ಉಳಿದುಕೊಂಡು ಹೋಗುವವರ ಪ್ರತಿಕ್ರಿಯೆ ಸರ್ವೇ ಸಾಮಾನ್ಯ !

ಕ್ಷೇತ್ರದಲ್ಲಿ ಇಂತಹದೊಂದು ನವೀನ ಸೌಕರ್ಯವುಳ್ಳ ಸ್ಥಳ ಇಲ್ಲದೇ ಹೋದರೆ ದೊಡ್ಡ ತೊಂದರೆ !

ಮದ್ರಾಸಿಗಳಾದ ನಮಗೆ ಉತ್ತರದಲ್ಲಿ ಇನ್ನೆಲ್ಲಿಯೂ ಊಟ–ಉಪಚಾರ ಚೆನ್ನಾಗಿ ಅನ್ನಿಸದು.

ನಾವು ಮದ್ರಾಸಿನಲ್ಲಿಯೆ ಇದ್ದಂತೆ ಭಾವನೆಯಾಗುತ್ತದೆ ದಕ್ಷಿಣಾಪಥದಲ್ಲಿ ಉಳಿದರೆ.

ನಮ್ಮ ಕಡೆಯ ರೊಟ್ಟಿ, ಚಪಾತಿ ಊಟ ನಮಗೆ ಕಾಶಿಯಲ್ಲಿ ಸಿಕ್ಕುತ್ತದೆ, ಎಂದರೆ ಇದಕ್ಕಿಂತ ಏನು ಸಂತೋಷ ಬೇಕು ?

ನಮ್ಮ ತಂದೆಗೆ ಹೋಳಿಗೆಯ ಮೇಲೆ ಮಮತೆ. ಆ ದಿನ ಶ್ರಾದ್ಧದ ದಿನ. ಹೋಳಿಗೆಯೇ ಆಗಬೇಕೆಂದು ನಾವು ಹೇಳಿದರೆ ಎಂತಹ ಹೋಳಿಗೆ ?

ನಮ್ಮ ಮನೆಯಲ್ಲಿ ಆಗಿದ್ದಿಲ್ಲ ?

ದಕ್ಷಿಣಾಪಥದ ವ್ಯವಸ್ಥೆಯೇ ಅಷ್ಟು.

ನಿತ್ಯ ಕನ್ನಡದಲ್ಲಿ ಒಂದು ಹರಿಕತೆ, ಮರಾಠಿಯಲ್ಲಿ ಕೀರ್ತನ, ತೆಲುಗಿನಲ್ಲಿ ತಮಿಳಿನಲ್ಲಿ ಪ್ರವಚನ ; ದಕ್ಷಿಣದಿಂದ ಹೋದ ಯಾವ ಜಾತಿಯವರಿಗೆ ಹೇಗೆ ಬೇಕು ಹಾಗೆ ವ್ಯವಸ್ಥೆ.

ಈಚೆಯ ಪ್ರವಾಸಿಗಳೆಲ್ಲ ಬಾಯ್ತುಂಬ ಈ ಸಂಸ್ಥೆಯನ್ನು ಹೊಗಳಬೇಕು.

ದಕ್ಷಿಣ ಭಾರತದಿಂದ ಯಾವ ಭಾಷೆಯ ಜನರೇ ಹೋಗಲಿ ಎಲ್ಲರಿಗೂ ಮನೆ ಮಾತಿನಲ್ಲಿಯೆ ಸತ್ಕಾರ.

ವ್ಯವಸ್ಥಾಪಕರ ಮಾತು ಎಂತಹ ಮೃದು !

ಅಮ್ಮಾ, ತಾಯಿ, ಅಕ್ಕ, ಅವ್ವ ; ಗಂಡಸರೊಡನೆಯೂ ಅಷ್ಟೇ ಸೊಗಸಾದ ವ್ಯವಹಾರ.

ಗಂಗಾ ಕಾಶಿಯಲ್ಲಿ ಪ್ರಕಟಳಾದಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರೆ ಈ ಪುಣ್ಯಕ್ಷೇತ್ರಕ್ಕೆ ಬರಲು ಅವಳು ಎಷ್ಟು ವರುಷ ತೊಳಲಾಡಿದಳು.

ತನ್ನ ಜೀವನವನ್ನೇ ಸಣ್ಣಾಗಿ ತೇದಳು.

ಗಂಗಾ ಕಾಶಿಗೇಕೆ ಬರಬೇಕು ?

ಅವಳು ತನ್ನನ್ನು ಹಗಲೆಲ್ಲ ಕೇಳಿಕೊಂಡು ಆ ಮಾತಿಗೆ ತಾನೇ ಉತ್ತರ ಕೊಟ್ಟು ಸಾಗಿದ್ದಾಳೆ.

ತನ್ನ ಚಿಕ್ಕಮ್ಮನ ಬಯಕೆ !

ದೊಡ್ಡವಳಾದ ಬಳಿಕ ತಾನು ಮಾಡಿದೆ ಎಂದುಕೊಂಡ ಪಾಪಗಳೆಲ್ಲ ತೊಳೆಯುವ ಶಕ್ತಿ ಸಣ್ಣ ಪುಟ್ಟ ಚಿಲ್ಲರೆ ಕ್ಷೇತ್ರಗಳಿಗಿಲ್ಲ ಎಂದು ಅವಳು ನೊಂದಳು.

ಮಹಾಕ್ಷೇತ್ರವೇ ತನ್ನ ಪಾಪ ತೊಳೆಯಬೇಕು. ಕಾಶಿ ಇಲ್ಲದಿದ್ದರೆ ತನ್ನ ಪಾಪ ಇನ್ನಾರಿಗೂ ತೊಳೆಯಲು ಸಾಧ್ಯವಿಲ್ಲ. ಕಾಶಿಯಲ್ಲಿ ನಿಂತು ಗಂಗೆಯಲ್ಲಿ ಮಿಂದು ಚಿಕ್ಕಮ್ಮನಿಗೆ ಒಂದು ಬೊಗಸೆ ನೀರು ಬಿಟ್ಟರೆ ತನ್ನ ಜನ್ಮ ಸಾರ್ಥಕ.

ಪ್ರತಿಕ್ಷಣಕ್ಕೂ ಗಂಗಾ ತಾನು ಮಾಡಿದ ಪಾಪಗಳನ್ನು ಅದರ ಹಲವು ಮುಖಗಳನ್ನು ನೆನೆದುಕೊಳ್ಳುವಳು.

ನೆನೆದಾಗಲೊಮ್ಮೆ ತಾನು ಇದೀಗ ತಾಜಾ ಪಾಪಗಳನ್ನೇ ಮಾಡಿದ್ದೇನೆ ಎಂದು ಭಯಪಡುವಳು. ಈ ಪಾಪಗಳೇ ತನ್ನನ್ನು ಇಂತಹ ಅವಸ್ಥೆಗೆ ನೂಕಿವೆ. ಈಗ ನಾನು ಕಾಶಿಯನ್ನು ಕಾಣದೆ ಸತ್ತು ಹೋದರೆ...

ನನಗೆ ಸದ್ಗತಿ ಇಲ್ಲ.

ನಾನು ನರಕಕ್ಕೆ ಹೋಗುತ್ತೇನೆ.

ನರಕ ! ಅಯ್ಯೋ ಅದೆಷ್ಟು ಘೋರ ?

ವ್ಯಭಿಚಾರಿಗೆ...

ನಿಗಿನಿಗಿ ಕಾಯ್ದು ಉರಿಯುವ ಕಬ್ಬಿಣದ ಕಂಬ ಅಪ್ಪಲು ಹೇಳುತ್ತಾರೆ!

ಎಳೆದು ಅಪ್ಪಿಸುತ್ತಾರೆ !

ಗಂಡನನ್ನು, ನಂಬಿದವರನ್ನು ವಂಚಿಸಿದರೆ ಹಾವು ಚೇಳು ಕಚ್ಚಿಸುತ್ತಾರೆ!!

ಇನ್ನೊಬ್ಬರ ವಸ್ತು ಕದ್ದರೆ, ಕದ್ದವರಿಗೆ ಆಶ್ರಯಕೊಟ್ಟರೆ ! ತಲೆಯನ್ನು ಗಾಣದಲ್ಲಿ ಹಾಕಿ ಅರೆಯುತ್ತಾರೆ.

Sri Vidyabharathi Book Centre, Sringeri

ಪುರಾಣದಲ್ಲಿ, ಚಿತ್ರಗಳಲ್ಲಿ ಕೇಳಿ ಕಂಡ ನರಕ !!

CC-O. In Public Domain. Digitized by eGangotri

ಘೋರ! ಭಯಂಕರ!! ನೆನೆದೇ ನಡುಗುತ್ತಿದ್ದಳು. ಆದರೆ ಇಂದು ಕಾಶಿಗೆ ಬಂದಿದ್ದಾಳೆ. ಅವಳಿಗೆ ಇದ್ದುದರಲ್ಲಿ ತುಂಬ ನೆಮ್ಮದಿ!

ನಿಲ್ದಾಣದಿಂದ ಹೇಗೂ ಹೊರಗೆ ತನ್ನನ್ನು ನೂಕಿಕೊಂಡು ಬಂದಳು!

ನಡೆದು ಬರುತ್ತಿರುವ ಒಂದು ಕೆಂಪು ಹೆಣ.

ನಿಲ್ದಾಣದಲ್ಲಿ ಸುಳಿದಾಡುತ್ತಿದ್ದ ಟ್ಯಾಕ್ಸಿ ಡ್ರೈವರ್ ನೋಡಿದ.

ಬಗಲಲ್ಲಿ ಹರಕು ಬಟ್ಟೆಯ ಒಂದು ಗಂಟು; ಕೈಯಲ್ಲಿ ಒಂದು ಮುಳ್ಳು ಕಟ್ಟಿಗೆಯ ತುಂಡು; ಕೋಲು ಕೂಡ ಅಲ್ಲ.

ಹೊರಗೆ ಬಂದವಳೇ ಕುಸಿದು ಬಿದ್ದಳು! ಸುತ್ತಲಿದ್ದವರು ಯಾರೊ ಸ್ವಲ್ಪ ಎಳೆದು ತಂದು ಬದಿಗೆ ಹಾಕಿದರು. ಈ ಗಲಾಟೆ ನಡೆದಾಗಲೆ ಡ್ರೈವರ್ ಕುತೂಹಲದಿಂದ ನೋಡಿದ.

ತಮ್ಮ ಭಾಗದ ಹೆಂಗಸು! ಗಲಾಟೆ ಕಡಿಮೆಯಾದ ಮೇಲೆ ಮೆಲ್ಲಗೆ ಹತ್ತಿರ ಬಂದು ಕೇಳಿದ,

"ಎಲ್ಲಿಗೆ ಹೋಗಬೇಕು ಅಮ್ಮಾ ನಿಮಗೆ ?"

ಕನ್ನಡಮಾತು! ಅದೂ ಕಾಶಿಯಲ್ಲಿ ?

ಗಂಗಾ ಹಿಗ್ಗಿ ಹೋಗಿದ್ದಳು. ಒಂದು ಕ್ಷಣ ಕಾಶಿಗೆ ಬಂದ ಹಿಗ್ಗಿಗಿಂತಲೂ ಕನ್ನಡಮಾತು ಕಿವಿಗೆ ಕೇಳಿದ ಹಿಗ್ಗು.

ಹೆಚ್ಚಿನ ತೂಕದ್ದು !

ಕೆಲಹೊತ್ತು ಗಂಗಾ ಮಾತನಾಡಲಿಲ್ಲ. ಮಾತನಾಡಬೇಕೆಂದಿದ್ದರೂ ಶಕ್ತಿ ಇರಲಿಲ್ಲ.

ಮತ್ತೆ ಡ್ರೈವರ್ ಕೇಳಿದ "ಅಮ್ಮಾ, ನೀವು ಈಗ ಎಲ್ಲಿಗೆ ಹೋಗಬೇಕು?"

"ಗಂಗಾನದಿ—!

ವಿಶ್ವೇಶ್ವರನ ಗುಡಿಗೆ"

"ನಿಜ ಅಮ್ಮ. ಕಾಶಿಗೆ ಬಂದವರೆಲ್ಲ ಅಲ್ಲಿ ಹೋಗಲೇಬೇಕು ? ಉಳಿದು ಕೊಳ್ಳುವುದೆಲ್ಲಿ ?"

"ಅಪ್ಪಾ, ನಾನು ಇಲ್ಲಿ ಉಳಿಯಲು ಬಂದೇ ಇಲ್ಲ. ಇಲ್ಲಿಯೂ ಉಳಿದೆ ನೆಂದರೆ..."

ಡ್ರೈವರನಿಗೆ ಮುದುಕಿ ತುಂಬ ವ್ಯಥೆಪಟ್ಟವಳಂತೆ ಕಂಡಿತು. ಇಂತಹ ಸಾವಿರ ಜನರನ್ನು ಕಂಡವನು ಆತ. ನಿತ್ಯವೂ ರೈಲು ನಿಲ್ದಾಣದಲ್ಲಿ ಕಾಯ್ದು ಪ್ರವಾಸಿಗಳನ್ನು ದಕ್ಷಿಣಾಪಥಕ್ಕೆ ಕರೆದುಕೊಂಡು ಹೋಗುವುದೆ ಅವನ ಡ್ಯೂಟಿ!

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲಿ ಬಂದವರಿಗೆ ತಮ್ಮ ಪಾಪದ ಪ್ರಜ್ಞೆ, ಪಶ್ಚಾತ್ತಾಪದ ಕುದಿ ವ್ಯಕ್ತವಾಗಿದ್ದು ಆಶ್ಚರ್ಯವಲ್ಲ. ಆತ ಈ ಮುದುಕಿಯನ್ನು ಇನ್ನೇನು ಬಿಟ್ಟು ಚನ್ನಾದ ಗಿರಾಕಿ ನೋಡಬೇಕೆನ್ನುವವ.

ಏಕೋ ಕನಿಕರ ಬಂತು.

"ಯಾವ ಊರು ಅಮ್ಮ ನಿಮಗೆ...?"

"ಈಗೋ ಇನ್ನೊಂದು ನಿಮಿಷಕ್ಕೋ ಇಲ್ಲವಾಗುವಳಿಗೆ ಹಿಂದಿನ ಊರು ತಗೊಂಡು ಏನು ಮಾಡುವುದಯ್ಯಾ."

ಅವಳ ಧ್ವನಿಯಲ್ಲಿ ಅಸಹಾಯಕತೆ. ಆದರೆ ಕನ್ನಡ ಎಂದು ಇವನಿಗೆ ಆಕರ್ಷಣೆ.

"ಎಲ್ಲರೂ ಆ ಊರಿಗೆ ಹೋಗುವವರೇ ತಾಯಿ. ನೀವು ಯಾವ ಊರಿನಿಂದ ಬಂದಿರಿ...?"

ಮುದುಕಿ ತನ್ನ ಊರ ಹೆಸರು ಹೇಳಿದ ಕೂಡಲೆ ಡ್ರೈವರನ ಕಣ್ಣು ಚಮಕಿಸಿದವು !

ಅವನು ಕಣ್ಣು ಅರಳಿಸಿ ನೋಡಿದ !

ಗುರುತು ಇಲ್ಲ ಹಾಳಾದ ಊರನ್ನು ನೋಡಿದವರ ಹಾಗೆ ಎಲ್ಲೊ ಗುರುತು ಹತ್ತಿದ ಜಾಗ ಕಾಣಬೇಕು.

ಆದರೆ ಅದನ್ನು ಮರೆಸುವ ಹೊಸ ಅಂಶಗಳೇ ಜಾಸ್ತಿ ! ಡ್ರೈವರ್ ಕಕ್ಕಾವಿಕ್ಕಿಯಾದ. ಮತ್ತೆ ಹಾಗೇ ನೋಡುತ್ತ ನಿಂತ......

ಮುದುಕಿಗೆ ಡ್ರೈವರ್ ಯಾಕೆ ನಿಂತುಕೊಂಡ ಎನ್ನುವ ಗೊಡವೆಯಿಲ್ಲ, ತಾನು ಕಾಶಿಗೆ ಬಂದಿದ್ದೇನೆ. ಆಯಿತು ಇನ್ನೇನು ಗಂಗಾಸ್ನಾನ !

ತನ್ನ ತೊಗಲಿಗಿಂತಲೂ ಭದ್ರವಾಗಿ ಅಂಟಿಕೊಂಡ ಹಳೆಯ ಪಾಪಗಳೆಲ್ಲ ತೊಳೆದು ಹೋಗುವವು.

"ಅಮ್ಮಾ ನಿಮ್ಮ ಊರಿನಲ್ಲಿ ಅಬ್ದುಲ್ ಎಂತ ಮುಸಲ್ಮಾನರ ಹುಡುಗ ಇದ್ದ ಬಹಳ ದಿನಗಳ ಹಿಂದೆ, ನಿಮಗೆ ಗೊತ್ತೇ !"

ಗಂಗಾನಿಗೆ ಅಬ್ದುಲ್‌ನ ಹೆಸರು ಕೇಳಿದೊಡನೆ ಚಿಟ್ಟನೆ ಚೀರಬೇಕೆನ್ನಿಸಿತು. ಅವಳಿಗೆ ಮೂವತ್ತೈದು ವರ್ಷಗಳ ಹಳೆಯ ನೆನಪು ಆದಾಗಿರಲಿಲ್ಲ.

ತಾನು ಒಂದು ನಿಮಿಷದಲ್ಲಿ ಅಷ್ಟು ಹಿಂದೆ ಹೋಗಿ ನಿಂತಿದ್ದಳು. ಈಗ ಅವಳಿಗೆ ನೆನಪು ಇಲ್ಲ, ಅದು ಅದೇ ತಾಜಾ ಅನುಭವ.

Sri Vidyabharathi Book Centre, Sringeri

ಅಬ್ದುಲ್ ತನ್ನ ಶೀನನ ಗೆಳೆಯ.

 CC-O. In Public Domain. Digitized by eGangotri

ತನ್ನ ಮೈತುಂಬ ಹಾಕಿಕೊಂಡ ಚಿನ್ನ ಕೊಟ್ಟ ಕೈ ಅಬ್ದುಲ್‌ನದು...
ಅಷ್ಟು ವರುಷದ ದಾರಿ ಎಲ್ಲ ಮರೆತು ಹೋಗಿ ಕೇಳಿದಳು,
"ಅಬ್ದುಲ್ ನಿನಗೆ ಹೇಗೆ ಗೊತ್ತು...?"
"ಅಮ್ಮ ನಾನೇ ಅಬ್ದುಲ್."
ಗಂಗಾಗೆ ತನ್ನ ಕಣ್ಣು ನಂಬದಾಯಿತು.
ಅವನ ಮುಖವನ್ನು ತನ್ನ ಮಂಜುಗಣ್ಣಿನಿಂದ ನೋಡಿದಳು.
ಏನು ಗುರುತು ಹತ್ತಬೇಕು.
ಅದರಲ್ಲಿ ಹಾಳೂರನ್ನು ಮುಸುಕಿದ ಗಿಡಗಂಟಿ ಹಾಗೆ ಅವನ ಮುಖದಲ್ಲಿ ಬಿಳಿ ಗಡ್ಡ ಬೇರೆ.
ಗಂಗಾ ನಂಬದಾಗಿ ಕೇಳಿದಳು,
"ನೀನೆ ಅಬ್ದುಲ್ ನಿಜವೆ....?"
"ನಿಜ ಕಣಮ್ಮ ನಾನೆ ಅಬ್ದುಲ್."
"ಈ ಕ್ಷೇತ್ರತೀರ್ಥಗಳಲ್ಲಿ ಮೋಸಗಾರರು ಬಹಳ. ನನ್ನ ಸಾವಿರ ರೂಪಾಯಿಗಳನ್ನೆಲ್ಲ ಇಂತಹ ಕಳ್ಳರೇ ಕದ್ದಿದ್ದಾರೆ...ನಿಜವಾಗಿಯೂ ನೀನು ಅಬ್ದುಲ್‌ನಾದರೆ ನಿನ್ನ ಗೆಳೆಯನ ಹೆಸರು ಹೇಳು."
ಗಂಗಾಗೆ ವೃದ್ಧಾಪ್ಯದಲ್ಲಿಯೂ ಪರೀಕ್ಷಿಸುವ ಚಪಲ....
"ಅಮ್ಮಾ, ನಾನು ಪರೀಕ್ಷೆಯಲ್ಲಿ ಎಂದೂ ಫೇಲ್ ಆದವನೇ ಅಲ್ಲ...."
"ಶೀನ ನನ್ನ ಗೆಳೆಯ ಅಲ್ಲವೆ? ನಾನು ಎಷ್ಟು ದಿನ ನಿಮ್ಮನ್ನು ಭಾಬಿ ಎಂದಿದ್ದಿಲ್ಲ."
ಗಂಗಾನಿಗೆ ಅದೆಲ್ಲ ನೆನಪಾಯಿತು.
ಅಬ್ದುಲ್ ನನ್ನ ಕೊನೆಯ ಗಳಿಗೆಯಲ್ಲಿ ಬಂದನಾದರು ಸಂತೋಷದ ಕ್ಷಣ ಕಂಡೆ.
"ಶೀನ ಎಲ್ಲಿದ್ದಾನೆ ಗೊತ್ತೆ ಅಬ್ದುಲ್....?"
ಅಬ್ದುಲ್ ಒಂದು ಕ್ಷಣದಲ್ಲಿಯೆ ಉತ್ತರ ಹೇಳಿದ.
"ಇಲ್ಲ ಅಮ್ಮಾ ನಾನು ಅವನನ್ನು ಕಾಣದೆ ತುಂಬ ದಿನ ಆಯಿತು. ಹೆಸರು ಕೂಡ ಮರೆತುಹೋಗಿತ್ತು. ನೀವು ಹೇಳಿದಾಗಲೆ ಅವನ ಯಾದ್ ನನಗೆ...."
"ಅಯ್ಯೋ ಅಬ್ದುಲ್, ನಿನ್ನ ಜೀವನದ ಸ್ನೇಹಿತ ಅಲ್ಲವೇನೋ ಅವನು....?"
"ಅಮ್ಮಾ ಹೊಟ್ಟೆ ಬಹಳ ಕೆಟ್ಟದ್ದು. ನನ್ನನ್ನು ಎಲ್ಲೋ ಎಳೆದು

Sri Vidyabharathi Book Centre, Sringeri

CC-O. In Public Domain. Digitized by eGangotri

ತಂದಿದೆ. ಆತನೂ ಹೊಟ್ಟೆಯ ಕಡೆಗೆ ಮುಖಮಾಡಿ ಹೋಗಿರಲು ಸಾಕು...."

ಗಂಗಾನಲ್ಲಿ ನೇತ್ರಗಂಗೆ !

"ಹೋಗಲಿ ಅಬ್ದುಲ್ ನೀನು ಏನು ಮಾಡುತ್ತಿದ್ದೀಯಾ !"

ಅಬ್ದುಲ್ ಹೇಳಿದ : "ಅಮ್ಮಾ ಇಲ್ಲಿ ಬಂದ ಕ್ಷೇತ್ರಸ್ಥರಿಗಾಗಿ ಇರುವ ಆಫೀಸಿಗೆ ಅದರ ಡ್ರೈವರ್ ನಾನು.

ಈಗ ನೀವು ನನ್ನ ಜತೆ ಬನ್ನಿ. ನಿಮಗೆ ಸ್ನಾನ, ಪೂಜೆ ಎಲ್ಲದಕ್ಕೂ ಅನುಕೂಲಮಾಡಿಕೊಡುವೆ."

'ಕಾಶಿಯಲ್ಲಿ ವಿಶ್ವೇಶ್ವರ ಇದ್ದದ್ದು ಸುಳ್ಳಲ್ಲ.' ಗಂಗಾ ಮೂಕಳಾಗಿ ಅಬ್ದುಲ್‌ನ ಜತೆ ನಡೆದಳು. ದಾರಿಯಲ್ಲಿ ಅಬ್ದುಲ್ ಕಾರು ನಿಲ್ಲಿಸಿ ಗಂಗಾನ ಕೈಯಲ್ಲಿ ನೂರು ರೂಪಾಯಿ ಕೊಟ್ಟು, "ಇದು ಕ್ಷೇತ್ರ, ಇಲ್ಲಿ ಎಲ್ಲದಕ್ಕೂ ಹಣ ಬೇಕು. ನಿಮಗೆ ಇದು ಇರಲಿ" ಎಂದ.

ಗಂಗಾ ಮೂಕಳಾದರೂ ಹಣ ಕೈಯಿಂದ ಅದನ್ನು ತೆಗೆದುಕೊಂಡಳು.

ದಕ್ಷಿಣಾಪಥದ ಮುಂದೆ ಕಾರು ನಿಲ್ಲಿಸಿ ಹೊಸ ಗಿರಾಕಿಯನ್ನು ಮೇನೇಜರರಿಗೆ ಒಪ್ಪಿಸಿದ.

ಮೇನೇಜರರೆ ಮೊದಲು ಹದಿನೈದು ರೂಪಾಯಿ ಪ್ರವೇಶ ಫೀ ಕಿತ್ತುಕೊಂಡು ಒಂದು ರೂಂ ಕೊಟ್ಟರು.

ರೂಂನಲ್ಲಿ ಗಂಗಾ ಇರುವಾಗಲೆ ಅಬ್ದುಲ್ ಬಂದು ಹೇಳಿದ. "ಅಮ್ಮಾ ಇಲ್ಲಿ ಎಲ್ಲಕ್ಕೂ ಹಣಬೇಕು. ನಾನು ಈಗಲೆ ಇನ್ನಷ್ಟು ಹಣ ತಂದು ಕೊಡುವೆ. ನೀವು ಬೇಕಾದ ಹಾಗೆ ವೆಚ್ಚಮಾಡಿರಿ."

ಗಂಗಾನಿಗೆ ಅಬ್ದುಲ್‌ನ ವಿಷಯದಲ್ಲಿ ಹಳೆಯ ಪಳಕೆಯ ನೆನಪು.

ಅಬ್ದುಲ್‌ನ ಜತೆಗೆ ಶೀನನದು, ಶೀನನ ಜತೆಗೆ ಅವನೊಡನೆ ಕಳೆದ ದಿನಗಳದು, ಶೀನ ಅಂದು ಮೊದಲಿಗೆ ತನ್ನವನಾದ ನೆನಪಾಯಿತು.

ಶೀನ, ಒಂದು ದಿನ ಅದೇ ಶಾನುಭೋಗರ ರಂಗಣ್ಣನ ಮನೆಯ ಜಗುಲಿಯ ಮೇಲೆ ತಾನಿದ್ದ.

ಕೆಳಗೆ ಅಡುಗೆ ಮಾಡುತ್ತಿದ್ದಳು.

ಒಲೆ ಹೊತ್ತಲಿಲ್ಲ, ಊದಿ ಬೇಸತ್ತಿದ್ದಳು.

ಶೀನ ಜಗುಲಿಯ ಮೇಲೆ—

ಸಹಸ್ರ ಶೀರ್ಷ ಹೇಳುತ್ತಿದ್ದ

Sri Vidyabharathi Book Centre, Sringeri

ಸಹಸ್ರಶೀರ್ಷಃ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್....

CC-O. In Public Domain. Digitized by eGangotri

ಸತ್ಯಕಾಮ ಅವರ ಇತರ ಕೃತಿಗಳು

1	ಪಂಚ'ಮ'ಗಳ ನಡುವೆ	ರೂ 12-00
2	ಶೃಂಗಾರ ತೀರ್ಥ	8-00
3	ವಿ-ಪ್ರಯೋಗ	6-00

ಬಿ. ಜಿ. ಎಲ್. ಸ್ವಾಮಿಯವರ ಕೃತಿಗಳು

1	ತಮಿಳು ತಲೆಗಳ ನಡುವೆ	ರೂ 10-00
2	ಪ್ರಾಧ್ಯಾಪಕನ ಪೀಠದಲ್ಲಿ	10-00

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಗಂಗಾ !! ಕದಡದ ನೀರು ತಿಳಿಯಾಗಿದ್ದ ಮನಸ್ಸು ಬೆಳೆಯುತ್ತಿದ್ದ ಮೈ.

ಪ್ರಕೃತಿ ಸಹಜವಾದ ತರಂಗಗಳು—ತಿಳಿಯಾಗಿದ್ದ ಮನಸ್ಸನ್ನು ಕಲಕಿದ್ದು ಹೊಳೆಯುತ್ತಿದ್ದ ಮೈಯನ್ನೂ ಕುಲುಕಿದ್ದು.

ಗಂಡನೆಂಬ ಪ್ರಾಣಿಯನ್ನು ಕಾಣದೇ ಕೆಂಪು ಮುಸುಕು ಮುಚ್ಚಿದ್ದು ತಲೆಯಲ್ಲಿ ಕಾಡುತ್ತಿದ್ದ ಕಾವುಗಳು ಮೈ ಬೇಡುತ್ತಿದ್ದ ತಂಪುಗಳು.

ಬಳಲಿ ಬಸವಳಿಯುತ್ತಿದ್ದ ಬಳ್ಳಿಗೆ ಬೇಕಿದ್ದ ಆಸರೆ—"ಸಹಸ್ರ ಶೀರ್ಷಾ ಪುರುಷಃ" ಆಚಾರಿ ಶೀನನೇ ಆದ.

ಮುಗಿಯಿತೇ ಗಂಗಾ ಪ್ರವಾಹ ? ಕಿಲುಬುಗಟ್ಟಿದ್ದ ಧರ್ಮಸಂಕೋಲೆಗೆ ಮತ್ತೆ ಮೆರಗು—ಹರಿಕತೆಯ ಗುರುವಿನಲ್ಲಿ.

ಕಡೆಗೆ ಧರ್ಮಸಂಸ್ಥಾಪನೆ ಆಯಿತೇ ?

ಗಂಗಾ ಕಡಲನ್ನು ಸೇರಿತೇ ?

'ಪುರುಷ' ಸೂಕ್ತವಾಯಿತೇ ?

IBH

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

Sri Vidyabharathi Book Centre, Sringeri